ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

ಮಂಗಳವಾರ, ಫೆಬ್ರವರಿ 06, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 265 RNI : 27369/75

janathavani@mac.com
www.janathavani.com
08192 254736 91642 99999

## ದಾವಣಗೆರೆ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ

### ಬಿ.ಸಿ. ಉಮಾಪತಿ – ಕೋಗುಂಡಿ ಬಕ್ಕೇಶಪ್ಪ ಗುಂಪಿಗೆ ಬೆಂಬಲ



ಶ್ರೀ ಬಿ.ಸಿ. ಉಮಾಪತಿಯವರು

ಮಾನ್ಯ ಷೇರುದಾರರಲ್ಲಿ ವಿನಂತಿ.


ದಿನಾಂಕ 11.02.2024ರ ಭಾನುವಾರ ನಡೆಯಲಿರುವ ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನ ಚುನಾವಣೆಗೆ ಸ್ಪರ್ಧಿಸಿರುವ **ಶ್ರೀ ಬಿ.ಸಿ. ಉಮಾಪತಿ** ಮತ್ತು **ಶ್ರೀ ಕೋಗುಂಡಿ ಬಕ್ಕೇಶಪ್ಪ** ಅವರುಗಳ ನೇತೃತ್ವದ ಗುಂಪನ್ನು ನಾವು ಬೆಂಬಲಿಸಿದ್ದೇವೆ. ಬ್ಯಾಂಕಿನ ಅಭ್ಯುದಯಕ್ಕಾಗಿ ನಂಬಿಕಾರ್ಹ, ದಕ್ಷ ಆಡಳಿತಕ್ಕೆ ಶ್ರೀ ಬಿ.ಸಿ. ಉಮಾಪತಿ ಮತ್ತು ಶ್ರೀ ಕೋಗುಂಡಿ ಬಕ್ಕೇಶಪ್ಪ ಅವರುಗಳ ನೇತೃತ್ವದ ಗುಂಪಿಗೆ ಬೆಂಬಲಿಸಿ, ನಾವು ನಮ್ಮ ನಾಮಪತ್ರಗಳನ್ನು ಹಿಂಪಡೆದಿದ್ದೇವೆ. ಅವರ ಗುಂಪಿನ ಎಲ್ಲಾ 10 ಜನರಿಗೆ ಮತದಾನ ಮಾಡುವುದರ ಮೂಲಕ ಆಯ್ಕೆ ಮಾಡುವಂತೆ ಈ ಮೂಲಕ ತಮ್ಮಲ್ಲಿ ವಿನಂತಿಸುತ್ತೇವೆ.



ಬಾದಾಮಿ ಜಯಣ್ಣ



ಸ್ವರೂಪ್ ವಿ. ಅಂಗಡಿ



ಎಂ.ವಿ. ಸಂತೋಷ್‌ಕುಮಾರ್



ಎಂ.ಜೆ. ಗಿರೀಶ್




ಶ್ರೀಮತಿ ಎಸ್.ಎಸ್. ಮೀನಾಕ್ಷಿ



ಶ್ರೀಮತಿ ಎಂ.ಎಂ. ಜಯಶೀಲ



ಹೆಚ್.ಆರ್. ನಿಂಗರಾಜು



ಎನ್.ಕೆ. ಕೊಟ್ರೇಶ್



ಶ್ರೀ ಕೋಗುಂಡಿ ಬಕ್ಕೇಶಪ್ಪನವರು

## ಸ್ಥಳೀಯರಿಗೆ ಶೇ.75 ಮೀಸಲಾತಿ ಕೇಂದ್ರಕ್ಕೆ ಸುಪ್ರೀಂ ನೋಟಿಸ್




ನವದೆಹಲಿ, ಫೆ. 5 - ಹರಿಯಾಣದಲ್ಲಿ ಸ್ಥಳೀಯರಿಗೆ ಶೇ.75ರಷ್ಟು ಹುದ್ದೆಗಳನ್ನು ಮೀಸಲಿಡುವ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಪ್ರತಿಕ್ರಿಯೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್ ತಿಳಿಸಿದೆ. ಖಾಸಗಿ ವಲಯದಲ್ಲಿ ಶೇ.75ರ ಮೀಸಲಾತಿ ಕಲ್ಪಿಸುವುದು ಸಂವಿಧಾನ ಬಾಹಿರ ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ತಿಳಿಸಿತ್ತು.

ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಹಾಗೂ ಅರವಿಂದ ಕುಮಾರ್ ಅವರನ್ನು ಒಳಗೊಂಡ ಪೀಠ ಈ ವಿಷಯಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ ಹಾಗೂ ಫರೀದಾಬಾದ್ ಕೈಗಾರಿಕಾ ಒಕ್ಕೂಟಗಳಿಗೆ ನೋಟಿಸ್ ಕಳಿಸಿದೆ. ಹೈಕೋರ್ಟ್ ತೀರ್ಪು ಪ್ರಶ್ನಿಸಿ, ಹರಿಯಾಣ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದೆ.

ಮೀಸಲಾತಿ ಕಲ್ಪಿಸಲು ಹರಿಯಾಣ ಸರ್ಕಾರ 2020ರಲ್ಲಿ ಕಾಯ್ದೆ ಜಾರಿಗೆ ತಂದಿತ್ತು. ಆದರೆ, ಹೈಕೋರ್ಟ್ ಈ ಮೀಸಲಾತಿ ಕಾಯ್ದೆಯನ್ನು ಜಾರಿಗೆ ಬಂದ ದಿನದಿಂದಲೇ ಅಸಿಂಧು ಎಂದು ತಿಳಿಸಿತ್ತು. ಹರಿಯಾಣ ಸರ್ಕಾರ ಜಾರಿಗೆ ತಂದ ಕಾಯ್ದೆಯನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಹಲವಾರು ಅರ್ಜಿಗಳನ್ನು ದಾಖಲಿಸಲಾಗಿತ್ತು. ತಿಂಗಳಿಗೆ 30 ಸಾವಿರ ರೂ. ವರೆಗಿನ ವೇತನ ಪಡೆಯುವ ಹುದ್ದೆಗಳಲ್ಲಿ ಶೇ.75ನ್ನು ಸ್ಥಳೀಯರಿಗೆ ಮೀಸಲಿಡಲಾಗಿತ್ತು.

## ಎ.ಬಿ. ನಾಗರಾಜ್ ನಿಧನ



ದಾವಣಗೆರೆ ನಿಟ್ಟುವಳ್ಳಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಹತ್ತಿರದ ವಾಸಿ ಭದ್ರಾ ಸಕ್ಕರೆ ಕಾರ್ಖಾನೆ ಹಾಗೂ ಶಾಮನೂರು ಶುಗರ್ಸ್ ಲಿ.ನಲ್ಲಿ ಸಿವಿಲ್ ಇಂಜಿನಿಯರ್ ಆಗಿ ಕಾರ್ಯ ನಿರ್ವಹಿಸಿದ್ದ **ಎ.ಬಿ. ನಾಗರಾಜ್** ಇವರು ದಿನಾಂಕ 05.02.2024ರ ಸೋಮವಾರ ರಾತ್ರಿ 10 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 80 ವರ್ಷ ವಯಸ್ಸಾಗಿತ್ತು. ಪತ್ನಿ ಪ್ರೇಮ, ಸಹೋದರರು, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 06.02.2024ರ ಮಂಗಳವಾರ ಮಧ್ಯಾಹ್ನ 1.30ಕ್ಕೆ ನಗರದ ಗ್ಲಾಸ್ ಹೌಸ್ ಹಿಂಭಾಗದ ಶಾಮನೂರು ರುದ್ರಭೂಮಿಯಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ, ಮೊ : 99721 88887

## ದಿ ದಾವಣಗೆರೆ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ.

### ಆಡಳಿತ ಮಂಡಳಿ ಚುನಾವಣೆ–2024

ಗುರುತು

ಮಾನ್ಯ ಗೌರವಾನ್ವಿತ ಷೇರುದಾರರಲ್ಲಿ ವಿನಂತಿ,

ದಿನಾಂಕ : 11-02-2024 ರ ಭಾನುವಾರ ನಡೆಯಲಿರುವ ಮೇಲ್ಕಂಡ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ನಮ್ಮೆಲ್ಲರ ಆತ್ಮೀಯರಾದ **ಎಸ್.ವಿ. ಪ್ರಭುಸ್ವಾಮಿ (ವಾಣಿ ಪ್ರಭು) ರವರು** ಚುನಾವಣೆಗೆ ಸ್ಪರ್ಧಿಸಲಿದ್ದಾರೆ



ಆದ ಕಾರಣ ನಿಮ್ಮ ಅತ್ಯಮೂಲ್ಯವಾದ ಒಂದು ಮತವನ್ನು ಇವರಿಗೆ ನೀಡಿ,
ಬ್ಯಾಂಕಿನ ಶ್ರೇಯೋಭಿವೃದ್ಧಿಗಾಗಿ ಹಾಗೂ ಬ್ಯಾಂಕಿನ ಸದಸ್ಯರ ಏಳ್ಗೆಗಾಗಿ ಪ್ರಮಾಣಿಕವಾಗಿ ಶ್ರಮಿಸಲು
ಸದಾವಕಾಶ ಮಾಡಿಕೊಡಬೇಕಾಗಿ ವಿನಂತಿ....

-: ಶುಭಕೋರುವವರು :-

ಎಮ್ಮಿ ಶಿವಯೋಗಿ (ಬಾಬಣ್ಣ), ಐನಳ್ಳಿ ಮಂಜಣ್ಣ, ಹುಂಡೇಕರ್ ನಾಗಭೂಷಣ್
ಹದಡಿ ಕುಮಾರಸ್ವಾಮಿ, ಕಂಚಿನೂಲ್ ರುದ್ರಪ್ಪ, ಹದಡಿ ಕಾಶಿ ವಿಶ್ವನಾಥ್, ಲೆಕ್ಕದ್ ಸಂದೀಪ್,
ನರ್ಮದಾ ಸ್ವಾಮಿ, ದರ್ಶನ್ ಎಮ್ಮಿ ಐ ಪಿಕ್ಸಲ್ ಫೋ ರೂಂ
ಅವಿನಾಶ್, ವಿಜಯ್, ನವೀನ್, ಅಭಿಷೇಕ್, ಶಶಿಕಾಂತ್,

ತಮ್ಮ ಸೇವಾಕಾಂಕ್ಷಿ

| | | | |
|---|---|---|---|
| 13 | ಪ್ರಭುಸ್ವಾಮಿ ಎಸ್.ವಿ. | | |

ವಿಶೇಷ ಸೂಚನೆ : ಬ್ಯಾಂಕಿನ ಷೇರುದಾರರು ಕಡ್ಡಾಯವಾಗಿ ಐಡಿ ಕಾರ್ಡ್‌ಮಾಡಿಸಿ ಕೊಳ್ಳತಕ್ಕದ್ದು, ಬ್ಯಾಂಕಿನ ಸಮಯದಲ್ಲಿ ಮುಖ್ಯ ಶಾಖೆಯಲ್ಲಿಕೇವಲ 5 ನಿಮಿಷದಲ್ಲಿ ಐಡಿ ಕಾರ್ಡ್‌ನ್ನು ಮಾಡಿಕೊಡುತ್ತಾರೆ.

## ದಿ ದಾವಣಗೆರೆ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ

### ಬ್ಯಾಂಕಿನ ಷೇರುದಾರರು / ಮತದಾರರಾದ ತಮ್ಮಲ್ಲಿ ಜಯಪ್ರಕಾಶ್ ಎಂ. ವಿ. ಮಾಡುವ ನಮಸ್ಕಾರಗಳು

ಮಾನ್ಯರೆ, ದಿನಾಂಕ 11–02–2024 ರ ಭಾನುವಾರ ಬ್ಯಾಂಕಿನ ಚುನಾವಣೆ ನಡೆಯಲಿದ್ದು ನಾನು ಈ ಚುನಾವಣೆಯಲ್ಲಿ ಸಾಮಾನ್ಯ ಕ್ಷೇತ್ರದಿಂದ ಸ್ಪರ್ಧಿಸಿದ್ದು ತಮ್ಮಗಳ ಸೇವೆ ಮಾಡಲು ಅವಕಾಶ ನೀಡ ಬೇಕಾಗಿ ವಿನಂತಿ.

ಸಾಮಾನ್ಯ ಕ್ಷೇತ್ರದ ಅಭ್ಯರ್ಥಿ
ಜಯಪ್ರಕಾಶ್ ಎಂ. ವಿ.


ಆದ್ದರಿಂದ ತಾವುಗಳು ಮತದಾನ ಮಾಡುವಾಗ
ನಿಮ್ಮ ಮತವನ್ನು ನನಗೂ ಒಂದು ನೀಡಿ
ಎಂದು ಪ್ರೀತಿಯಿಂದ ವಿನಮ್ರವಾಗಿ ಕೇಳಿಕೊಳ್ಳುತ್ತೇನೆ.

–: ಇಂತಿ ನಿಮ್ಮ ಸೇವಕ :–

**ಜಯಪ್ರಕಾಶ್ ಎಂ. ವಿ.**
(ಜಯಪ್ರಕಾಶ್ ಮಾಗಿ)

ಮಾಲೀಕರು, ಹರ್ಷ ಕಮರ್ಷಿಯಲ್ಸ್, ಜೆ.ಪಿ. ಎಂಟರ್‌ಪ್ರೈಸಸ್, ರೈಸ್ ಕಾರ್ನರ್
ನಿರ್ದೇಶಕರು, ದಾವಣಗೆರೆ ಜಿಲ್ಲಾ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ
ಅಧ್ಯಕ್ಷರು, ಚೌಕಿಪೇಟೆ ಅಕ್ಕಿ ವರ್ತಕರ ಸಂಘ, ದಾವಣಗೆರೆ.
ಹಿಂದೂ ಮಹಾಗಣಪತಿ ಟ್ರಸ್ಟ್, ದಾವಣಗೆರೆ.

Mob : 9449807696, 72594 067696



ಚುನಾವಣೆ 2024 :–
ಸಾಮಾನ್ಯ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದೇನೆ

ದಿನಾಂಕ : 11–02–2024 ರ ಭಾನುವಾರ
ಸಮಯ : ಬೆಳಗ್ಗೆ 09 ರಿಂದ ಸಂಜೆ 04 ರವರೆಗೆ
ಸ್ಥಳ : ಮೋತಿ ವೀರಪ್ಪ ಕಾಲೇಜು ಆವರಣ.

| ಕ್ರಮ ಸಂಖ್ಯೆ | ಅಭ್ಯರ್ಥಿಯ ಹೆಸರು | ಚಿಹ್ನೆ | |
|---|---|---|---|
| 8 | ಜಯಪ್ರಕಾಶ್ ಎಂ. ವಿ. | | |

"ಮತ ನಿಮ್ಮದು ಸೇವೆ ನನ್ನದು"

## ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಚುನಾವಣೆ

### ಮಾನ್ಯ ಗೌರವಾನ್ವಿತ ಷೇರುದಾರರಲ್ಲಿ ವಿನಂತಿ

ಸುಮಾರು 62 ವರ್ಷಗಳ ಇತಿಹಾಸವಿರುವ ನಮ್ಮ ಬ್ಯಾಂಕಿಗೆ ಸಹಕಾರಿ ತತ್ವದ ಆಧಾರದ ಮೇಲೆ ಹಾಲಿ ಕಾರ್ಯನಿರ್ವಾಹಕ ಮಂಡಳಿ ಸದಸ್ಯರು ಬ್ಯಾಂಕಿನ ಅಭಿವೃದ್ಧಿಗೆ ಸೇವೆ ಸಲ್ಲಿಸುವುದರ ಮೂಲಕ ಬ್ಯಾಂಕಿನ ಪ್ರಗತಿಗೆ ಕಾರಣೀಕರ್ತರಾಗಿದ್ದಾರೆ.
ಈಗ ಹಾಲಿ ಕಾರ್ಯನಿರ್ವಾಹಕ ಮಂಡಳಿ ಸದಸ್ಯರು
ಶ್ರೀ ಬಿ.ಸಿ.ಉಮಾಪತಿಯವರ ಹಾಗೂ ಶ್ರೀ ಕೋಗುಂಡಿ ಬಕ್ಕೇಶಪ್ಪನವರ ನೇತೃತ್ವದಲ್ಲಿ ಮತ್ತೊಂದು ಅವಧಿಗೆ ಸ್ಪರ್ಧೆ ಮಾಡುತ್ತಿದ್ದು, ಸದರಿ ಗುಂಪಿನ ಪ್ರಮುಖ ಆದ್ಯತೆ

* ಬ್ಯಾಂಕಿನ ಭದ್ರತೆ, ಪ್ರಗತಿಗೆ ಸುರಕ್ಷಿತ ಹಾಗೂ ಪಾರದರ್ಶಕ ಆಡಳಿತ ನಿರ್ವಹಣೆ.
* ಬ್ಯಾಂಕಿನ ಠೇವಣಿಯ ಪ್ರಗತಿ ಹಾಗೂ ಠೇವಣಿದಾರರ ರಕ್ಷಣೆ.
* ಬ್ಯಾಂಕಿನ ಆಸ್ತಿಗಳ ಕಾಪಾಡುವಿಕೆ.
* ಬ್ಯಾಂಕಿನಿಂದ ನೀಡಿರುವ ಸಾಲಗಳು ಅನುತ್ಪಾದಕ ಸಾಲವಾಗದಂತೆ ನಿರ್ವಹಣೆ.

ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ/ರಾಷ್ಟ್ರದಲ್ಲಿ ಹಲವಾರು ಪ್ರತಿಷ್ಠಿತ ಸಹಕಾರಿ ಬ್ಯಾಂಕುಗಳು ಆಡಳಿತ ಮಂಡಳಿಯ ನಿರ್ವಹಣೆಯ ಅನುಭವದ ಕೊರತೆಯಿಂದ ಆರ್ಥಿಕ ಸಂಕಷ್ಟಕ್ಕೀಡಾಗಿರುತ್ತವೆ. ಬ್ಯಾಂಕಿನ ಚುನಾವಣೆಯಲ್ಲಿ ಅನುಭವವಿಲ್ಲದವರು ಚುನಾಯಿತರಾಗಿ ಆಡಳಿತಕ್ಕೆ ಬಂದರೆ ಬ್ಯಾಂಕಿಗೆ ಅಭದ್ರತೆ ಕಾಡುತ್ತದೆ. ಬ್ಯಾಂಕಿನ ಭದ್ರತೆಯ ದೃಷ್ಟಿಯಿಂದ ಮಾನ್ಯ ಬ್ಯಾಂಕಿನ ಸದಸ್ಯರು ಈ ಬಗ್ಗೆ ಬಹಳ ಜಾಗರೂಕತೆಯಿಂದ ಅನುಭವವುಳ್ಳ, ಬ್ಯಾಂಕಿನ ಅಭಿವೃದ್ಧಿಯ ಗುಂಪಿನ ಪರ ಮತದಾನ ಮಾಡುವುದು ಸೂಕ್ತವಾಗಿರುತ್ತದೆ.

ಬ್ಯಾಂಕಿನ ಷೇರುದಾರರಾದ
❖ ಬಾದಾಮಿ ಮಲ್ಲಿಕಾರ್ಜುನಪ್ಪ
❖ ಟಿ.ಜೆ. ಸುರೇಶ್
❖ ಪುಟ್ಟಪ್ಪ ಕಾಶೀಪುರ

ಸೋಗಿ ಶಾಂತಕುಮಾರ
ಬ್ಯಾಂಕಿನ ಷೇರುದಾರರು ಹಾಗೂ ಮಹಾನಗರ ಪಾಲಿಕೆ ಸದಸ್ಯರು ದಾವಣಗೆರೆ

ಬಿ.ಸಿ. ಉಮಾಪತಿ – ಕೋಗುಂಡಿ ಬಕ್ಕೇಶಪ್ಪ ಗುಂಪಿಗೆ ಬೆಂಬಲಿಸಿ

## ಕುಡಿಯುವ ನೀರಿನ ಸಮಸ್ಯೆ ಶಾಶ್ವತ ಪರಿಹಾರಕ್ಕೆ ಮನವಿ

ದಾವಣಗೆರೆ, ಫೆ.5- ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲು ಆದ್ಯತೆ ನೀಡುವಂತೆ ಮಹಾನಗರ ಪಾಲಿಕೆ ಸದಸ್ಯರ ನಿಯೋಗವು ಜಿಲ್ಲಾಧಿಕಾರಿಗಳಿಗೆ ಸೋಮವಾರ ಮನವಿ ಸಲ್ಲಿಸಿದೆ.

ನಗರದಲ್ಲಿ ಕಳೆದ 15 ದಿನಗಳಿಂದ ಕುಡಿಯುವ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಿದೆ. ಕೆಲ ವಾರ್ಡ್‌ಗಳಲ್ಲಿ 10-11 ದಿನಗಳಾದರೂ ನೀರು ಪೂರೈಕೆಯಾಗುತ್ತಿಲ್ಲ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ.

ಬಾತಿಯಲ್ಲಿರುವ ಪಂಪ್‌ಹೌಸ್‌ಗೆ ನಿರಂತರ ವಿದ್ಯುತ್ ಸರಬರಾಜಾಗದಿರುವುದು ಸಮಸ್ಯೆ ಉಲ್ಬಣಕ್ಕೆ ಕಾರಣವಾಗಿದೆ. ಈ ಹಿನ್ನೆಲೆಯಲ್ಲಿ ನಿರಂತರ ವಿದ್ಯುತ್ ಪೂರೈಕೆಗೆ ಬೆಸ್ಕಾಂ ಇಲಾಖೆಗೆ ನಿರ್ದೇಶಿಸಬೇಕು. ಬೇಸಿಗೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಸಮರ್ಪಕ ನೀರು ಪೂರೈಕೆಗೆ ಕ್ರಮ ಕೈಗೊಳ್ಳುವಂತೆ ಪಾಲಿಕೆಗೆ ಸೂಚಿಸಬೇಕು.ಈ ಹಿಂದೆ ಕಾರ್ಯಾದೇಶ ನೀಡಿದ ಹರಿಹರ ವಿದ್ಯಾನಗರದ ಸಬ್ ಸ್ಟೇಷನ್‌ನಿಂದ ಬಾತಿ ಪಂಪ್‌ಹೌಸ್‌ವರೆಗೆ ಮತ್ತು ಕೋಡಿಯಾಲ್-ಹೊಸಪೇಟೆಯಿಂದ ರಾಜನಹಳ್ಳಿ ಪಂಪ್‌ಹೌಸ್ ವರೆಗೆ ಎಕ್ಸ್‌ಪ್ರೆಸ್ ಫೀಡರ್ ಅಳವಡಿಸುವ ಕಾಮಗಾರಿ ನಿಂತು ಹೋಗಿದ್ದು, ಈ ಸಮಸ್ಯೆ ಬಗೆಹರಿಸುವಂತೆ ಪಾಲಿಕೆ ವಿರೋಧ ಪಕ್ಷದ ನಾಯಕ ಕೆ.ಪ್ರಸನ್ನಕುಮಾರ್ ನೇತೃತ್ವದ ನಿಯೋಗ ಜಿಲ್ಲಾಧಿಕಾರಿಗಳಿಗೆ ಒತ್ತಾಯಿಸಿತು.

ಈ ವೇಳೆ ಪಾಲಿಕೆ ಮಾಜಿ ಮೇಯರ್ ಎಸ್.ಟಿ. ವೀರೇಶ್, ಪಾಲಿಕೆ ಸದಸ್ಯರಾದ ಆರ್. ಶಿವಾನಂದ್, ಸೋಗಿ ಶಾಂತಕುಮಾರ್, ಶಿವಪ್ರಕಾಶ್ ಮುಖಂಡರಾದ ಯೋಗೀಶ್, ಜಯಪ್ರಕಾಶ್, ಶ್ರೀನಿವಾಸ್, ಸಂತೋಷ್ ಜಾಧವ್, ಯುವ ಮುಖಂಡರಾದ ವಿನಯ್ ದಿಳ್ಯಪ್ಪ ಉಪಸ್ಥಿತರಿದ್ದರು.



## ಮಲೇಬೆನ್ನೂರಿಗೆ ಮಾನವ ತ್ಯಾಜ್ಯ ನಿರ್ವಹಣಾ ಘಟಕ ಮಂಜೂರು

### ಬಜೆಟ್ ಪೂರ್ವಭಾವಿ ಸಭೆಯಲ್ಲಿ ಪುರಸಭೆ ಮುಖ್ಯಾಧಿಕಾರಿ ಸುರೇಶ್ ಹೇಳಿಕೆ



ಮಲೇಬೆನ್ನೂರು, ಫೆ.5- ಪಟ್ಟಣಕ್ಕೆ ಮಾನವ ತ್ಯಾಜ್ಯ ನಿರ್ವಹಣಾ ಘಟಕ ಮಂಜೂರಾಗಿದ್ದು, ಅದಕ್ಕಾಗಿ 4 ಕೋಟಿ ರೂ. ಅನುದಾನ ಮೀಸಲಿದೆ. ಆದರೆ, ಘಟಕ ನಿರ್ಮಾಣಕ್ಕೆ 2 ಎಕರೆ ಜಾಗ ಸಿಗುತ್ತಿಲ್ಲ ಎಂದು ಪುರಸಭೆ ಮುಖ್ಯಾಧಿಕಾರಿ ಎ. ಸುರೇಶ್ ಹೇಳಿದರು.

ಅವರು, ಸೋಮವಾರ ಇಲ್ಲಿನ ಪುರ ಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಪುರ ಸಭೆಯ 2024-25ನೇ ಸಾಲಿನ ಆಯ-ವ್ಯಯವನ್ನು ತಯಾರಿಸುವ ಕುರಿತು ಹಮ್ಮಿಕೊಂಡಿದ್ದ 1ನೇ ಹಂತದ ಪೂರ್ವಭಾವಿಯಾಗಿ ಸಾರ್ವಜನಿಕ ಸಮಾಲೋಚನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಘಟಕದ ಜೊತೆಗೆ ವಾಹನ ಖರೀದಿಗೂ 40 ಲಕ್ಷ ರೂ.ಗಳನ್ನು ಸರ್ಕಾರ ಮೀಸಲಿಟ್ಟಿದೆ. 2 ಎಕರೆ ಜಾಗವನ್ನು ನಾವು - ನೀವು ಸೇರಿ ನಿಗದಿ ಮಾಡಿದರೆ, ಆ ಜಾಗಕ್ಕೆ ಸರ್ಕಾರ ಹಣವನ್ನೂ ನೀಡುತ್ತದೆ.

ಒಳಚರಂಡಿ ವ್ಯವಸ್ಥೆಗೆ 12 ಎಕರೆ ಜಾಗ ಬೇಕಾಗುತ್ತದೆ ಎಂದು ಪುರಸಭೆ ಸದಸ್ಯ ನಯಾಜ್ ಅವರ ಪ್ರಶ್ನೆಗೆ ಸುರೇಶ್ ಉತ್ತರಿಸಿದರು. ಇದಕ್ಕೂ ಮುನ್ನ ಮಾತನಾಡಿದ ನಯಾಜ್ ಅವರು, ಪಟ್ಟಣದ ಚರಂಡಿ ನೀರು ನಿಟ್ಟೂರು ರಸ್ತೆ ಪಕ್ಕದ ಕಾಲುವೆಯಲ್ಲಿ ಹರಿಯುತ್ತಿದೆ. ಇದರಿಂದ ಮಾಲಿನ್ಯ ಉಂಟಾಗಿ ರೋಗ-ರುಜಿನಗಳು ಹರಡುವ ಸಾಧ್ಯತೆ ಇರುತ್ತದೆ. ಹಾಗಾಗಿ ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆ ಅಥವಾ ಚರಂಡಿ ನೀರನ್ನು ಶುದ್ಧೀಕರಿಸಿ, ಬೀಡುವ ವ್ಯವಸ್ಥೆಯನ್ನು ಬಜೆಟ್‌ನಲ್ಲಿ ಪ್ರಾಸ್ತಾಪಿಸಿ ಎಂದು ಹೇಳಿದ್ದರು.

ಸಭೆಯ ಆರಂಭದಲ್ಲಿ ಬಳೆಗಾರ್ ರಾಜಣ್ಣ ಅವರು, 2ನೇ ವಾರ್ಡ್‌ನಲ್ಲಿ ಕುಡಿಯುವ ನೀರಿನ ಸಮಸ್ಯೆ ಹೆಚ್ಚಾಗಿದ್ದು, ಮೊದಲು ನೀರು ಪೂರೈಸುವ ಬಗ್ಗೆ ಗಮನ ಹರಿಸಿ ಮತ್ತು ಹೊಸ ಚರಂಡಿಗಳನ್ನು ನಿರ್ಮಿಸಿ ಎಂದರು.

ಬಿ.ಚಂದ್ರಪ್ಪ ಮಾತನಾಡಿ, ಬಜೆಟ್ ಪೂರ್ವಭಾವಿ ಸಭೆಯ ಬಗ್ಗೆ ಪಟ್ಟಣದ ಜನತೆಗೆ ತಿಳಿದಿಲ್ಲ. ಈ ಬಗ್ಗೆ ಹೆಚ್ಚು ಪ್ರಚಾರ ಆಗಿಲ್ಲ. ಹಾಗಾಗಿ ಸಭೆಗೆ ಜನ ಬಂದಿಲ್ಲ ಎಂದು ಹೇಳಿ, 2ನೇ ವಾರ್ಡ್‌ನಲ್ಲಿ ತಕ್ಷಣ ಬೋರ್ ಕೊರೆಸಿ ನೀರು ಕೊಡಿ ಎಂದು ಆಗ್ರಹಿಸಿದರು.

ಪುರಸಭೆ ಸದಸ್ಯ ಗೌಡ್ರ ಮಂಜಣ್ಣ ಮಾತನಾಡಿ, ಎ.ಕೆ.ಕಾಲೋನಿಯಿಂದ ಜ್ಯೋತಿ ಟಾಕೀಸ್ ಮುಂಭಾಗದ ಮೂಲಕ ಭದ್ರಾ ಚಾನಲ್‌ವರೆಗಿನ ರಸ್ತೆಯನ್ನು ಸಿಸಿ ರಸ್ತೆಯನ್ನಾಗಿ ಮಾಡಲು ಬಜೆಟ್‌ನಲ್ಲಿ ಅನುದಾನ ಮೀಸಲಿಡಿ ಎಂದರು.

ಸದಸ್ಯ ದಾದಾಪೀರ್ ಅವರು, ಪೌರ ಕಾರ್ಮಿಕರ ಕೊರತೆಯಿಂದಾಗಿ ಪಟ್ಟಣದಲ್ಲಿ ನಿರೀಕ್ಷಿತ ಪ್ರಮಾಣದಲ್ಲಿ ಸ್ವಚ್ಛತೆ ಆಗುತ್ತಿಲ್ಲ. ಪೌರ ಕಾರ್ಮಿಕರ ನೇಮಕಕ್ಕೆ ಗಮನ ಹರಿಸಿ ಎಂದರು.

ಸದಸ್ಯ ಖಲೀಲ್ ಅವರು, ಪಟ್ಟಣದ ಮುಖ್ಯ ರಸ್ತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬೀದಿ ದೀಪಗಳನ್ನು ಅಳವಡಿಸಿ ಎಂದರೆ, ಚಮನ್ ಷಾ ಅವರು, ಪಟ್ಟಣದ ಎಲ್ಲಾ ಚರಂಡಿಗಳನ್ನು ಸಿಸಿ ಚರಂಡಿಗಳನ್ನಾಗಿ ಮಾಡಲು ಬಜೆಟ್‌ನಲ್ಲಿ ಆದ್ಯತೆ ಕೊಡಿ ಎಂದರು.

ಕಣ್ಣಾಳ್ ಹನುಮಂತಪ್ಪ ಮಾತನಾಡಿ, ಪಶು ಆಸ್ಪತ್ರೆಯ ಜಾಗವನ್ನು ಸ್ವಚ್ಛಗೊಳಿಸಿ, ಹೊಸ ಕಾಂಪೌಂಡ್ ನಿರ್ಮಿಸುವಂತೆ ಮನವಿ ಮಾಡಿದರು.

ಆಶ್ರಯ ಸಮಿತಿ ಸದಸ್ಯ ಫಕ್ರುದ್ದೀನ್ ಅವರು, ಪಟ್ಟಣದಲ್ಲಿ ತುರ್ತು ಸೇವೆಗಾಗಿ ಅಗ್ನಿ ಶಾಮಕ ಕಚೇರಿ ಆರಂಭಿಸುವಂತೆ ಸರ್ಕಾರಕ್ಕೆ ಪತ್ರ ಬರೆಯಿರಿ ಮತ್ತು ಪಟ್ಟಣದ ಸಾರ್ವಜನಿಕ ಸ್ಥಳಗಳಲ್ಲಿ ಉಚಿತ ವೈಫೈ ಸೌಲಭ್ಯ ಕಲ್ಪಿಸಿ ಎಂದು ಮನವಿ ಮಾಡಿದರು.

ಕೆ.ಪಿ.ಗಂಗಾಧರ್, ಭೋವಿ ಕುಮಾರ್, ಯುಸೂಫ್, ಬಿ.ಸುರೇಶ್, ಸಾಬೀರ್ ಅಲಿ ಮತ್ತಿತರರು ಪಟ್ಟಣದ ವಿವಿಧ ಸಮಸ್ಯೆಗಳನ್ನು ಸಭೆಯ ಗಮನಕ್ಕೆ ತಂದರು.

ಈ ಎಲ್ಲಾ ಅಭಿಪ್ರಾಯ ಹಾಗೂ ಬೇಡಿಕೆಗಳಿಗೆ ಉತ್ತರಿಸಿ ಮಾತನಾಡಿದ ಪುರಸಭೆ ಮುಖ್ಯಾಧಿಕಾರಿ ಸುರೇಶ್ ಅವರು, ಸಭೆಯಲ್ಲಿ ಕೇಳಿ ಬಂದ ಮನವಿಗಳನ್ನು ಆದ್ಯತೆ ಮೇರೆಗೆ ಮತ್ತು ಅನುದಾನದ ಆಧಾರದ ಮೇಲೆ ಕಾಮಗಾರಿಗಳನ್ನು ಬಜೆಟ್‌ನಲ್ಲಿ ಸೇರಿಸಲಾಗುವುದೆಂದರು.

ಪಟ್ಟಣದ ಜನಸಂಖ್ಯೆಗೆ ಅನುಗುಣವಾಗಿ 40 ಪೌರ ಕಾರ್ಮಿಕರ ಅಗತ್ಯವಿದ್ದು, ಈಗ 17 ಪೌರ ಕಾರ್ಮಿಕರು ಮಾತ್ರ ಇದ್ದಾರೆ. ಪೌರ ಕಾರ್ಮಿಕರ ನೇಮಕಕ್ಕೆ ಸರ್ಕಾರದ ಒಪ್ಪಿಗೆಬೇಕು. ಚರಂಡಿಗಳ ಸ್ವಚ್ಛತೆಗೆ ಜೆಸಿಬಿ ಬಳಸಿದರೆ, ಚರಂಡಿಗಳು ಹಾಳಾಗುತ್ತವೆ. ಆದ್ದರಿಂದ ಕೂಲಿ ಕಾರ್ಮಿಕರಿಂದಲೇ ಸ್ವಚ್ಛಗೊಳಿಸುತ್ತೇವೆ ಎಂದರು.

ಪಟ್ಟಣದ ಹೊರ ವಲಯಗಳಲ್ಲಿ ಸ್ವಾಗತ ಹಾಗೂ ವಂದನೆ ಫಲಕಗಳನ್ನು ಶೀಘ್ರವೇ ಹಾಕುವುದಾಗಿ ಸುರೇಶ್ ತಿಳಿಸಿದರು.

ಬಾಪೂಜಿ ಹಾಲ್ ಅಭಿವೃದ್ಧಿಗೆ ತಾಂತ್ರಿಕ ತೊಂದರೆ ಇದ್ದು, ಈ ಬಗ್ಗೆ ಸರ್ಕಾರದಿಂದಲೇ ನಮಗೆ ಒಪ್ಪಿಗೆ ಸಿಗಬೇಕೆಂದು ಸ್ಪಷ್ಟಪಡಿಸಿದ ಮುಖ್ಯಾಧಿಕಾರಿ ಸುರೇಶ್ ಅವರು, ಪಶು ಆಸ್ಪತ್ರೆ ಆವರಣದಲ್ಲಿರುವ ಸ್ವಲ್ಪ ಜಾಗವನ್ನು ಸಾರ್ವಜನಿಕ ಶೌಚಾಲಯ ನಿರ್ಮಾಣಕ್ಕೆ ಕೇಳಿದ್ದೇವೆ.

ನಂದಿಗುಡಿ ರಸ್ತೆ ಇದೀಗ ಜಿಲ್ಲಾ ಮುಖ್ಯರಸ್ತೆಯಿಂದ ರಾಜ್ಯ ಹೆದ್ದಾರಿಯಾಗಿ ಮೇಲ್ದರ್ಜೆಗೆ ಏರಿದ್ದು, ರಸ್ತೆ ಅಕ್ಕ-ಪಕ್ಕದಲ್ಲಿ ಶೆಡ್‌ಗಳನ್ನು ಇಡುವ ಬಗ್ಗೆ ಶಾಸಕರ ಸಮ್ಮುಖದಲ್ಲಿ ಚರ್ಚೆಯಾಗಿದೆ. ಈ ಬಗ್ಗೆ ಸದ್ಯದಲ್ಲೇ ತೀರ್ಮಾನ ಮಾಡುತ್ತೇವೆ ಎಂದು ಸುರೇಶ್ ಹೇಳಿದರು.

ಪುರಸಭೆ ಸದಸ್ಯರಾದ ಬೆಣ್ಣೆಹಳ್ಳಿ ಸಿದ್ದೇಶ್, ಬಿ.ಮಂಜುನಾಥ್, ಷಾ ಅಬ್ರಾರ್, ಶಬ್ಬೀರ್ ಖಾನ್, ಓ.ಜಿ.ಕುಮಾರ್, ಆಶ್ರಯ ಸಮಿತಿಯ ಕಣ್ಣಾಳ್ ನಾಗರಾಜ್, ಪಿ. ನಾರಾಯಣಪ್ಪ, ದೊಡ್ಮನಿ ಬಸವರಾಜ್, ಬ್ರುಹಾನ್, ಪಿ.ಹೆಚ್.ಶಿವಕುಮಾರ್, ಪುರಸಭೆ ಅಧಿಕಾರಿಗಳಾದ ಪ್ರಭು, ಮಂಜುನಾಥ್, ನವೀನ್, ಶಿವರಾಜ್, ಇಮ್ರಾನ್ ಮತ್ತಿತರರು ಸಭೆಯಲ್ಲಿದ್ದರು.

## ವಸತಿ ಯೋಜನೆ ಕಲ್ಪಿಸಲು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯಿಂದ ಸಿಎಂಗೆ ಮನವಿ



ಹರಿಹರ, ಫೆ.5- ತಾಲ್ಲೂಕಿನ ಕಡ್ಲೆಗೊಂದಿ, ಭಾನುವಳ್ಳಿ ಗ್ರಾಮಗಳ ದಲಿತ, ಹಿಂದುಳಿದ ನಿರ್ವಸತಿಗರಿಗೆ ವಸತಿ ಯೋಜನೆ ಕಲ್ಪಿಸಲು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯಿಂದ ದಾವಣಗೆರೆಗೆ ಆಗಮಿಸಿದ್ದ ಸಿಎಂ ಸಿದ್ಧರಾಮಯ್ಯನವರಿಗೆ ಮನವಿ ಸಲ್ಲಿಸಿದರು.

ಭಾನುವಳ್ಳಿ ಹಾಗೂ ಕಡ್ಲೆಗೊಂದಿ ಗ್ರಾಮದಲ್ಲಿ ಸುಮಾರು ಕುಟುಂಬಗಳು ಮಳೆ, ಗಾಳಿ, ಬಿಸಿಲು, ಚಳಿಯಿಂದ ರಕ್ಷಣೆಯಿಲ್ಲದೆ ಗುಡಿಸಲು, ನೆರಿಕೆ ಮನೆಗಳಲ್ಲಿ ವಾಸಿಸುತ್ತಿದ್ದಾರೆ. ಎರಡು ಗ್ರಾಮಗಳಲ್ಲೂ ಸರ್ಕಾರಿ ಜಾಗ ಇದ್ದು, ಸದರಿ ಸ್ಥಳದಲ್ಲಿ ಕೂಡಲೇ ನಿರ್ವಸತಿಗರಿಗೆ ವಸತಿ ಸೌಲಭ್ಯ ಕಲ್ಪಿಸುವಂತೆ ಜಿಲ್ಲಾ ಹಾಗೂ ತಾಲ್ಲೂಕು ಆಡಳಿತದ ಅಧಿಕಾರಿಗಳಿಗೆ ಸೂಚನೆ ನೀಡಬೇಕೆಂದು ಮನವಿ ಪತ್ರದಲ್ಲಿ ಆಗ್ರಹಿಸಲಾಯಿತು.

ಮನವಿ ಸ್ವೀಕರಿಸಿದ ಸಿಎಂ ರವರು ಸಂಬಂಧಿತ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕೆ ಸೂಚಿಸುವುದಾಗಿ ಭರವಸೆ ನೀಡಿದರು ಎಂದು ಕದಸಂಸ ತಾಲ್ಲೂಕು ಸಂಚಾಲಕ ಪಿ. ಜೆ. ಮಹಾಂತೇಶ್ ಹೇಳಿದರು.

ಈ ಸಂದರ್ಭದಲ್ಲಿ ಕದಸಂಸ ಜಿಲ್ಲಾ ಸಂಚಾಲಕ ಕುಂದುವಾಡ ಮಂಜುನಾಥ್, ಪದಾಧಿಕಾರಿಗಳಾದ ಅಣಜಿ ಹನುಮಂತ, ಎಲೆಕ್ಟ್ರಿಕಲ್ ಮಂಜುನಾಥ, ದೊಡ್ಡಪ್ಪ ಆವರಗೊಳ್ಳ, ಸಿ. ಚೌಡಪ್ಪ, ಕಡ್ಲೆಗೊಂದಿ ತಿಮ್ಮಣ್ಣ, ಲಕ್ಷ್ಮಣ, ಬೇತೂರು ಹನುಮಂತ, ಹಾಲುವರ್ತಿ ಮಹಾಂತೇಶ್, ಶಿವಶಂಕರ್ ಇತರರಿದ್ದರು.

## ಕೊನೆಗೂ ರೈತರ ಕೈ ಹಿಡಿಯದ ಬಜೆಟ್ : ರವೀಂದ್ರಗೌಡ ಬೇಸರ

ರಾಣೇಬೆನ್ನೂರು, ಫೆ.5- ಕೇಂದ್ರ ಸರ್ಕಾರದ ಮೋದಿ ನೇತೃತ್ವದ ಕೊನೆಯ ಬಜೆಟ್‌ನಲ್ಲಾದರೂ ರೈತರ ಸಾಲ ಮನ್ನಾ ಯೋಜನೆ ಘೋಷಿಸುತ್ತಾರೆಂದು ಭಾವಿಸಿದ್ದೆವು, ಆದರೆ ಕೊನೆಗೂ ಮೋದಿ ರೈತರ ಬಗ್ಗೆ ಕರುಣೆ ತೋರಲಿಲ್ಲ ಎಂದು ರೈತ ಮುಖಂಡ ರವೀಂದ್ರಗೌಡ ಎಫ್. ಪಾಟೀಲ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ರಾಜ್ಯದ 28 ಸಂಸದರು ದೇಶದ 544 ಸಂಸತ್ ಸದಸ್ಯರು ಮೋದಿ ಎದುರು ನಿಂತು ರೈತರ ಬವಣೆಯ ಬಗ್ಗೆ ಮಾತನಾಡದಷ್ಟು ಅಸಮರ್ಥರಾದದ್ದು ನಮ್ಮ ದೇಶದ ದುರ್ದೈವ, ಅದು ಹೋಗಲಿ ಕನಿಷ್ಠ ಬೆಂಬಲ ಬೆಲೆಯನ್ನು ರೈತರು ಬೆಳೆದ ಎಲ್ಲಾ ಬೆಳೆಗಳಿಗೆ ನೀಡಬೇಕಾಗಿತ್ತು. ಆದರೆ ಕೆಲವೇ ಕೆಲವು ಆಯ್ದ ಬೆಳೆಗಳಿಗೆ ನೀಡಿರುವುದು ಬೇಸರದ ಸಂಗತಿ ಎಂದಿದ್ದಾರೆ.

## ಜಿಗಳಿ ರಂಗನಾಥ್‌ಗೆ 'ಕನಕ ಚೇತನಶ್ರೀ' ಪ್ರಶಸ್ತಿ ಪ್ರದಾನ



ಮಲೇಬೆನ್ನೂರು, ಫೆ. 5- ಶಿವಮೊಗ್ಗದ ಪತಂಜಲಿ ಯೋಗ ಮತ್ತು ಪ್ರಕೃತಿ ಸಂಸ್ಥೆಯು 26 ನೇ ವರ್ಷಕ್ಕೆ ಪಾದಾರ್ಪಣೆ ಮಾಡುತ್ತಿರುವ ಈ ಶುಭ ಸಂದರ್ಭದಲ್ಲಿ 536 ನೇ ಶ್ರೀ ಕನಕದಾಸರ ಜಯಂತಿಯ ಅಂಗವಾಗಿ ಸಮಾಜ ಸೇವೆಯಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನಿಯ ಸೇವೆ ಸಲ್ಲಿಸಿದ ಸಾಧಕರ ಸೇವೆಯನ್ನು ಗುರುತಿಸಿ ಕೊಡುವ, 'ಕನಕಶ್ರೀ ಚೇತನ ಪತಂಜಲಿ ರತ್ನ' ರಾಜ್ಯ ಪ್ರಶಸ್ತಿಯನ್ನು ಬೀದಿ ನಾಟಕ ಕಲಾವಿದ ಜಿಗಳಿಯ ಡಿ. ರಂಗನಾಥ್ ಅವರಿಗೆ ಶಿವಮೊಗ್ಗದ ಪತಂಜಲಿ ಯೋಗ ಮಂದಿರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ಪ್ರದಾನ ಮಾಡಲಾಯಿತು.

ಎಂ. ಈಶ್ವರಪ್ಪ ನವಲೆ, ಡಾ. ಪಿ. ಬಾಲಪ್ಪ, ಪರಿಸರ ರಮೇಶ್, ಜೆ.ಸಿ.ನಾರಾಯಣ ಮೂರ್ತಿ, ಪತಂಜಲಿಯ ನಾಗರಾಜ್ ಈ ವೇಳೆ ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಚನ್ನಗಿರಿಯ ಸುವರ್ಣ ಕರ್ನಾಟಕ ಜನ ಜಾಗೃತಿ ಕಲಾ ತಂಡದ ಕಲಾವಿದರು ಉಪಸ್ಥಿತರಿದ್ದು, ರಂಗನಾಥ್ ಅವರನ್ನು ಅಭಿನಂದಿಸಿದರು.

## ಹರಿಹರ : ಜನತೆಯ ಒಳಿತಿಗಾಗಿ ಪಂಚ ಮಹಾಯಜ್ಞ ಚಂಡಿಕಾ ಹೋಮ, ಹವನ



ಹರಿಹರ, ಫೆ.5- ದೇಶದ ಜನರು ನೆಮ್ಮದಿ ಮತ್ತು ಸುರಕ್ಷಿತವಾಗಿ ಜೀವನವನ್ನು ನಡೆಸುವುದಕ್ಕೆ ಅಧ್ಯಾತ್ಮಿಕ ಭಾವನೆಗಳನ್ನು ಮತ್ತು ಧರ್ಮನಿಷ್ಠೆಯನ್ನು ಉಳಿಸಿ, ಬೆಳೆಸಿಕೊಂಡು ಹೋಗಲಿಕ್ಕೆ ಹೋಮ, ಹವನ ಮುಂತಾದ ಪೂಜಾ ಕಾರ್ಯಗಳು ಸಹಕಾರಿಯಾಗುತ್ತವೆ ಎಂದು ಅಖಿಲ ಭಾರತೀಯ ಸಂತ ಸಮಿತಿಯ ಕರ್ನಾಟಕ ಪ್ರಾಂತ್ಯದ ಅಧ್ಯಕ್ಷರಾದ ಮಹಾಮಂಡಲೇಶ್ವರ ಓಂ ಶ್ರೀ ಮಾತಾ ವಿದ್ಯಾನಂದ ಸರಸ್ವತಿ ಗುರೂಜೀ ಅಭಿಪ್ರಾಯಪಟ್ಟರು.

ನಗರದ ಹೊರವಲಯದ ಅಮರಾವತಿ ಕಾಲೋನಿ ಶ್ರೀ ಶಿರಡಿ ಸಾಯಿಬಾಬಾ ಮಂದಿರ ಮತ್ತು ಜಗಜ್ಯೋತಿ ಬಸವೇಶ್ವರ ದೇವಾಲಯದ ಆವರಣದಲ್ಲಿ ಅಖಿಲ ಭಾರತೀಯ ಸಂತ ಸಮಿತಿ ವತಿಯಿಂದ ಲೋಕ ಕಲ್ಯಾಣಾರ್ಥ ಮಹಾ ಚಂಡಿಕಾ ಹೋಮ, ಶ್ರೀ ಚಕ್ರನವಾವರಣ ಹೋಮ, ಗಣಹೋಮ ಸೇರಿದಂತೆ ವಿವಿಧ ಪೂಜಾ ಕಾರ್ಯಗಳ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿಂದೆ ರಾಜ-ಮಹಾರಾಜರ ಕಾಲದಲ್ಲಿ ಮಳೆ ಇಲ್ಲದೆ ಬೆಳೆಗಳು ನಾಶಕ್ಕೆ ಕಾರಣವಾದಾಗ, ದೇಶದಲ್ಲಿ ಅಶಾಂತಿ ವಾತಾವರಣ ಸೃಷ್ಟಿಯಾದಾಗ, ಹಲವಾರು ಬಗೆಯ ತೊಂದರೆಗಳನ್ನು ಸಂಭವಿಸಿದ ಸಮಯದಲ್ಲಿ ಋಷಿಮುನಿಗಳು, ಸಾಧು ಸಂತರು ದೇಶವು ಸುಶಿಕ್ಷಿತವಾಗಿ ಇರುವಂತೆ ಮಾಡುವುದಕ್ಕೆ ವಿವಿಧ ಬಗೆಯ ಹೋಮ ಸೇರಿದಂತೆ ಹಲವು ಬಗೆಯ ಪೂಜಾ ಕಾರ್ಯಗಳನ್ನು ಮಾಡುತ್ತಾ ಬಂದಿದ್ದು, ಹಿಂದಿನಿಂದಲೂ ನಡೆದುಕೊಂಡ ಬಂದಿರುವ ಪದ್ದತಿಯಾಗಿದೆ.

ಆದೃಷ್ಟಿಯಿಂದ ಈಗಾಗಲೇ ರಾಜ್ಯದಲ್ಲಿ ಮಳೆ ಇಲ್ಲದೆ ರೈತರಿಗೆ, ಪಶುಪಕ್ಷಿಗಳಿಗೆ ಎಲ್ಲಾ ಬಗೆಯ ಜೀವರಾಶಿಗಳಿಗೆ ತೊಂದರೆ ಆಗುತ್ತಿರುವುದನ್ನು ಮನಗಂಡು ರಾಜ್ಯದ ಜನತೆಯ ಒಳಿತಿಗಾಗಿ ಇಂದು ಪಂಚ ಮಹಾಯಜ್ಞ ಚಂಡಿಕಾ ಹೋಮ, ಹವನ ಸೇರಿದಂತೆ ವಿಶೇಷ ಪೂಜಾ ಕಾರ್ಯಗಳನ್ನು ಮಾಡಲಾಗುತ್ತಿದೆ ಎಂದು ಹೇಳಿದರು.

ಈ ವೇಳೆ ರಾಘವೇಂದ್ರ ಸ್ವಾಮಿ ಮಠದ ಮಹಿಳಾ ಭಜನೆ ತಂಡದವರಿಂದ ಭಜನೆ ನಡೆಸಲಾಯಿತು. ಶಾಸಕ ಬಿ. ಪಿ. ಹರೀಶ್ ಹೋಮ, ಹವನ ಪೂಜೆಯಲ್ಲಿ ಪಾಲ್ಗೊಂಡು, ವೇದಿಕೆಯ ಸಮಾರಂಭದಲ್ಲಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಓಂ ಸಾಯಿ ಶ್ರೀ ಬಸವ ಕಲ್ಯಾಣ ಟ್ರಸ್ಟ್ ಅಧ್ಯಕ್ಷ ಅಮರಾವತಿ ಪರಮೇಶ್ವರ ಗೌಡ್ರು ವಹಿಸಿದ್ದರು.

ಈ ಸಂದರ್ಭದಲ್ಲಿ ಸಂತ ಸಮಿತಿಯ ಪ್ರಾಂತ ಸಹ ಅಧ್ಯಕ್ಷ ಓಂ ಶ್ರೀ ಮಾತಾ ಶಿವಜ್ಞಾನಮಯಿ ಸರಸ್ವತಿ, ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಮಹಾಸ್ವಾಮೀಜಿ, ಸಂದೀಪ್ ಗುರೂಜಿ, ಕವಿರಾಜ್ ಅವಧೂತ ಗುರೂಜಿ, ಸಂತ ಸೇವಾ ಸಮಿತಿಯ ರಾಜ್ಯ ಸಂಚಾಲಕ ವೀರೇಶ್ ಅಜ್ಜಣ್ಣನವರ್, ಅಮರಾವತಿ ಮಹಾದೇವಪ್ಪ ಗೌಡ್ರು, ನಗರಸಭೆ ಸದಸ್ಯ ಶಂಕರ್ ಖಟಾವ್‌ಕರ್ , ಡಿ. ಹೇಮಂತರಾಜ್, ಪರಶುರಾಮ್ ಬದಿ, ಕರಿಬಸಪ್ಪ ಕಂಚಿಕೇರಿ, ಧರ್ಮಸ್ಥಳ ಸಂಘದ ಗಣಪತಿ ಮಾಳಂಜೆ, ಸಂತೋಷ ಬಾಲಚಂದ್ರ ಕಾಮತ್ , ವಿಭಾಗ ಸಂಚಾಲಕ ಯೋಗೇಶ್, ಪ್ರಮೀಳಾ ನಲ್ಲೂರು, ಅಂಬುಜಾ ಪಿ ರಾಜೊಳ್ಳಿ, ರೂಪಾ ಕಾಟ್ವೆ, ಕವಿತಾ ಎಸ್ ಪೇಟೆಮಠ, ಗೋವಿಂದ ಮೆಹಂದಳೆ, ಪವನ್ ಆಚಾರ್ಯ, ಕತ್ತಲಗೇರೆ ವೀರೇಶ್, ಜಿ.ಮಲ್ಲಿಕಾರ್ಜುನ್ ಇತರರು ಹಾಜರಿದ್ದರು.

## ಚುನಾವಣಾ ಪ್ರಚಾರಕ್ಕೆ ಮಕ್ಕಳ ಬಳಕೆ ಬೇಡ : ಪಕ್ಷಗಳಿಗೆ ಸೂಚನೆ

ನವದೆಹಲಿ, ಫೆ. 5 - ಚುನಾವಣಾ ಪ್ರಚಾರಕ್ಕೆ ಮಕ್ಕಳನ್ನು ಯಾವುದೇ ಸ್ವರೂಪದಲ್ಲಿ ಬಳಸಿಕೊಳ್ಳಬಾರದು ಎಂದು ಚುನಾವಣಾ ಆಯೋಗವು ರಾಜಕೀಯ ಪಕ್ಷಗಳಿಗೆ ತಿಳಿಸಿದೆ. ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಈ ಸೂಚನೆ ನೀಡಲಾಗಿದೆ.

ಪಕ್ಷಗಳಿಗೆ ಸಲಹೆ ರವಾನಿಸಿರುವ ಚುನಾವಣಾ ಆಯೋಗ, ಪೋಸ್ಟರ್ ಹಾಗೂ ಕರಪತ್ರ ವಿತರಣೆ ಸೇರಿದಂತೆ, ಯಾವುದೇ ಸ್ವರೂಪದ ಕೆಲಸಕ್ಕೆ ಮಕ್ಕಳನ್ನು ಬಳಸಿಕೊಳ್ಳಬಾರದು ಎಂದು ಹೇಳಿದೆ.

## ರಾಣೇಬೆನ್ನೂರು ಕಾಕಿ ಸೇವಾ ಸಂಸ್ಥೆಯಿಂದ ರಾಜ್ಯಮಟ್ಟದ ಜಾನಪದ ಉತ್ಸವ





ರಾಣೇಬೆನ್ನೂರು, ಫೆ.5- ಇಲ್ಲಿನ ಕಾಕಿ ಜನಸೇವಾ ಸಂಸ್ಥೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜೆಸಿಐ ಮತ್ತು ಸೌರಭ ಜಾನಪದ ವೇದಿಕೆ ಸಂಯುಕ್ತವಾಗಿ ದೊಡ್ಡ ನಾಗಪ್ಪ ಕಾಕಿ, ಸಣ್ಣ ನಾಗಪ್ಪ ಕಾಕಿ ಪುಣ್ಯಸ್ಮರಣೆಗಾಗಿ ಇದೇ ದಿನಾಂಕ 11ರಂದು ರಾಜ್ಯಮಟ್ಟದ ಜನಪದ ಉತ್ಸವ ಏರ್ಪಡಿಸಿರುವುದಾಗಿ ಸಂಘಟಕ ಶ್ರೀ ನಿವಾಸ ಕಾಕಿ ತಿಳಿಸಿದ್ದಾರೆ.

ಅಂದು ಬೆಳಿಗ್ಗೆ ಜೆಸಿ ವಾಣಿ ಅರಮನೆ ಭೂಮಿ ಪೂಜೆ ನಂತರ ನೀಲ ಕಂಠೇಶ್ವರ ದೇವಸ್ಥಾನದ ಗಣೇಶ ಅರಮನೆಯಲ್ಲಿ ರಕ್ತದಾನದ ಜೊತೆಗೆ ದೇಹದಾನದ ಅರಿವು ಮೂಡಿಸುವ ಕಾರ್ಯಕ್ರಮ ನಂತರ ನಡೆಯುವ ಜಾನಪದ ಉತ್ಸವದಲ್ಲಿ ಜೋಗತಿ ನೃತ್ಯ, ಬಂಜಾರ ನೃತ್ಯ, ಡೊಳ್ಳು, ಸಮಾಳ ತಂಡಗಳು ಭಾಗವಹಿಸಲಿವೆ ಎಂದು ಅವರು ತಿಳಿಸಿದ್ದಾರೆ.

## ಡಾ. ಅಂಬೇಡ್ಕರ್‌ರ ಸಂವಿಧಾನ ತಳ ಸಮುದಾಯಗಳಿಗೆ ವರದಾನವಾಗಿದೆ

### ಜಗಳೂರಿನಲ್ಲಿ ಶಾಸಕ ಬಿ.ದೇವೇಂದ್ರಪ್ಪ ಅಭಿಮತ



ಜಗಳೂರು, ಫೆ.5- ತಳ ಸಮುದಾಯಗಳಿಗೆ ಡಾ. ಬಿ.ಆರ್.ಅಂಬೇಡ್ಕರ್ ಸಂವಿಧಾನ ವರದಾನವಾಗಿದ್ದು, ಮೀಸಲಾತಿ ಸದ್ಬಳಕೆ ಮಾಡಿಕೊಂಡು ಮುಖ್ಯವಾಹಿನಿಗೆ ಬರಬೇಕಿದೆ ಎಂದು ಶಾಸಕ ಬಿ.ದೇವೇಂದ್ರಪ್ಪ ಕರೆ ನೀಡಿದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ ಆದಿಜಾಂಭವ ಸಮಾಜದಿಂದ ನೂತನ ಶಾಸಕ ಬಿ. ದೇವೇಂದ್ರಪ್ಪ ಅವರಿಗೆ ಆಯೋಜಿಸಿದ್ದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ, ಅವರು ಮಾತನಾಡಿದರು.

ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಅತ್ಯಂತ ಹಿಂದುಳಿದ ಮಾದಿಗ ಸಮಾಜ ಜಾಗೃತವಾಗಿ ಶಿಕ್ಷಣ, ಸಂಘಟನೆಯೊಂದಿಗೆ ಸಂವಿಧಾನಬದ್ಧ ಹಕ್ಕುಗಳಿಗಾಗಿ ಹೋರಾಟದ ಅನಿವಾರ್ಯತೆ ಇದೆ. ಕಾರಣ ಸಂವಿಧಾನ ವಿರೋಧಿ ಶಕ್ತಿಗಳಿಂದ ದೇಶದ ಸಂವಿಧಾನ ಅಪಾಯದಂಚಿನಲ್ಲಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಕ್ಷೇತ್ರದಲ್ಲಿ ಸಾಮರಸ್ಯತೆಗೆ ಆದ್ಯತೆ ನೀಡುವೆ. ದಲಿತ ಸಮುದಾಯಕ್ಕೆ ರಕ್ಷಣೆಗಿರುವ ಕಾನೂನನ್ನು ದುರ್ಬಳಕೆ ಮಾಡಿಕೊಳ್ಳಬಾರದು. ಇತರೆ ಸಮುದಾಯಗಳೊಂದಿಗೆ ಅನ್ಯೋನ್ಯತೆಯಿಂದ ಜೀವನ ಸಾಗಿಸಬೇಕು. ಅಲ್ಲದೆ ಮೌಢ್ಯತೆ, ಅಂಧಕಾರದಿಂದ ಹೊರಬಂದು ಉತ್ತಮ ಬದುಕು ಕಟ್ಟಿಕೊಳ್ಳಬೇಕು ಎಂದರು.

**ಅಂಬೇಡ್ಕರ್ ನಿಧಿ ಸಂಗ್ರಹಣೆಗೆ ಚಾಲನೆ:** ಅಂಬೇಡ್ಕರ್ ನಿಧಿ ಸಂಗ್ರಹಣೆಗೆ ವೈಯಕ್ತಿಕವಾಗಿ 50,000 ರೂ. ನೀಡುವ ಮೂಲಕ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಸಂಗ್ರಹವಾಗುವ ಹಣವನ್ನು ಸಮಾಜದ ಬಡ ಮಕ್ಕಳ ಶಿಕ್ಷಣ, ಅಂಬೇಡ್ಕರ್ ಅವರ ಕಾರ್ಯಕ್ರಮಗಳಿಗೆ ವಿನಿಯೋಗಿಸಲು ಸಲಹೆ ನೀಡಿದರು.

ಹಿರಿಯೂರು ಕೋಡಿಹಳ್ಳಿ ಆದಿಜಾಂಭವ ಮಠದ ಷಡಕ್ಷರಿಮುನಿ ಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿ, ಪೌರ ಕಾರ್ಮಿಕರ ಜೊತೆ ಕಸಗುಡಿಸಿ, ಸ್ಫೂರ್ತಿ ನೀಡುತ್ತಿರುವ ಶಾಸಕ ಬಿ.ದೇವೇಂದ್ರಪ್ಪ ಅವರ ವ್ಯಕ್ತಿತ್ವ ವಿಶಾಲವಾದದ್ದು. ಶಾಸಕರಿಗೆ ಸ್ವಾಭಿಮಾನ ಸಂತಸದ ಸನ್ಮಾನ ತಮ್ಮದಾಗಬೇಕು, ಅವರ ಕೈ ಬಲಪಡಿಸಬೇಕು ಸಹಕಾರ ಬಯಸಬೇಕು ಎಂದು ಕಿವಿಮಾತು ಹೇಳಿದರು.

ಸಮಾಜದಲ್ಲಿ ಸಹೋದರತೆಗಾಗಿ ಜ್ಞಾನ ನೀತಿ ಅಳವಡಿಸಿಕೊಳ್ಳಬೇಕು. ಮಾದಿಗ ಸಮಾಜದವರು ವಿನಾಕಾರಣ ಜಾತಿನಿಂದನೆ ಪ್ರಕರಣ ದಾಖಲಿಸದೆ. ಸಂಘಟನೆ ಮುಖಂಡರುಗಳು ಮುಂಚೂಣಿಯಲ್ಲಿದ್ದು, ರಾಜೀ ಸಂಧಾನ ಮಾಡುವ ಮೂಲಕ ಮೇಲ್ವರ್ಗದವರ ವಿಶ್ವಾಸ, ಪ್ರೀತಿ ಗಳಿಸಬೇಕು. ಇದರಿಂದ ರಾಜಕೀಯ ನ್ಯಾಯ ಸಾಧ್ಯ ಎಂದರು.

ಮಾದಿಗ ಸಮಾಜದ ಹಿರಿಯ ಮುಖಂಡ ಜಿ. ಶಂಭುಲಿಂಗಪ್ಪ ಪ್ರಾಸ್ತಾವಿಕವಾಗಿ ಮಾತನಾಡಿ, 'ಸಮಾಜದಲ್ಲಿ ಅಧಿಕಾರ ಸಂಪತ್ತು ಉಳ್ಳವರ ಪಾಲಾಗುತ್ತಿದೆ. ಪರಿಣಾಮ ಶೋಷಿತರು ಬಡತನದಿಂದ ಸಂಪೂರ್ಣ ಮುಕ್ತರಾಗಿಲ್ಲ. ಕ್ಷೇತ್ರದಲ್ಲಿ ರಾಜಕೀಯ ಪಕ್ಷಗಳು ಮಾದಿಗ ಸಮಾಜವನ್ನು ಕೇವಲ ಮತ ಬ್ಯಾಂಕ್‌ಗೆ ಬಳಕೆ ಮಾಡಿಕೊಳ್ಳುತ್ತಿದ್ದು, ಕಾಂಗ್ರೆಸ್ ಪಕ್ಷ ಗುರುತಿಸಿ, ಸೂಕ್ತ ಸ್ಥಾನಮಾನ ಒದಗಿಸಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಎಸ್‌ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ. ಪಾಲಯ್ಯ, ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಡಿ.ಕೀರ್ತಿಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಕೆಪಿಸಿಸಿ ಸದಸ್ಯ ಕಲ್ಲೇಶ್‌ರಾಜ್ ಪಟೇಲ್, ಪ.ಪಂ. ಸದಸ್ಯರಾದ ನಿರ್ಮಲಕುಮಾರಿ, ದೇವರಾಜ್, ಮುಖಂಡರಾದ ಸಿ. ತಿಪ್ಪೇಸ್ವಾಮಿ, ಪಲ್ಲಾಗಟ್ಟೆ ಶೇಖರಪ್ಪ, ಮರಿಯಪ್ಪ, ಹಟ್ಟಿ ತಿಪ್ಪೇಸ್ವಾಮಿ, ಹನುಮಂತಾಪುರ ಶಿವಕುಮಾರ್, ವೆಂಕಟೇಶ್ ಬಿ.ಮಹೇಶ್ವರಪ್ಪ, ಪಾಪಣ್ಣ, ಪ.ಪಂ. ಮಾಜಿ ಅಧ್ಯಕ್ಷ ಮಂಜುನಾಥ್, ಪ್ರಕಾಶ್ ರೆಡ್ಡಿ, ಓಬಣ್ಣ ಮತ್ತಿತರರು ಇದ್ದರು.

### ನಾಗರತ್ನ ಚಂದ್ರಕುಮಾರ ಕೆರಕನವರ್ (ಅಗಡಿ) ನಿಧನ



ದಾವಣಗೆರೆ ಹಳೇ ಬೇತೂರು ರಸ್ತೆ, ಹಗೇದಿಬ್ಬ ಸರ್ಕಲ್ ಹತ್ತಿರದ ವಾಸಿ ಈರುಳ್ಳಿ ವ್ಯಾಪಾರಿ ಚಂದ್ರಕುಮಾರ ಕೆರಕನವರ ಇವರ ಧರ್ಮಪತ್ನಿ ನಾಗರತ್ನ ಚಂದ್ರಕುಮಾರ ಕೆರಕನವರ್ (ಅಗಡಿ) (44) ಇವರು ದಿನಾಂಕ 5.2.2024ರ ಸೋಮವಾರ ರಾತ್ರಿ 9.50ಕ್ಕೆ ನಿಧನರಾದರು. ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 06.02.2024ರ ಮಂಗಳವಾರ ಮಧ್ಯಾಹ್ನ 3ಕ್ಕೆ ನಗರದ ವೀರಶೈವ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.

### ಶ್ರೀಮತಿ ತಂಗೆಮ್ಮ ನಿಧನ



ದಾವಣಗೆರೆ ಎಂಸಿಸಿ ಎ ಬ್ಲಾಕ್, 2ನೇ ಮೇನ್, 2ನೇ ಕ್ರಾಸ್ ವಾಸಿ
ದಿ. ಬಂಡಿ ವಿಜಯಪ್ಪನವರ ಧರ್ಮಪತ್ನಿ
**ಶ್ರೀಮತಿ ತಂಗೆಮ್ಮ (62)**
(ಹೆಚ್. ಮಹದೇವಪ್ಪನವರ ಪುತ್ರಿ) ಇವರು ದಿನಾಂಕ 05.02.2024ರ ಸೋಮವಾರ ಸಂಜೆ 5.15ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಓರ್ವ ಪುತ್ರ, ನಾಲ್ವರು ಪುತ್ರಿಯರು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 06.02.2024ರ ಮಂಗಳವಾರ ಮಧ್ಯಾಹ್ನ 12ಕ್ಕೆ ಗಾಂಧಿನಗರದ ಹಿಂದೂ ರುದ್ರಭೂಮಿಯಲ್ಲಿ ನೆರವೇರಲಿದೆ.
**ದುಃಖತಪ್ತರು, ಮೊ : 98447 36234**

## ರಸ್ತೆ ಅಪಘಾತದಲ್ಲಿ ವ್ಯಕ್ತಿ ಸಾವು

ದಾವಣಗೆರೆ, ಜ.5- ನಗರದ ನಿಟುವಳ್ಳಿ ರಸ್ತೆಯಲ್ಲಿ ಶನಿವಾರ ನಡೆದ ರಸ್ತೆ ಅಪಘಾತದಲ್ಲಿ ಬೈಕ್ ಸವಾರ ಶಕ್ತಿ ನಗರದ ನಿವಾಸಿ ಗಣೇಶ್ ಎಸ್. (45) ಮೃತಪಟ್ಟಿದ್ದಾರೆ. ರಸ್ತೆ ಬದಿ ಫ್ಲೆಕ್ಸ್ ಅಳವಡಿಸಿದ್ದ ಕಂಬಕ್ಕೆ ಟೆಂಪೋ ಟ್ರಾವೆಲರ್ ಗುದ್ದಿದ್ದು, ಅದೇ ಮಾರ್ಗದಲ್ಲಿ ಬರುತ್ತಿದ್ದ ಗಣೇಶ್ ಎಸ್. ಅವರ ತಲೆಗೆ ಕಂಬ ಬಿದ್ದಿದೆ. ಟೆಂಪೋ ಕೂಡ ಅವರಿಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಗಣೇಶ್ ಅವರನ್ನು ನಗರದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಟೆಂಪೋ ಟ್ರಾವೆಲರ್ ಚಾಲಕ, ತುಮಕೂರು ಜಿಲ್ಲೆಯ ಪಾವಗಡದ ನಿವಾಸಿ ಕೆ. ಚಂದ್ರಶೇಖರ್ ವಿರುದ್ಧ ನಿರ್ಲಕ್ಷ್ಯದ ಆರೋಪದಡಿ ದಕ್ಷಿಣ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಪರಿಚಿತ ಪುರುಷನ ಶವ ಪತ್ತೆ

ದಾವಣಗೆರೆ, ಫೆ.5- ದಾವಣಗೆರೆ-ಹರಿಹರ ಪಿ.ಬಿ.ರಸ್ತೆಯ ರೈಲ್ವೆ ಹಳಿ ಬಳಿ ಬೋಂಗಾಳೆ ರೈಸ್‌ಮಿಲ್ ಹತ್ತಿರ ಜ.30 ರಂದು ಸುಮಾರು 40-45 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿ ಜಾಲಿ ಗಿಡಕ್ಕೆ ನೇಣು ಹಾಕಿಕೊಂಡು ಮೃತಪಟ್ಟಿದ್ದಾನೆ. ಹುಳಗಳು ಮುತ್ತಿಕೊಂಡಿದ್ದರಿಂದ ಶವವು ಸಂಪೂರ್ಣ ಕೊಳೆತುಹೋಗಿದೆ. ಮೃತನ ಹೆಸರು, ವಿಳಾಸ ಹಾಗೂ ವಾರಸುದಾರರು ಯಾರೆಂದು ತಿಳಿದು ಬಂದಿರುವುದಿಲ್ಲ. ತೆಳುವಾದ ಮೈಕಟ್ಟು, ತಲೆಯ ಹಿಂಭಾಗದಲ್ಲಿ 1 ಇಂಚು ಕೂದಲು ಚಹರೆ ಹೊಂದಿರುವ ಮೃತದೇಹವು ಸಂಪೂರ್ಣ ಕೊಳೆತು ಹೋಗಿದೆ. ಮಾಸಲು ಬಣ್ಣದ ಶರ್ಟ್, ಕಪ್ಪು ಪ್ಯಾಂಟ್ ಇರುತ್ತದೆ. ಸಂಬಂಧಪಟ್ಟವರು ಹರಿಹರ ಗ್ರಾಮಾಂತರ ಪೊಲೀಸ್ ಠಾಣೆ ದೂ.ಸಂ. 08192-272017, 9480803258, ಹರಿಹರ ವೃತ್ತ ಕಚೇರಿ 08192-271018 ಹಾಗೂ ದಾವಣಗೆರೆ ಎಸ್.ಪಿ.ಕಚೇರಿ 08192-253400 ನ್ನು ಸಂಪರ್ಕಿಸುವಂತೆ ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಯ ಪಿಎಸ್‌ಐ ಅಬ್ದುಲ್ ಖಾದರ್ ಜಿಲಾನಿ ತಿಳಿಸಿದ್ದಾರೆ.

## ಗುತ್ತೂರು : ನಾಳೆ ವಿದ್ಯುತ್ ಇಲ್ಲ

ರಾಣೇಬೆನ್ನೂರು, ಫೆ.5- 220ಕೆವಿ ವಿ.ಕೇಂದ್ರ ರಾಣೇಬೆನ್ನೂರು, 110 ಕೆವಿ ಬೇಲೂರು, ಹೀಲದಹಳ್ಳಿ, 110 ಕೆವಿ ಅರೇಮಲ್ಲಾಪುರ, 110 ಕೆವಿ ತುಮ್ಮಿನಕಟ್ಟೆ, 33 ಕೆವಿ ಕುಪ್ಪೇಲೂರು, 33 ಕೆವಿ ಮುದೇನೂರು, 33ಕೆವಿ ಚಳಗೇರಿ, 33ಕೆವಿ ಹಲಗೇರಿ, 33ಕೆವಿ ಸುಣಕಲ್ ಬಿದರಿ ಮತ್ತು 66ಕೆವಿ ಹೊಸಪೇಟೆ ವಿದ್ಯುತ್ ಕೇಂದ್ರಗಳು, ರಾಣೇಬೆನ್ನೂರು ತಾಲ್ಲೂಕು, ರಟ್ಟೆಹಳ್ಳಿ ತಾಲ್ಲೂಕು ಮತ್ತು ಹಿರೇಕೆರೂರು ತಾಲ್ಲೂಕಿನ 33 ಕೆವಿ ಲೈನ್, ನಗರ ಮಾರ್ಗಗಳು, ನಿರಂತರ ಯೋಜನೆಯ ಮಾರ್ಗಗಳು ಹಾಗೂ ಎಲ್ಲಾ 11 ಕೆವಿ ಮಾರ್ಗಗಳಿಗೆ ನಾಡಿದ್ದು ದಿನಾಂಕ 7 ರ ಬುಧವಾರ ಬೆಳಿಗ್ಗೆ 10 ರಿಂದ ಸಂಜೆ 6 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಕೇಂದ್ರದಿಂದ ನಿರಂತರ ಅನ್ಯಾಯ

## ದೆಹಲಿಯಲ್ಲಿ ನಾಳೆ ಪ್ರತಿಭಟನೆ : ಸಿಎಂ ಸಿದ್ದರಾಮಯ್ಯ



ಬೆಂಗಳೂರು, ಫೆ. 5 - ಕರ್ನಾಟಕಕ್ಕೆ ನಿರಂತರವಾಗಿ ಆಗುತ್ತಿರುವ ಅನ್ಯಾಯ, ತಾರತಮ್ಯ, ಮಲತಾಯಿ ಧೋರಣೆ ವಿರೋಧಿಸಿ ನಾಡಿದ್ದು ದಿನಾಂಕ 7 ರಂದು ನವದೆಹಲಿಯ ಜಂತರ್‌ಮಂತರ್‌ನಲ್ಲಿ ಬೆಳಗ್ಗೆ 11 ಗಂಟೆಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಪ್ರಕಟಿಸಿದರು.

ಸುಮಾರು 90 ನಿಮಿಷಗಳ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಸರ್ಕಾರ ರಾಜ್ಯಕ್ಕೆ ಮಾಡುತ್ತಿರುವ ಅನ್ಯಾಯದ ಬಗ್ಗೆ ಕಿಡಿಕಾರಿದ್ದಲ್ಲದೆ, ನಾಡಿನ ಜನರ ಹಿತದೃಷ್ಟಿಯಿಂದ ಬಿಜೆಪಿ ಸಂಸದರು, ಶಾಸಕರು ಪ್ರತಿಭಟನೆಗೆ ಕೈಜೋಡಿಸಬೇಕೆಂದು ಮನವಿ ಮಾಡಿದರು.

ಭದ್ರಾ ಯೋಜನೆಗೆ 5,300 ಕೋಟಿ ರೂ. ಕೊಡುತ್ತೇವೆ ಎಂದು ಕಳೆದ ಸಾಲಿನ ಬಜೆಟ್‌ನಲ್ಲಿ ಘೋಷಣೆ ಮಾಡಿ, ಈವರೆಗೆ ಒಂದು ರೂ. ಕೂಡ ಬಿಡುಗಡೆ ಮಾಡಿಲ್ಲ. ಬರಗಾಲ ಪರಿಹಾರದ ಹಣವೂ ಇಲ್ಲ. 150 ಮಾನವ ದಿನಗಳಿಗೆ ಕೂಲಿ ಕೊಡಲು ಕೂಡ ಅನುಮತಿ ನೀಡಿಲ್ಲ ಎಂದರು.

ಇಂಥ ಹಲವು ಕಾರಣಗಳಿಗಾಗಿ ಅನಿವಾರ್ಯವಾಗಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ದೇಶದ ಜನರ ಗಮನ ಸೆಳೆಯಬೇಕು. ಕೇಂದ್ರ ಸರ್ಕಾರದ ಮಲತಾಯಿ ಧೋರಣೆ, ಹಣಕಾಸು ಹಂಚಿಕೆಯಲ್ಲಾಗಿರುವ ತಾರತಮ್ಯ, ಬರಗಾಲ ವಿಷಯದಲ್ಲಿ ತೋರಿರುವ ಮಲತಾಯಿ ಧೋರಣೆ ಬಗ್ಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಎಲ್ಲಾ ಶಾಸಕರು, ಮೇಲ್ಮನೆ ಸದಸ್ಯರು ಭಾಗವಹಿಸುತ್ತಿದ್ದಾರೆ ಎಂದರು.

14ನೇ ಹಣಕಾಸು ಆಯೋಗದಲ್ಲಿ ರಾಜ್ಯದ ತೆರಿಗೆಯ ಪಾಲು ಶೇ.4.71 ಇದ್ದದ್ದು, 15ನೇ ಹಣಕಾಸು ಆಯೋಗದಲ್ಲಿ ಶೇ.3.64ಕ್ಕೆ ಇಳಿಕೆಯಾಯಿತು. ಅಂದರೆ ಶೇ.1.07 ಕಡಿಮೆಯಾಗಿದೆ. ಅದರಿಂದ 4 ವರ್ಷಗಳಲ್ಲಿ 45,000 ಕೋಟಿ ರೂ. ರಾಜ್ಯಕ್ಕೆ ಕಡಿತ ಆಯಿತು. ಇದು ಕೇವಲ ನಗದು ಹಂಚಿಕೆಯೊಂದರಲ್ಲೇ ಆಗಿರುವ ಅನ್ಯಾಯ. ಅಂದಾಜಿನ ಪ್ರಕಾರ ಈ ವರ್ಷ ನಮ್ಮ ರಾಜ್ಯಕ್ಕೆ ನಗದು ಹಂಚಿಕೆಯಲ್ಲಿ 62,098 ಕೋಟಿ ರೂ.ಗಳು ಕಡಿಮೆಯಾಗಲಿದೆ ಎಂದು ಮುಖ್ಯಮಂತ್ರಿ ವಿವರಿಸಿದರು.

ಹಣಕಾಸು ಆಯೋಗ ನಗದು ಹಂಚಿಕೆ ಮಾಡುವಾಗ ಶೇ. 4.71 ರಿಂದ ಶೇ. 3.74 ಕ್ಕೆ ಇಳಿಕೆ ಮಾಡಿದ್ದರಿಂದ ರಾಜ್ಯಕ್ಕೆ ಆಗಿರುವ ಅನ್ಯಾಯ ಸರಿಪಡಿಸಲು 5,495 ಕೋಟಿ ರೂ. ವಿಶೇಷ ಅನುದಾನ ನೀಡಲು ಶಿಫಾರಸ್ಸು ಮಾಡಲಾಗಿತ್ತು. ಮಧ್ಯಂತರ ಬಜೆಟ್‌ನಲ್ಲಿ ಈ ಬಗ್ಗೆ ಶಿಫಾರಸ್ಸು ಮಾಡಿದರು. ಈ ಹಣವೂ ರಾಜ್ಯಕ್ಕೆ ಬರಲಿಲ್ಲ ಎಂದು ಹೇಳಿದರು.

ಅಂತಿಮ ವರದಿಯಲ್ಲಿ 3,000 ಕೋಟಿ ರೂ. ಫೆರಿಫೆರಲ್ ರಿಂಗ್ ರಸ್ತೆಗೆ, ಕೆರೆಗಳನ್ನು ಅಭಿವೃದ್ಧಿ ಪಡಿಸಲು 3,000 ಸೇರಿ 6,000 ಕೋಟಿ ರೂ. ಗಳನ್ನು ಹೆಚ್ಚುವರಿಯಾಗಿ ಕೊಡಲು ಶಿಫಾರಸ್ಸು ಮಾಡಲಾಯಿತು. ಈ ಹಣವೂ ಬರಲಿಲ್ಲ.

ಜಿಎಸ್‌ಟಿ ಪದ್ಧತಿ ಜಾರಿಗೆ ಬಂದಾಗ ಇದು ಅವೈಜ್ಞಾನಿಕ ಎಂದು ನಾವು ಪದೇ ಪದೇ ಹೇಳಿದ್ದೆವು. ಈಗಲೂ ನಮಗೆ, ನಮ್ಮ ರಾಜ್ಯಕ್ಕೆ ಜಿಎಸ್‌ಟಿನಲ್ಲಿ ಅನ್ಯಾಯ ಆಗುತ್ತಲೇ ಇದೆ ಎಂದರು.

ರಾಜ್ಯದಿಂದ ನಾವು ಕೊಡುವ 100 ರೂ. ಗಳಲ್ಲಿ 12 ರೂ. ಮಾತ್ರ ನಮಗೆ ವಾಪಾಸ್ ಬರುತ್ತೆ. ಉಳಿದದ್ದೆಲ್ಲಾ ಅವರೇ ಇಟ್ಟುಕೊಳ್ಳುತ್ತಾರೆ ಎಂದು ಹೇಳಿದರು.

ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರು ಪ್ರಧಾನಿಗಳ ಮುಂದೆ ಬಾಯಿ ಬಿಡುವುದಿಲ್ಲ, ವಿರೋಧ ಪಕ್ಷದ ನಾಯಕ ಆರ್.ಅಶೋಕ್‌ಗೆ ಈ ವಿಷಯಗಳೆಲ್ಲಾ ಅರ್ಥವೇ ಆಗಲ್ಲ. ಪ್ರಹ್ಲಾದ್ ಜೋಷಿ ಮತ್ತು ಶೋಭಾ ಕರಂದ್ಲಾಜೆ ರಾಜ್ಯದಿಂದ ಕೇಂದ್ರ ಮಂತ್ರಿಗಳಾಗಿದ್ದಾರೆ. 27 ಜನ ಸಂಸದರು ಸಂಸತ್ತಿನಲ್ಲಿ ಮಾತೇ ಆಡಿಲ್ಲ ಎಂದು ಟೀಕಿಸಿದರು.

ನರೇಂದ್ರ ಮೋದಿಯವರು ಸೂಕ್ಷ್ಮಮತಿಯಾಗಿದ್ದು, ಪ್ರತಿಭಟನೆ ಬಳಿಕವಾದರೂ ರಾಜ್ಯಕ್ಕೆ ಆಗಿರುವ ಅನ್ಯಾಯ ಸರಿಪಡಿಸಿ ಕರ್ನಾಟಕದ ಪಾಲಿನ ಹಣವನ್ನು ವಾಪಾಸ್ ಕೊಡಬಹುದು ಎಂಬ ಆಶಾಭಾವನೆ ಇದೆ ಎಂದರು.

# ಅನುದಾನ ತಾರತಮ್ಯ ಆರೋಪ ರಾಜಕೀಯ ಪ್ರೇರಿತ

## ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ಚಾಚೂ ತಪ್ಪದೇ ಪಾಲನೆ ಎಂದ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್

ನವದೆಹಲಿ, ಫೆ. 5 - ಬಿಜೆಪಿಯೇತರ ರಾಜ್ಯಗಳಿಗೆ ಅನುದಾನ ತಡೆಯಲಾಗುತ್ತಿದೆ ಹಾಗೂ ದಕ್ಷಿಣದ ರಾಜ್ಯಗಳಿಗೆ ತೆರಿಗೆಯಲ್ಲಿ ಸಮರ್ಪಕ ಪಾಲು ನೀಡುತ್ತಿಲ್ಲ ಎಂದು ರಾಜಕೀಯ ಪ್ರೇರಿತವಾಗಿ ಬಿಂಬಿಸಲಾಗುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಕರ್ನಾಟಕಕ್ಕೆ ಸಲ್ಲಬೇಕಾದ ತೆರಿಗೆ ಹಣದ ಪಾಲನ್ನು ಕೇಂದ್ರ ಸರ್ಕಾರ ನೀಡುತ್ತಿಲ್ಲ ಎಂದು ಕರ್ನಾಟಕ ಸರ್ಕಾರ ಹೇಳುತ್ತಿರುವುದನ್ನು ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಲೋಕಸಭೆಯಲ್ಲಿ ಪ್ರಸ್ತಾಪಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸೀತಾರಾಮನ್, ಈ ರೀತಿ ಆಗಲು ಸಾಧ್ಯವಿಲ್ಲ. ಸರ್ಕಾರ ಹಣಕಾಸು ಆಯೋಗದ ಶಿಫಾರಸ್ಸುಗಳ ಅನ್ವಯ ಕಾರ್ಯನಿರ್ವಹಿಸುತ್ತದೆ ಎಂದರು.

ಕೆಲ ರಾಜ್ಯಗಳ ಜೊತೆ ಪಕ್ಷಪಾತಿಯಾಗಿ ವರ್ತಿಸಲಾಗುತ್ತಿದೆ ಎಂದು ರಾಜಕೀಯ ಪ್ರೇರಿತವಾಗಿ ಬಿಂಬಿಸಲಾಗುತ್ತಿದೆ. ಯಾವುದೇ ಹಣಕಾಸು ಸಚಿವರು ಹಣಕಾಸು ಆಯೋಗದ ಶಿಫಾರಸ್ಸಿನ ಜೊತೆ ಚಲ್ಲಾಟವಾಡಲು ಸಾಧ್ಯವಿಲ್ಲ ಎಂದು ಸೀತಾರಾಮನ್ ಹೇಳಿದರು.



ಈ ರಾಜ್ಯ ನನಗೆ ಇಷ್ಟವಿಲ್ಲ, ಈ ರಾಜ್ಯಕ್ಕೆ ಹಣ ಪಾವತಿ ನಿಲ್ಲಿಸುತ್ತೇನೆ ಎಂದು ಹೇಳಲಿಕ್ಕೆ ಸಾಧ್ಯವಿಲ್ಲ. ಈ ಕುರಿತು ವ್ಯವಸ್ಥೆ ಸಶಕ್ತವಾಗಿದೆ ಎಂದವರು ತಿಳಿಸಿದರು. ಕರ್ನಾಟಕಕ್ಕೆ ನ್ಯಾಯವಾಗಿ ಸಿಗಬೇಕಾದ ಅನುದಾನ ನೀಡುತ್ತಿಲ್ಲ ಎಂದು ಆರೋಪಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಫೆ.7ರಂದು ದೆಹಲಿಯಲ್ಲಿ ಪ್ರತಿಭಟನೆ ನಡೆಸುವುದಾಗಿ ಹೇಳಿದ್ದಾರೆ.

ಕರ್ನಾಟಕ ದೇಶದಲ್ಲೇ ಎರಡನೇ ಅತಿ ಹೆಚ್ಚು ತೆರಿಗೆ ಪಾವತಿಸುತ್ತದೆ. ಆದರೆ, ಕರ್ನಾಟಕಕ್ಕೆ ಸೂಕ್ತ ರೀತಿಯ ಅನುದಾನ ನೀಡುತ್ತಿಲ್ಲ. ಬಿಜೆಪಿ ಸರ್ಕಾರ ಕರ್ನಾಟಕವನ್ನು ಕಡೆಗಣಿಸುತ್ತಿದೆ ಎಂದು ಆರೋಪಿಸಿದ್ದಾರೆ.

ಈ ಆರೋಪಗಳನ್ನು ಲೋಕಸಭೆಯಲ್ಲಿ ಚೌಧರಿ ಪ್ರಸ್ತಾಪಿಸಿದ್ದಕ್ಕೆ ಪ್ರತಿಕ್ರಿಯಿಸಿದ ಸೀತಾರಾಮನ್, ಕೇವಲ ಎರಡು ತಿಂಗಳ ಹಿಂದಷ್ಟೇ ಎಲ್ಲವೂ ಸರಿ ಇತ್ತು. ಈಗೇನಾಗಿದೆ? ಯಾವ ಉದ್ದೇಶಕ್ಕಾಗಿ ಹಣ ಬಳಸಬೇಕಾಗಿತ್ತೋ ಅದಕ್ಕೆ ಬಳಸಿಲ್ಲವೇ? ನೀವು ಯಾವ ರೀತಿ ಬಳಸಬೇಕು ಎಂದು ನಾನು ಹೇಳುವುದಿಲ್ಲ. ಆದರೆ, ಈ ಬಗ್ಗೆ ನನ್ನ ಮೇಲೆ ಆರೋಪ ಮಾಡಬೇಡಿ ಎಂದು ಹೇಳಿದರು.

ನಿಮ್ಮ ಬಜೆಟ್ ನಿಭಾಯಿಸಲಾಗದ ರೀತಿಯಲ್ಲಿ ಕೆಲ ವಲಯಗಳಿಗೆ ಖರ್ಚು ಮಾಡುತ್ತಿದ್ದರೆ, ಅದಕ್ಕೆ ನಾನು ಹೊಣೆಯಲ್ಲ. ಆರು ತಿಂಗಳ ಹಿಂದಿನವರೆಗೆ ಯಾವ ಸರ್ಕಾರ ಇತ್ತೋ ಅದಕ್ಕೆ ನಾನು ಹೊಣೆಯಲ್ಲ. ಆರು ತಿಂಗಳ ಹಿಂದೆ ಸರಿ ಇತ್ತು, ಈಗ ಸರಿ ಇಲ್ಲ ಎನ್ನುವುದಾದರೆ, ಆತ್ಮಾವಲೋಕನ ಮಾಡಿಕೊಳ್ಳಿ ಎಂದು ಸೀತಾರಾಮನ್ ಹೇಳಿದರು.

ರಾಜ್ಯದ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ತಮ್ಮನ್ನು ಭೇಟಿ ಮಾಡಿ ರಾಜ್ಯದ ವಿಷಯಗಳ ಬಗ್ಗೆ ತಿಳಿಸಿದ್ದರು. ನಾನು ಅವರಿಗೆ ವಾಸ್ತವಾಂಶ ತಿಳಿಸಿದ್ದೇನೆ. ಹಣಕಾಸು ಆಯೋಗದ ಶಿಫಾರಸ್ಸು ರಹಿತವಾಗಿ ನಾನೇನೂ ಮಾಡಲು ಸಾಧ್ಯವಿಲ್ಲ. ನನ್ನ ಬಳಿ ವಿವೇಚನಾ ಅಧಿಕಾರ ಇಲ್ಲ. ಏನಾದರೂ ಸಮಸ್ಯೆ ಇದ್ದರೆ ಹಣಕಾಸು ಆಯೋಗದ ಬಳಿ ಮಾತನಾಡಿ ಎಂದು ಸೀತಾರಾಮನ್ ತಿಳಿಸಿದರು.

ಹಣಕಾಸು ಆಯೋಗದ ಶಿಫಾರಸ್ಸುಗಳನ್ನು ನಾನು ಚಾಚೂ ತಪ್ಪದೇ ಪಾಲಿಸುತ್ತಿದ್ದೇನೆ. ಹಣಕಾಸು ಆಯೋಗದ ಶಿಫಾರಸ್ಸುಗಳಂತೆ ರಾಜ್ಯಗಳಿಗೆ ತೆರಿಗೆಯ ಪಾಲನ್ನು ಹಂಚಲಾಗುತ್ತಿದೆ ಎಂದವರು ತಿಳಿಸಿದರು.

ರಾಜ್ಯ ಜಿ.ಎಸ್.ಟಿ.ಯ ಎಲ್ಲಾ ಪಾಲು ರಾಜ್ಯಗಳಿಗೆ ಹೋಗುತ್ತದೆ. ಐ.ಜಿ.ಎಸ್.ಟಿ. ಮೂಲಕ ಬರುವ ಹಣದಲ್ಲಿ ಅರ್ಧದಷ್ಟನ್ನು ರಾಜ್ಯಗಳಿಗೆ ಕೊಡಲಾಗುತ್ತದೆ ಎಂದು ಸಚಿವೆ ಹೇಳಿದರು. ಸಿ.ಜಿ.ಎಸ್.ಟಿ.ಯಲ್ಲಿ ಬರುವ ಹಣವನ್ನು ಹಣಕಾಸು ಆಯೋಗದ ಶಿಫಾರಸ್ಸಿನ ಅನ್ವಯ ನೀಡಲಾಗುತ್ತದೆ. ಆಯೋಗದ ಎಲ್ಲಾ ಸಲಹೆಗಳನ್ನು ಕೇಂದ್ರ ಸರ್ಕಾರ ಪಾಲಿಸುತ್ತಿದೆ ಎಂದೂ ಸೀತಾರಾಮನ್ ಹೇಳಿದರು.

ಹಣಕಾಸು ಆಯೋಗ ಸಹ ಒಂದೆಡೆ ಕುಳಿತು ನಿರ್ಧಾರ ತೆಗೆದುಕೊಳ್ಳುವುದಿಲ್ಲ. ಪ್ರತಿಯೊಂದು ರಾಜ್ಯವನ್ನು ಭೇಟಿ ಮಾಡಿ, ಅವುಗಳ ಜೊತೆ ಮಾತನಾಡಿ ವರದಿ ಸಲ್ಲಿಸುತ್ತದೆ ಎಂದವರು ಹೇಳಿದರು.

# 12ನೇ ವಾರ್ಡಿನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಸ್ಸೆಸ್ ಚಾಲನೆ



ದಾವಣಗೆರೆ, ಫೆ. 5- ನಗರದ 12ನೇ ವಾರ್ಡಿನ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಚಾಲನೆ ನೀಡಿದರು.

12ನೇ ವಾರ್ಡಿನ ಆಜಾದ್ ನಗರ ಸರ್ಕಲ್ ನಲ್ಲಿ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ದಾವಣಗೆರೆ ನಗರದಲ್ಲಿ ಈಗಾಗಲೇ ಅಭಿವೃದ್ಧಿ ಕಾಮಗಾರಿಗಳು ಆರಂಭಗೊಂಡಿದ್ದು, ಇನ್ನಷ್ಟು ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನದ ಬೇಡಿಕೆಯನ್ನು ಸರ್ಕಾರಕ್ಕೆ ನೀಡಲಾಗಿದೆ ಎಂದರು.

ಸರ್ಕಾರದಿಂದ ಅನುದಾನ ಬಂದ ನಂತರ ಅಭಿವೃದ್ಧಿ ಆಗದ ವಾರ್ಡ್ ಗಳಿಗೆ ಹೆಚ್ಚಿನ ಒತ್ತು ನೀಡಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅಯೂಬ್ ಪೈಲ್ವಾನ್, ಮಹಾನಗರ ಪಾಲಿಕೆ ಸದಸ್ಯರುಗಳಾದ ಶ್ರೀಮತಿ ಉರ್‌ಬಾನು ಪಂಡಿತ್ , ಜಾಕಿರ್ ಅಲಿ, ಶಫೀಕ್ ಪಂಡಿತ್, ದಸ್ತಗಿರ್, ಮಹಾನಗರ ಪಾಲಿಕೆಯ ಅಭಿಯಂತರರು, ಗುತ್ತಿಗೆದಾರರು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

# ಹೊನ್ನಾಳಿ ತಾಲ್ಲೂಕಿನಲ್ಲಿ ಇಂದು-ನಾಳೆ ಸಂವಿಧಾನ ಜಾಗೃತಿ ಜಾಥಾ

ಸಂವಿಧಾನದ ಆಶಯವನ್ನು ಜನಸಾಮಾನ್ಯರಿಗೆ ತಿಳಿಸಿಕೊಡಲು ಸಂವಿಧಾನ ಜಾಗೃತಿ ಜಾಥಾ ಜಿಲ್ಲೆಯಾದ್ಯಂತ ನಡೆಯುತ್ತಿದ್ದು, ಇಂದು - ನಾಳೆ ಹೊನ್ನಾಳಿ ಮತ್ತು ಚನ್ನಗಿರಿ ತಾಲ್ಲೂಕಿನ ವಿವಿಧ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಳಗಳಲ್ಲಿ ಸಂಚರಿಸಲಿದೆ ಎಂದು ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ನಾಗರಾಜ ತಿಳಿಸಿದ್ದಾರೆ.

ಜಾಥಾವು ಹೊನ್ನಾಳಿ ತಾಲ್ಲೂಕಿನ ಕಮ್ಮಾರಘಟ್ಟ-ಬೆನಕನಹಳ್ಳಿ, ಚನ್ನಗಿರಿ ತಾಲ್ಲೂಕಿನ ಬೆನಕನಹಳ್ಳಿ-ಬೀರಗೊಂಡನಹಳ್ಳಿ, ಬೀರಗೊಂಡನ ಹಳ್ಳಿ-ರಾಂಪುರ, ರಾಂಪುರ-ಸಾಸ್ವೆಹಳ್ಳಿ, ಹೊನ್ನಾಳಿ ತಾಲ್ಲೂಕಿನ ಸಾಸ್ವೆಹಳ್ಳಿ-ಕುಳಗಟ್ಟೆ, ಕುಳಗಟ್ಟೆ-ಹೊಸಹಳ್ಳಿ, ಹೊಸಹಳ್ಳಿ-ಲಿಂಗಾಪುರ ಜಾಥಾವು ಲಿಂಗಾಪುರ ಗ್ರಾಮದಿಂದ ಮುಂದಿನ ಗ್ರಾಮಗಳಿಗೆ ಸಂಚರಿಸಲಿದೆ.

ನಾಳೆ ಹೊನ್ನಾಳಿ ತಾಲ್ಲೂಕಿನ ಲಿಂಗಾಪುರ-ಹುಣಸಘಟ್ಟ, ಹುಣಸಘಟ್ಟ-ಕ್ಯಾಸನಕೆರೆ, ಕ್ಯಾಸನಕೆರೆ-ಜಿ.ಕೊಮಾರನಹಳ್ಳಿ, ಚನ್ನಗಿರಿ ತಾಲ್ಲೂಕಿನ ಜಿ.ಕೊಮಾರನಹಳ್ಳಿ-ನಿಲೋಗಲ್, ನಿಲೋಗಲ್-ದಾಗಿನಕಟ್ಟೆ, ದಾಗಿನಕಟ್ಟೆ-ಬಸವಾಪಟ್ಟಣ, ಬಸವಾಪಟ್ಟಣ-ಕೋಟೆಹಾಳ್ ಜಾಥಾವು ಕೋಟೆಹಾಳ್‌ನಿಂದ ಮುಂದಿನ ಗ್ರಾಮಗಳಿಗೆ ಸಂಚರಿಸಲಿದೆ. ಗ್ರಾಮಸ್ಥರು, ಸಾರ್ವಜನಿಕರು ಜಾಥಾ ಯಶ್ವಸಿಗೊಳಿಸಲು ಕೋರಿದ್ದಾರೆ.

# ಎಸ್.ಎಸ್.ಕೇರ್ ಟ್ರಸ್ಟ್‌ನಿಂದ ಪತ್ರಕರ್ತರ ಸಮ್ಮೇಳನದಲ್ಲಿ ಉಚಿತ ಆರೋಗ್ಯ ತಪಾಸಣೆ

ದಾವಣಗೆರೆ, ಫೆ.5- ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಮುದಾಯ ಭವನದಲ್ಲಿ ನಡೆದ 38ನೇ ರಾಜ್ಯಮಟ್ಟದ ಪತ್ರಕರ್ತರ ಸಮ್ಮೇಳನದಲ್ಲಿ ಎಸ್.ಎಸ್.ಕೇರ್ ಟ್ರಸ್ಟ್ ವತಿಯಿಂದ ಟ್ರಸ್ಟ್ ಲೈಫ್ ಟ್ರಸ್ಟಿ ಡಾ. ಪ್ರಭಾ ಮಲ್ಲಿಕಾರ್ಜುನ್ ಆಶಯದಂತೆ ಎಸ್.ಎಸ್ ಹೈಟೆಕ್ ಆಸ್ಪತ್ರೆ, ಬಾಪೂಜಿ ಆಸ್ಪತ್ರೆಯ ವೈದ್ಯರ ನೇತೃತ್ವದಲ್ಲಿ ಸಮ್ಮೇಳನಕ್ಕೆ ಬಂದ ಸಾವಿರಾರು ಜನರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.



# 'ಗ್ಯಾರಂಟಿ' ಯೋಜನೆ ನಿಲ್ಲಿಸೋಲ್ಲ



ದಾವಣಗೆರೆ, ಫೆ.5- 'ಪಂಚ ಗ್ಯಾರಂಟಿ' ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಸರ್ಕಾರ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ 'ಗ್ಯಾರಂಟಿ ಸಮಾವೇಶ' ಆಯೋಜಿಸುತ್ತಿದೆ ಎಂದು ಶಾಸಕ ಕೆ.ಎಸ್.ಬಸವಂತಪ್ಪ ಹೇಳಿದರು.

ದಾವಣಗೆರೆ ತಾಲ್ಲೂಕಿನ ಮಾಯಕೊಂಡ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಾಗೂ ತಾಲ್ಲೂಕಿನ ಆನಗೋಡು ಗ್ರಾಮದ ವಾಲ್ಮೀಕಿ ಸಮುದಾಯ ಭವನದಲ್ಲಿ ಸೋಮವಾರ ಗ್ರಾಮ ಪಂಚಾಯಿತಿ ವತಿಯಿಂದ ಆಯೋಜಿಸಿದ್ದ 'ಗ್ಯಾರಂಟಿ ಸಮಾವೇಶ' ಉದ್ಘಾಟಿಸಿ ಮಾತನಾಡಿದರು.

ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನ ಮತ್ತು ಪ್ರತಿ ಅರ್ಹ ಫಲಾನುಭವಿಗಳಿಗೆ ಈ ಯೋಜನೆಗಳ ಸೌಲಭ್ಯ ಪರಿಣಾಮಕಾರಿಯಾಗಿ ತಲುಪಿಸುವ ಉದ್ದೇಶ ದಿಂದ ಸರ್ಕಾರ ಈ ಕಾರ್ಯಕ್ರಮವನ್ನು ಆಯೋಜಿಸುತ್ತಿದೆ. ಯಾವುದೇ ಕಾರಣಕ್ಕೂ ಮುಖ್ಯಮಂತ್ರಿಗಳು ಈ ಯೋಜನೆಗಳನ್ನು ನಿಲ್ಲಿಸುವುದಿಲ್ಲ ಎಂದು ತಿಳಿಸಿದರು.

ಕೆಲವರು ಈ ಯೋಜನೆಗಳನ್ನು ತಪ್ಪಿಸಬೇಕೆಂಬ ಉದ್ದೇಶದಿಂದಲೇ ಇಲ್ಲಸಲ್ಲದ ವದಂತಿಗಳನ್ನು ಫಲಾನುಭವಿಗಳ ತಲೆಯಲ್ಲಿ ತುಂಬುತ್ತಿದ್ದಾರೆ. ಯಾರೂ ಕೂಡ ಈ ಊಹಾಪೋಹಗಳಿಗೆ ಕಿವಿಗೊಡಬಾರದು. ಈ ಯೋಜನೆಗಳು ಇನ್ನೂ ಹತ್ತು ವರ್ಷಗಳು ಇರಬೇಕು. ಬಡವರಿಗೆ, ತಾಯಂದಿಯರಿಗೆ ಈ ಸೌಲಭ್ಯ ತಲುಪಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ

## ವದಂತಿಗಳಿಗೆ ಕಿವಿಗೊಡಬೇಡಿ - ಶಾಸಕ ಬಸವಂತಪ್ಪ

ಯೋಜನೆಗಳನ್ನು ಜಾರಿಗೊಳಿಸಿದ್ದಾರೆ. ಯಾವುದೇ ಕಾರಣಕ್ಕೂ ಫಲಾನುಭವಿಗಳು ಸುಳ್ಳು ವದಂತಿಗಳನ್ನು ನಂಬಬಾರದು ಎಂದು ಕಿವಿಮಾತು ಹೇಳಿದರು.

ಈ ಸಂದರ್ಭದಲ್ಲಿ ಉಪ ತಹಶೀಲ್ದಾರ್ ಡಿ.ಎಂ. ರಾಮಸ್ವಾಮಿ, ಸಹಾಯಕ ಕೃಷಿ ನಿರ್ದೇಶಕ ಶ್ರೀಧರಮೂರ್ತಿ, ಸಿಡಿಪಿಓ ಅಭಿಕುಮಾರ್, ತಾ.ಪಂ. ಇಓ ರಾಮಭೋವಿ, ಕಂದಾಯ ಅಧಿಕಾರಿ ಚಂದ್ರಪ್ಪ, ಕೆಇಬಿ ಎಇಇ ತೀರ್ಥೇಶ್, ಶ್ರೀನಿವಾಸ್, ತೇಜವರ್ಧನ್ ಸೇರಿದಂತೆ ಇನ್ನಿತರರಿದ್ದರು.

**ಸಂಜೀವಿನಿ ಮಾಸಿಕ ಸಂತೆ ಮೇಳ:** ದಾವಣಗೆರೆ ತಾಲ್ಲೂಕಿನ ಆನಗೋಡು ಗ್ರಾಮದಲ್ಲಿ ಗ್ರಾ.ಪಂ., ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ, 42 ಗ್ರಾ.ಪಂ. ಮಟ್ಟದ ಒಕ್ಕೂಟಗಳ ಮತ್ತು ವಿಶ್ವಬಂಧು ಸಂಜೀವಿನಿ ಗ್ರಾಪಂ ಮಟ್ಟದ ಒಕ್ಕೂಟದ ಆಶ್ರಯದಲ್ಲಿ ದಿನಬಳಕೆ ವಸ್ತುಗಳು, ಆಹಾರ ಪದಾರ್ಥಗಳು, ಕರಕುಶಲ ವಸ್ತುಗಳು ಮತ್ತು ಗೃಹೋಪಯೋಗಿ ವಸ್ತುಗಳ 'ಸಂಜೀವಿನಿ ಮಾಸಿಕ ಸಂತೆಮೇಳ'ಕ್ಕೆ ಶಾಸಕ ಬಸವಂತಪ್ಪ ಅವರು ಚಾಲನೆ ನೀಡಿದರು.

# ಸಹಕಾರ ಬ್ಯಾಂಕಿನ ಸಹಕಾರದ ಸಾರಥ್ಯಕ್ಕೆ ಬೇಕಿದೆ ಯುವಶಕ್ತಿ

## ನಮ್ಮ ನಿಮ್ಮೆಲ್ಲರ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್‌ನ ಚುನಾವಣೆಗೆ ಯುವ ಶಕ್ತಿಗಳನ್ನು ತರುವ ಬಗ್ಗೆ



ಅಖಿಲೇಶ್ ಕೋಗುಂಡಿ

ದಾವಣಗೆರೆ : ಯಾವುದೇ ಕ್ಷೇತ್ರದಲ್ಲಿ ಬದಲಾವಣೆ ಯುವಕರಿಂದಲೇ ಪ್ರಾರಂಭವಾಗುವುದು. ಈ ಶತಮಾನದ ಭಾರತ ನಿಜಕ್ಕೂ ಯಂಗ್ ಇಂಡಿಯಾ. ಯುವ ಜನಾಂಗದಲ್ಲಿರುವ ಹೊಸತನದ ಬಯಕೆ, ಆಶಾವಾದ, ಸ್ವಾತಂತ್ರ್ಯ ಪ್ರವೃತ್ತಿ, ಏನನ್ನಾದರೂ ಸಾಧಿಸಬೇಕೆಂಬ ಛಲ, ಸುಲಭವಾಗಿ ಸೋಲೊಪ್ಪಿಕೊಳ್ಳದ ಮನೋಭಾವ, ನಿರಂತರ ಪ್ರಯತ್ನ, ಕ್ರಿಯಾಶೀಲತೆ ಮತ್ತು ಹಿರಿಯರ ಸೂಕ್ತ ಸಲಹೆ ತೆಗೆದುಕೊಳ್ಳುವ ಮನೋಭಾವವನ್ನು ಹೊಂದಿರು ವುದು ಇವೆಲ್ಲವೂ ನವ ನಿರ್ಮಾಣದ ಹೊಳಪುಗಳಾಗಿ ಕಂಡುಬರುತ್ತಿವೆ.

ಈ ಅಂಶ ಗಳನ್ನು ಒಳಗೊಂಡ ವ್ಯಕ್ತಿಯ ಅಗತ್ಯತೆ ಸಹಕಾರ ಕ್ಷೇತ್ರಕ್ಕೂ ಅನಿವಾರ್ಯವಾಗಿದೆ. ಇದನ್ನು ಈಡೇರಿಸುವ ಯುವ ಶಕ್ತಿ ಎಂದರೆ, 21ನೇ ಶತಮಾನದ ಯುವಕರ ಯುಗಕ್ಕೆ ಹೊಸತಿನ ಸುಧಾರಣೆ ತರುವ ಬಯಕೆ ಹೊತ್ತ ಯುವ ಮಿತ್ರ ಅಖಿಲೇಶ್ ಕೋಗುಂಡಿ.

ದಾವಣಗೆರೆಯಲ್ಲಿ ಸಹಕಾರ ಕ್ಷೇತ್ರದಲ್ಲಿ ಪ್ರಸ್ತುತ ಯುವ ಯುಗಕ್ಕೆ ತಕ್ಕಂತೆ ಸುಧಾರಣೆ ತರುವವರಲ್ಲಿ ಅಖಿಲೇಶ್ ಕೋಗುಂಡಿ ಮೊದಲಿಗರು ಎಂಬುದಕ್ಕೆ ಅವರಲ್ಲಿನ ಭವಿಷ್ಯದ ಕ್ರಿಯಾ ಶೀಲಾ ಆಲೋಚನೆಯೇ ಸಾಕ್ಷಿ.

ಸಹಕಾರ ಕ್ಷೇತ್ರದಲ್ಲಿ ಗ್ರಾಹಕರ ಸ್ನೇಹಿ ಸುಧಾರಣೆ, ಪ್ರಸ್ತುತ ತಂತ್ರಜ್ಞಾನಕ್ಕೆ ತಕ್ಕಂತೆ ಡಿಜಿಟಲೀಕರಣ, ಸಾಲದ' ಜೊತೆ ವಿಮೆ ಮಾಡಿಸುವುದು, ಶೀಘ್ರ ದ್ವಿಚಕ್ರ ವಾಹನ ಸಾಲ, ಯುಪಿಐ ಆನ್ ಲೈನ್ ವ್ಯವಹಾರ ವ್ಯವಸ್ಥೆ, ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಈ ಹಂತದಲ್ಲೇ ಸಹಕಾರ ಬ್ಯಾಂಕ್ ನಲ್ಲಿ ಖಾತೆಯನ್ನು ತೆರೆಯುವ ಅವಕಾಶ, ಯುವ ಜನಾಂಗಕ್ಕೆ ಈ ಹಂತದಲ್ಲೇ ಸಹಕಾರದ ವ್ಯವಹಾರ, ಹಣಕಾಸಿನ ವ್ಯವಹಾರ ಜ್ಞಾನ ಹೆಚ್ಚಿಸುವ ಕುರಿತು ಇತ್ತೀಚಿಗೆ ದಾವಣಗೆರೆಯ ಪ್ರತಿಷ್ಠಿತ ಪತ್ರಿಕೆ ಜನತಾವಾಣಿಯಲ್ಲಿ ಅಂಕಣ ಬರೆದು ಸಹಕಾರ ಕ್ಷೇತ್ರದ ಬೆಳವಣಿಗೆ, ಗ್ರಾಹಕರು ಮತ್ತು ಯುವ ಜನತೆಯ ಏಳಿಗೆ ಬಗ್ಗೆ ಅಖಿಲೇಶ್ ಕೋಗುಂಡಿ ಅವರು ತಮ್ಮ ಸದಾಶಯ ಅಭಿವ್ಯಕ್ತಪಡಿಸಿದ್ದರು.

ಅವರ ಈ ಚಿಂತನೆಗಳಲ್ಲಿ ಮುಖ್ಯವಾಗಿ ಮೈನರ್ ಅಕೌಂಟ್ ನಿಂದ ಚಿಕ್ಕಂದಿನಲ್ಲೇ ಬ್ಯಾಂಕ್ ಜೊತೆ ಯುವ ಸಮುದಾಯದ ಒಡನಾಟದ ಚಿಂತನೆ ಈಗಿನ ಕಾಲಘಟ್ಟಕ್ಕೆ ತಕ್ಕದಾಗಿದೆ. ಏಕೆಂದರೆ 21ನೇ ಶತಮಾನದಲ್ಲಿ ಜನಸಂಖ್ಯೆಯಲ್ಲಿ ಯುವ ಸಮೂಹವೇ ಹೆಚ್ಚು. ಶಾಲಾ, ಕಾಲೇಜು ವಿದ್ಯಾರ್ಥಿಗಳಿಗೆ ಈ ಹಂತದಲ್ಲೇ ಸಹಕಾರ ಬ್ಯಾಂಕ್ ನಲ್ಲಿ ಖಾತೆಯನ್ನು ತೆರೆಯುವ ಅವಕಾಶ ಸಿಕ್ಕಾಗ ಹೆಚ್ಚು ಸಹಕಾರದ ವ್ಯವಹಾರಕ್ಕೆ ಮತ್ತು ದೇಶದ ಸಂಪತ್ತಾಗಿರುವ ಯುವ ಜನತೆಗೆ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಹಕಾರ ನೀಡಿದರೆ ದೇಶದ ಪ್ರಗತಿಯನ್ನು ಕಾಣಬಹುದು.

ಪ್ರಸ್ತುತ ಆಧುನಿಕ, ತಂತ್ರಜ್ಞಾನ ಯುಗದಲ್ಲಿ ಸಹಕಾರ ಕ್ಷೇತ್ರದಲ್ಲಿ ಗ್ರಾಹಕನಿಗೆ ಬ್ಯಾಂಕಿಂಗ್ ವ್ಯವಹಾರ ಮಾಡಲು ಡಿಜಿಟಲೀಕರಣ. ಹಣಕಾಸಿನ ವ್ಯವಹಾರಕ್ಕೆ ನೇರವಾಗಿ ಸಹಕಾರ ಬ್ಯಾಂಕ್ ಮತ್ತು ಸಂಘಕ್ಕೆ ಬರಲಾಗದ ಸಮಯದಲ್ಲಿ ತುರ್ತು ನಿಮಿತ್ತ ವ್ಯವಹರಿಸಲು ಸಹಕಾರ ಬ್ಯಾಂಕ್ ಮತ್ತು ಸಂಘವೆರಡೂ ಪೂರಕವಾದ ಸ್ವಂತದ ಯುಪಿಐ ಆನ್ ಲೈನ್ ವ್ಯವಹಾರ ವ್ಯವಸ್ಥೆ ಸುಲಭದಾಯಕವಾಗಿ ಅಂಗೈಯಲ್ಲಿ ಸಿಕ್ಕಂತಾಗಲಿದೆ. ತುರ್ತು ಸಮಯದಲ್ಲಿ ಇದು ಸಹಕಾರಿ.

**ಸಾಲದ ಜೊತೆ ವಿಮೆ (LOAN INSURANCE)** ಯನ್ನು ಸಹ ಒಳಗೊಂಡಂತೆ ಈಗಿನ ಸಹಕಾರ ತತ್ವದಡಿ ಗ್ರಾಹಕರಿಗೆ ಯಾವುದೇ ರೀತಿಯಲ್ಲಿ ಸಾಲವನ್ನು ನೀಡಬಹುದು ಎಂಬ ಚಿಂತನೆ ಗ್ರಾಹಕ ಮತ್ತು ಆತನ ಮೇಲೆ ಅವಲಂಬಿತವಾದ ಕುಟುಂಬದ ಹಿತಕಾಯಬಲ್ಲದು.

ಈ ಎಲ್ಲಾ ಸದಾಭಿಲಾಷೆಯ ಅಂಶಗಳು ಗ್ರಾಹಕ ಸ್ನೇಹಿ ಮತ್ತು ಪ್ರಸ್ತುತತೆಗೆ ಅವಶ್ಯವಾದದ್ದು. ಜೊತೆಗೆ ಸಹಕಾರ ಕ್ಷೇತ್ರದ ಏಳಿಗೆಗೂ ಸೂಕ್ತ. ಹಾಗಾಗಿ ಇಂತಹ ಅಭಿಲಾಷೆ ಹೊತ್ತ ಅಖಿಲೇಶ್ ಕೋಗುಂಡಿ ಅವರಿಗೆ ದಾವಣಗೆರೆಯಲ್ಲಿ ಸಹಕಾರ ಕ್ಷೇತ್ರದ ಸಾರಥ್ಯ ಸಿಕ್ಕಾಗ ಪರಿಪೂರ್ಣಗೊಳಿಸಬಲ್ಲರು ಎಂಬುದರಲ್ಲಿ ಎರಡು ಮಾತಿಲ್ಲ. ಈ ಎಲ್ಲಾ ಅಂಶಗಳನ್ನು ಹೇಗೆ ನಿಭಾಯಿಸಿಕೊಂಡು ಹೋಗಬೇಕು ಎಂಬ ಹೊಣೆಗಾರಿಕೆಯ ಶಕ್ತಿ ಅವರಿಗೆ ತಿಳಿದಿದೆ. ಆದ್ದರಿಂದ ಈ ಬಾರಿ ಇನ್ನೇನು ಸಮೀಪಿಸುತ್ತಿರುವ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕಿನ ಚುನಾವಣೆ ಯಲ್ಲಿ ಅವರಿಗೆ ಒಂದು ಅವಕಾಶವನ್ನು ಕೊಟ್ಟು ಯುವ ಮಿತ್ರ ಅಖಿಲೇಶ್ ಕೋಗುಂಡಿ ಅವರನ್ನೂ ಜಯ ಶೀಲರನ್ನಾಗಿ ಮಾಡಿದರೆ ನವಯುಗದ ಶಕ್ತಿ ಕಾಣುವಂತೆ ಆಗಬಹುದು.

**- ಶ್ರೀ ಎಂ. ಎನ್. ಶಿವಾನಂದ, ಯುವ ಚಿಂತಕರು, ದಾವಣಗೆರೆ.**

## ಸಂಕ್ಷಿಪ್ತ ಸುದ್ದಿ

**☞ ವಿಶ್ವಾಸ ಮತದಲ್ಲಿ ಜಾರ್ಖಂಡ್ ಮುಖ್ಯಮಂತ್ರಿ ಚಂಪೈ ಸೊರೇನ್‌ಗೆ ಗೆಲುವು**

ರಾಂಚಿ : ಮುಖ್ಯಮಂತ್ರಿ ಚಂಪೈ ಸೊರೇನ್ ಅವರ ಮೈತ್ರಿ ಸರ್ಕಾರ ಜಾರ್ಖಂಡ್‌ನ ವಿಶ್ವಾಸ ಮತದಲ್ಲಿ ಗೆಲುವು ಸಾಧಿಸಿದೆ. 81 ಸದಸ್ಯರ ವಿಧಾನಸಭೆಯಲ್ಲಿ ಜೆ.ಎಂ.ಎಂ. ನೇತೃತ್ವದ ಮೈತ್ರಿಕೂಟದ ಪರವಾಗಿ 47 ಮತಗಳು ಚಲಾವಣೆಯಾಗಿವೆ. 29 ಶಾಸಕರು ನಿಲುವಳಿಯ ವಿರುದ್ಧ ಮತ ಚಲಾಯಿಸಿದ್ದಾರೆ. ಸ್ವತಂತ್ರ ಶಾಸಕ ಸರಯೂ ರಾಯ್ ಗೈರಾಗಿದ್ದರು. ಬಂಧನಕ್ಕೊಳಗಾಗಿರುವ ಮಾಜಿ ಮುಖ್ಯಮಂತ್ರಿ ಹೇಮಂತ್ ಸೊರೇನ್ ಸಹ ಮತದಾನದ ವೇಳೆ ಉಪಸ್ಥಿತರಿದ್ದರು.

**☞ ನೆಹರು ಭಾರತೀಯರನ್ನು ಸೋಮಾರಿಗಳು ಎಂದು ಭಾವಿಸಿದ್ದರು : ಮೋದಿ**

ನವದೆಹಲಿ : ದೇಶದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ಅವರು ಭಾರತೀಯರನ್ನು ಸೋಮಾರಿ ಹಾಗೂ ಕಡಿಮೆ ಬುದ್ಧಿವಂತಿಕೆಯವರು ಎಂದು ಪರಿಗಣಿಸಿದ್ದರು. ಕಾಂಗ್ರೆಸ್ ಪಕ್ಷಕ್ಕೆ ದೇಶದ ಸಾಮರ್ಥ್ಯದ ಮೇಲೆ ವಿಶ್ವಾಸ ಇರಲಿಲ್ಲ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ಆರೋಪಿಸಿದ್ದಾರೆ.

**☞ ಜ್ಞಾನವಾಪಿಯ ಇತರೆ ನೆಲಮಾಳಿಗೆಗಳಿಗಾಗಿ ಕೋರ್ಟ್‌ನಲ್ಲಿ ಅರ್ಜಿ**

ವಾರಣಾಸಿ : ಜ್ಞಾನವಾಪಿ ಸಂಕೀರ್ಣದ ಮುಚ್ಚಿರುವ ಇತರೆ ನೆಲಮಾಳಿಗೆಗಳನ್ನು ಪುರಾತತ್ವ ಇಲಾಖೆಯ ಸಮೀಕ್ಷೆಗೆ ಒಳಪಡಿಸಬೇಕು ಎಂದು ನ್ಯಾಯಾಲಯದಲ್ಲಿ ಅರ್ಜಿ ದಾಖಲಿಸಲಾಗಿದೆ. ಇತ್ತೀಚೆಗಷ್ಟೇ ಸಂಕೀರ್ಣದ ಒಂದು ನೆಲಮಾಳಿಗೆಯಲ್ಲಿ ಪೂಜೆ ಸಲ್ಲಿಸಲು ನ್ಯಾಯಾಲಯ ಅನುಮತಿ ನೀಡಿತ್ತು.

**☞ ಪ್ರಧಾನಿಗೆ ಕನಸು ಕಾಣುವ ಹಕ್ಕಿದೆ : '400 ಪಾರ್' ಹೇಳಿಕೆಗೆ ಪ್ರತಿಪಕ್ಷಗಳ ಲೇವಡಿ**

ನವದೆಹಲಿ : ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ '400 ಪಾರ್' ಹೇಳಿಕೆಗೆ ಲೇವಡಿ ಮಾಡಿರುವ ಪ್ರತಿಪಕ್ಷಗಳು, ಪ್ರಧಾನಿಗೆ ಕನಸು ಕಾಣುವ ಹಕ್ಕಿದೆ. ಆದರೆ, ವಾಸ್ತವ ಭಿನ್ನವಾಗಿದೆ, ಸರ್ಕಾರ ಭರವಸೆಗಳನ್ನು ಮರೆತಿರುವ ಕಾರಣ ಮತ್ತೆ ಜನಾದೇಶ ದೊರೆಯುವುದಿಲ್ಲ ಎಂದು ಹೇಳಿವೆ.

**☞ ಉತ್ತರಾಖಂಡ : ಏಕರೂಪ ನಾಗರಿಕ ಸಂಹಿತೆಯ ಅಧಿವೇಶನ ಆರಂಭ**

ಡೆಹರಾಡೂನ್ : ಏಕರೂಪ ನಾಗರಿಕ ಸಂಹಿತೆಗಾಗಿ ಉತ್ತರಾಖಂಡ ವಿಧಾನಸಭೆಯ ವಿಶೇಷ ಅಧಿವೇಶನ ಸೋಮವಾರ ಆರಂಭವಾಗಿದೆ. ಏಕರೂಪ ನಾಗರಿಕ ಸಂಹಿತೆಯ ಕರಡು ಮಸೂದೆಗೆ ರಾಜ್ಯ ಸಂಪುಟ ನಿನ್ನೆ ಒಪ್ಪಿಗೆ ನೀಡಿತ್ತು.

**☞ 370 ಸೀಟು ಬರದಿದ್ದರೆ ಪ್ರಮಾಣ ವಚನ ನಿರಾಕರಿಸುವಿರಾ? ಮೋದಿಗೆ ಕಾಂಗ್ರೆಸ್ ಸವಾಲು**

ನವದೆಹಲಿ : ಈ ಬಾರಿ ಬಿಜೆಪಿ 370 ಸ್ಥಾನಗಳಲ್ಲಿ ಗೆಲ್ಲಲಿದೆ ಎಂದು ಪ್ರಧಾನ ಮಂತ್ರಿ ನರೇಂದ್ರ ಮೋದಿ ನೀಡಿರುವ ಹೇಳಿಕೆಯನ್ನು ತಳ್ಳಿ ಹಾಕಿರುವ ಕಾಂಗ್ರೆಸ್, ಕಡಿಮೆ ಸ್ಥಾನಗಳು ಬಂದರೆ ಅವರು ಪ್ರಮಾಣ ವಚನ ಸ್ವೀಕರಿಸಲು ನಿರಾಕರಿಸುವರೇ? ಎಂದು ಸವಾಲು ಹಾಕಿದೆ.

# ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷರಾಗಿ ರಮೇಶ್, ಉಪಾಧ್ಯಕ್ಷರಾಗಿ ದೇವೇಂದ್ರಪ್ಪ




ದಾವಣಗೆರೆ, ಫೆ. 5- ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನೂತನ ಅಧ್ಯಕ್ಷರಾಗಿ ಬಿ.ಎಸ್. ರಮೇಶ್ ಹೆಚ್. ಬಸಾಪುರ ಹಾಗೂ ಉಪಾಧ್ಯಕ್ಷರಾಗಿ ಎಂ.ಪಿ. ದೇವೇಂದ್ರಪ್ಪ ಶ್ಯಾಗಲೆ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಬ್ಯಾಂಕಿನ ವ್ಯವಸ್ಥಾಪಕರಾದ ಸರ್ವಮಂಗಳ ಮಳಿಮಠ್ ತಿಳಿಸಿದ್ದಾರೆ.

# ಪತ್ರಕರ್ತ ಚಿದಾನಂದ ಅವರಿಗೆ ಸನ್ಮಾನ



ಹರಿಹರ, ಜ. 5- ನಗರದ ಹೊರವಲಯದ ಅಮರಾವತಿ ಕಾಲೋನಿಯ ಶ್ರೀ ಶಿರಡಿ ಸಾಯಿಬಾಬಾ ಮತ್ತು ಜಗಜ್ಯೋತಿ ಬಸವೇಶ್ವರ ದೇವಸ್ಥಾನ ಸಮಿತಿ ವತಿಯಿಂದ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಸದ್ಭಾವನಾ ಪ್ರಶಸ್ತಿಯನ್ನು ಪಡೆದಿರುವುದಕ್ಕೆ ಪತ್ರಕರ್ತ ಎಂ. ಚಿದಾನಂದ ಕಂಚಿಕೇರಿ ಅವರನ್ನು ಸನ್ಮಾನಿಸಿ, ಗೌರವಿಸಿದರು.

ಈ ಸಂದರ್ಭದಲ್ಲಿ ಅಮರಾವತಿ ಮಾಜಿ ಪ್ರಧಾನ ಗೌಡ್ರು ಪರಮೇಶ್ವರಪ್ಪ, ರಾಘವೇಂದ್ರ ಸ್ವಾಮಿ ಮಠದ ಭಜನಾ ಸಂಘದ ಮುಖ್ಯಸ್ಥ ಪವನ್ ಆಚಾರ್ಯ, ಪುಟ್ಟಮ್ಮ, ಮಂಜುಳಾ ಮತ್ತು ಇತರರು ಹಾಜರಿದ್ದರು.

# ಪರೀಕ್ಷಾ ಅವ್ಯವಹಾರ ತಡೆ ಮಸೂದೆ ಮಂಡನೆ

ನವದೆಹಲಿ, ಫೆ. 5 - ಸರ್ಕಾರಿ ನೇಮಕಾತಿ ಪರೀಕ್ಷೆಗಳಲ್ಲಿ ನಡೆಯುವ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ನಕಲಿ ವೆಬ್‌ಸೈಟ್‌ಗಳ ಹಾವಳಿ ಸೇರಿದಂತೆ ಹಲವು ಪಿಡುಗುಗಳನ್ನು ತಡೆಯುವ ಕುರಿತ ಮಸೂದೆಯನ್ನು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮಂಡಿಸಿದೆ. ಪ್ರಸಕ್ತ ನೇಮಕಾತಿ ಪರೀಕ್ಷೆಗಳ ಅಪರಾಧಗಳಿಗೆ ಸಂಬಂಧಿಸಿದಂತೆ ಯಾವುದೇ ವಿವರವಾದ ಕಾಯ್ದೆ ಇಲ್ಲ. ಸರ್ಕಾರ ಪ್ರಸ್ತಾಪಿಸಿರುವ ಕಾಯ್ದೆಯಲ್ಲಿ ಮೂರು ವರ್ಷಗಳ ಕನಿಷ್ಠ ಜೈಲು ಹಾಗೂ 1 ಕೋಟಿ ರೂ. ಗಳವರೆಗಿನ ದಂಡದ ಪ್ರಸ್ತಾಪ ಇದೆ.

ಸಾರ್ವಜನಿಕ ಪರೀಕ್ಷೆಗಳ (ಅವ್ಯವಹಾರಗಳ ತಡೆ) ಮಸೂದೆ, 2024 ಅನ್ನು ಕೇಂದ್ರ ಸಿಬ್ಬಂದಿ ಖಾತೆ ಸಚಿವ ಜಿತೇಂದ್ರ ಸಿಂಗ್ ಮಂಡಿಸಿದ್ದಾರೆ.

ಪ್ರಶ್ನೆ ಪತ್ರಿಕೆ ಇಲ್ಲವೇ ಪ್ರಮುಖ ಉತ್ತರಗಳ ಸೋರಿಕೆ, ನೇರವಾಗಿ ಇಲ್ಲವೇ ಪರೋಕ್ಷವಾಗಿ ಅಭ್ಯರ್ಥಿಗಳ ಆಯ್ಕೆ ಮೇಲೆ ಅಕ್ರಮ ಪರಿಣಾಮ ಬೀರುವುದು ಹಾಗೂ ನೇಮಕ ಕುರಿತ ಕಂಪ್ಯೂಟರ್ ವ್ಯವಸ್ಥೆಯ ಮೇಲೆ ಪರಿಣಾಮ ಬೀರುವುದನ್ನು ತಡೆಯಲು ಮಸೂದೆ ಮಂಡಿಸಲಾಗಿದೆ ಎಂದು ಸಚಿವರು ಹೇಳಿದರು. ಇದರ ಜೊತೆಗೆ, ನಕಲಿ ವೆಬ್‌ಸೈಟ್ ರೂಪಿಸುವವರು, ನಕಲಿ ಪರೀಕ್ಷೆ ನಡೆಸುವವರು, ನಕಲಿ ಪ್ರವೇಶ ಪತ್ರ ನೀಡುವವರ ವಿರುದ್ಧ ಕ್ರಮ ತೆಗೆದುಕೊಳ್ಳಲಾಗುವುದು ಎಂದೂ ಸಚಿವರು ಹೇಳಿದ್ದಾರೆ.

# ಫಲಪುಷ್ಪ ಪ್ರದರ್ಶನ : ಮುರುಘಾಮಠ ಪ್ರಥಮ



ಚಿತ್ರದುರ್ಗ, ಫೆ.5- ನಗರದ ತೋಟಗಾರಿಕೆ ಇಲಾಖೆ ಆವರಣದಲ್ಲಿ ಫೆಬ್ರವರಿ 2ರಿಂದ 4ರವರೆಗೆ ಜಿಲ್ಲಾ ತೋಟಗಾರಿಕೆ ಸಂಘ ಮತ್ತು ತೋಟಗಾರಿಕೆ ಇಲಾಖೆ, ಜಿಲ್ಲಾ ಪಂಚಾಯತ್ ಚಿತ್ರದುರ್ಗ ಇವರ ಸಹಯೋಗದಲ್ಲಿ ಜರುಗಿದ 2024-25ನೇ ಸಾಲಿನ 31ನೇ ಫಲಪುಷ್ಪ ಪ್ರದರ್ಶನದಲ್ಲಿ ಶ್ರೀ ಮುರುಘಾ ಮಠಕ್ಕೆ ಪ್ರಥಮ ಬಹುಮಾನ ಲಭಿಸಿದೆ.

# ಡಿಸಿಸಿ ಬ್ಯಾಂಕ್ ನಿರ್ದೇಶಕ ಹನಗವಾಡಿ ಕುಮಾರ್‌ಗೆ ಸನ್ಮಾನ



ಹರಿಹರ, ಫೆ. 5- ಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆಯಾಗಿರುವ ಹನಗವಾಡಿ ಕುಮಾರ್‌ರವರನ್ನು ನಗರದ ಎಪಿಎಂಸಿ ಆವರಣದಲ್ಲಿ ತಾಲ್ಲೂಕು ರೈತ ಸಂಘದ ಮುಖಂಡರು ಸನ್ಮಾನಿಸಿ ಗೌರವಿಸಿದರು.

ಈ ವೇಳೆ ರೈತ ಸಂಘದ ಮುಖಂಡರಾದ ನಂದಿತಾವರೆ ಶಂಭುಲಿಂಗಪ್ಪ, ಹಾಳೂರು ನಾಗರಾಜ್, ಚಂದ್ರಪ್ಪ ಅಮರಾವತಿ, ಹನಗವಾಡಿ ರುದ್ರಮುನಿ, ತಿಪ್ಪೇಸ್ವಾಮಿ ಇತರರು ಹಾಜರಿದ್ದರು.

# ಪಕ್ಷ ವಿರೋಧಿ ಹೇಳಿಕೆ ನೀಡುವವರಿಗೆ ಫೆ. 8ರ ಸಭೆಯಲ್ಲಿ ಉತ್ತರ : ಹರೀಶ್



## ಹೊನ್ನಾಳಿಯಲ್ಲಿ ಬಿಜೆಪಿ ಕಾರ್ಯಕರ್ತರ ಸಭೆ

ಹೊನ್ನಾಳಿ, ಫೆ.5- ಸಂಸದ ಜಿ.ಎಂ. ಸಿದ್ದೇಶ್ವರ ಅವರು ಹೊರಗಿನವರು, ಲೋಕಸಭಾ ಟಿಕೆಟ್ ಕೊಡಬೇಡಿ ಎಂದು ಗೊಂದಲದ ಹೇಳಿಕೆ ನೀಡುವವರಿಗೆ ಶಿಸ್ತಿನ ಎಚ್ಚರಿಕೆ ನೀಡುವ ಉದ್ದೇಶದಿಂದ ಇದೇ ಫೆ.8ರಂದು ದಾವಣಗೆರೆಯಲ್ಲಿ ಬಿಜೆಪಿ ನಿಷ್ಠಾವಂತ ಕಾರ್ಯಕರ್ತರ ಸಭೆ ಕರೆಯಲಾಗುತ್ತಿದೆ ಎಂದು ಹರಿಹರ ಶಾಸಕ ಬಿ.ಪಿ. ಹರೀಶ್ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ಇನ್ನೆರಡು ತಿಂಗಳಲ್ಲೇ ಲೋಕಸಭಾ ಚುನಾವಣೆಗೆ ಸಜ್ಜಾಗಬೇಕಿದೆ. ಆದರೆ ಕೆಲವರ ಗೊಂದಲದ ಹೇಳಿಕೆ, ಮುಜುಗರದ ಪ್ರಶ್ನೆಗಳಿಗೆ ಅಂದಿನ ಸಭೆಯಲ್ಲಿ ಉತ್ತರ ಕಂಡುಕೊಳ್ಳಬೇಕಿದೆ ಎಂದು ರೇಣುಕಾಚಾರ್ಯರ ಹೆಸರೇಳದೆ ಪರೋಕ್ಷವಾಗಿ ಅಸಮಾಧಾನ ಹೊರ ಹಾಕಿದರು.

ಬಾಯಲ್ಲಿ ಹೇಳುವುದು ಮೋದಿ ಹೆಸರು. ಬಿಜೆಪಿ ಗೆಲ್ಲಿಸುವೆ ಎಂದು ಕಾಂಗ್ರೆಸ್ ಮನೆಗೆ ಹೋಗುತ್ತಾರೆ. ಅಲ್ಲಿಂದ ಬಂದು ಸಿದ್ದೇಶ್ವರ ಹೊರ ಜಿಲ್ಲೆಯವರು ಎಂದು ಆರೋಪಿಸಿ, ಟಿಕೆಟ್ ಕೇಳುವುದು ಸರಿಯೇ ಎಂದು ಹರೀಶ್ ಪ್ರಶ್ನಿಸಿದರು.

ಲೋಕಸಭಾ ಉಸ್ತುವಾರಿ ಹನಗವಾಡಿ ವೀರೇಶ್ ಮಾತನಾಡಿ, ರಾಜ್ಯದ 28 ಕ್ಷೇತ್ರಗಳಲ್ಲಿ 27 ಕ್ಷೇತ್ರಗಳಲ್ಲಿ ಇಲ್ಲದ ಗೊಂದಲ ದಾವಣಗೆರೆ ಕ್ಷೇತ್ರದಲ್ಲಿ ಮಾತ್ರವಿದೆ. ರಾಷ್ಟ್ರೀಯ ಸಮಿತಿಯು ಕೂಡ ಇವರ ಬಗ್ಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಬಿ.ಎಸ್. ಯಡಿಯೂರಪ್ಪ ಅವರೇ ದೂರವಾಣಿ ಮೂಲಕ ಇವರಿಗೆ ಎಚ್ಚರಿಕೆ ನೀಡಿದ್ದಾಗಿದೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಗದೀಶ್, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಯಶವಂತರಾವ್ ಜಾಧವ್, ತಾಲೂಕು ಬಿಜೆಪಿ ಉಸ್ತುವಾರಿ ಶಾಂತ ರಾಜ್ ಪಾಟೀಲ್, ಬಿಜೆಪಿ ತಾಲ್ಲೂಕು ಮಾಜಿ ಅಧ್ಯಕ್ಷ ಎ.ಬಿ.ಹನುಮಂತಪ್ಪ ಪಕ್ಷ ವಿರೋಧಿ ಚಟುವಟಿಕೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು. ಅವಳಿ ತಾಲ್ಲೂಕಿನಿಂದ ನೂರಕ್ಕೂ ಹೆಚ್ಚು ಸಂಖ್ಯೆಯಲ್ಲಿ ಕಾರ್ಯಕರ್ತರುಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ್ ದಾಸ ಕರಿಯಪ್ಪ, ತಾಲ್ಲೂಕು ಬಿಜೆಪಿ ಮುಖಂಡರುಗಳಾದ ಎ.ಜಿ.ಮಹೇಂದ್ರಗೌಡ, ಕೆ.ವಿ.ಚನ್ನಪ್ಪ, ಸಿ.ಕೆ.ರವಿ, ನೆಲಹೊನ್ನೆ ದೇವರಾಜ್, ಎಂ.ಯು.ನಟರಾಜ್, ಸಾಸ್ವೆಹಳ್ಳಿ ನರಸಿಂಹ ಮತ್ತಿತರರು ಉಪಸ್ಥಿತರಿದ್ದರು.

# ಜಗಳೂರು ; ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಿ

## ಗುತ್ತಿಗೆದಾರರಿಗೆ ಶಾಸಕ ಬಿ.ದೇವೇಂದ್ರಪ್ಪ ಸೂಚನೆ



ಜಗಳೂರು, ಫೆ.5- ನಿಗದಿತ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸಬೇಕು, ಗುಣಮಟ್ಟದ ಕೆಲಸ ಮಾಡಬೇಕು ಎಂದು ಗುತ್ತಿಗೆದಾರರಿಗೆ ಶಾಸಕ ಬಿ.ದೇವೇಂದ್ರಪ್ಪ ಖಡಕ್ ಸೂಚನೆ ನೀಡಿದರು.

ಪಟ್ಟಣದ ಕೆಇಬಿ ನೂತನ ಕಛೇರಿ ಕಟ್ಟಡ ಹಾಗೂ ಸರ್ಕಾರಿ ಪದವಿಪೂರ್ವ ಕಾಲೇಜು ಹೆಚ್ಚುವರಿ ಕೊಠಡಿಗಳ ಕಾಮಗಾರಿಗಳಿಗೆ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು. ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ವಿದ್ಯಾರ್ಥಿ ಗಳ ಸಂಖ್ಯೆಗನುಗುಣವಾಗಿ ಕೊಠಡಿಗಳ ಅವಶ್ಯಕತೆ ಯಿದೆ. ಅಲ್ಲದೆ ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್‌ಗೆ 75 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿರುವ ಮೂರು ಹೊಸ ಕೊಠಡಿಗಳು ಅನುಕೂಲವಾಗಲಿವೆ. ಹಂತ ಹಂತವಾಗಿ ಅಗತ್ಯ ಮೂಲಸೌಕರ್ಯ ಒದಗಿಸಲಾಗುವುದು ಎಂದರು.

ಕೆಇಬಿ ಇಲಾಖೆ ಉಪವಿಭಾಗೀಯ ಕಛೇರಿಯ ಹಳೆ ಕಟ್ಟಡದ ಕಿಷ್ಕಿಂಧೆಯಲ್ಲಿ ಅಧಿಕಾರಿಗಳು ಕಾರ್ಯನಿರ್ವಹಿಸಬೇಕಿತ್ತು. ಆದ್ದರಿಂದ ಹಳೆ ಕಟ್ಟಡವನ್ನು ತೆರವುಗೊಳಿಸಿ, 85.51 ಲಕ್ಷ ರೂ.ವೆಚ್ಚದಲ್ಲಿ ನೂತನ ಸುಸಜ್ಜಿತ ಕಟ್ಟಡ ನಿರ್ಮಾಣಕ್ಕೆ ಭೂಮಿ ಪೂಜೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕುಮಾರ್, ಕೆಪಿಸಿಸಿ ಎಸ್‌ಟಿ ಘಟಕದ ರಾಜ್ಯಾಧ್ಯಕ್ಷ ಕೆ.ಪಿ.ಪಾಲಯ್ಯ, ಕೆಪಿಸಿಸಿ ಸದಸ್ಯ ಕಲ್ಲೇಶ್‌ರಾಜ್ ಪಟೇಲ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಮುಖಂಡರಾದ ಪಲ್ಲಾಗಟ್ಟೆ ಶೇಖರಪ್ಪ, ಗೌಸ್ ಪೀರ್, ಮಾಳಮ್ಮನಹಳ್ಳಿ ವೆಂಕಟೇಶ್, ಬೆಸ್ಕಾಂ ಎಇಇ ಸುಧಾಮಣಿ, ಪ್ರಾಂಶುಪಾಲ ಜಗದೀಶ್, ಬಿಆರ್‌ಸಿ ಡಿ.ಡಿ. ಹಾಲಪ್ಪ, ಗುತ್ತಿಗೆದಾರರು, ಬೆಸ್ಕಾಂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಕಬಡ್ಡಿ ಪಂದ್ಯ : ತೆರೆ

**ಡಿಕೆಎಸ್ ತಂಡ ಪ್ರಥಮ, ಎಸ್.ಡಿ.ಕೆ ಮತ್ತು ಶಿವಸೈನ್ಯ ದ್ವಿತೀಯ, ಎಸ್.ಎಸ್.ಎಂ ತಂಡ ತೃತೀಯ**

ದಾವಣಗೆರೆ, ಫೆ.5- ಜಿಲ್ಲಾ ಅಮೆಚೂರ್ ಕಬಡ್ಡಿ ಅಸೋಸಿಯೇಷನ್ ಮತ್ತು ದೇವನಗರಿ ಕ್ರೀಡಾ ಸಮಿತಿ ವತಿಯಿಂದ ದಾವಣಗೆರೆಯಲ್ಲಿ ಪ್ರಥಮ ಬಾರಿಗೆ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಹೊನಲು ಬೆಳಕಿನ ಕಬಡ್ಡಿ ಪ್ರೀಮಿ ಯರ್ ಲೀಗ್ ಪಂದ್ಯಾವಳಿಯು ಇಂದು ವಿಧ್ಯುಕ್ತವಾಗಿ ತೆರೆ ಕಂಡಿತು. ಡಿಕೆಎಸ್ ತಂಡ ಪ್ರಥಮ ಬಹುಮಾನವನ್ನು ಪಡೆದುಕೊಂಡರೆ, ಎಸ್‌ಡಿಕೆ ಮತ್ತು ಶಿವಸೈನ್ಯ ತಂಡವು ದ್ವಿತೀಯ ಬಹುಮಾನವನ್ನು ಹಂಚಿಕೊಂಡವು. ಎಸ್ಸೆಸ್ಸೆಂ ತಂಡ ತೃತೀಯ ಬಹುಮಾನಕ್ಕೆ ತೃಪ್ತಿ ಪಟ್ಟು ಕೊಂಡಿತು. ವಿಜೇತ ತಂಡಗಳನ್ನು ಶಾಸಕ ಶಾಮನೂರು ಶಿವಶಂಕರಪ್ಪ, ಸಚಿವ ಎಸ್.ಎಸ್.ಮಲ್ಲಿಕಾರ್ಜುನ್, ಜಿಲ್ಲಾ ಕ್ರೀಡಾಪಟುಗಳ ಸಂಘದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಅವರು ಅಭಿನಂದಿಸಿದ್ದಾರೆ.

# ನ್ಯಾಷನಲ್ ಸ್ಪೀಡ್ ಸ್ಕೇಟಿಂಗ್ ಕರ್ನಾಟಕ ತಂಡಕ್ಕೆ ದ್ವಿತೀಯ ಸ್ಥಾನ

ದಾವಣಗೆರೆ, ಫೆ.5- ತಮಿಳುನಾಡು ಕೊಯಿಮತ್ತೂರಿನ ಸ್ವಸ್ತಿಕಾ ಸ್ಕೇಟಿಂಗ್ ರಿಂಕ್, ಸೋಮಯ್ಯಪಾಳ್ಯಂನಲ್ಲಿ ಸ್ಪೀಡ್ ಸ್ಕೇಟಿಂಗ್ ಫೆಡರೇಷನ್ ಆಫ್ ಇಂಡಿಯಾ ಆಯೋಜಿಸಿದ್ದ 23ನೇ ನ್ಯಾಷನಲ್ ಸ್ಪೀಡ್ ಸ್ಕೇಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಭಾಗವಹಿಸಿದ್ದ ಕರ್ನಾಟಕ ರಾಜ್ಯ ತಂಡ ದ್ವಿತೀಯ ಸ್ಥಾನ ಪಡೆದಿದೆ.

ರಾಜ್ಯ ತಂಡದ ಅರ್ಚಿತ್ 4 ಚಿನ್ನ, ವೈಭವ್ 1 ಚಿನ್ನ, ಜೀವನ್ 1 ಚಿನ್ನ, ರುದ್ರಾಂಶ 1 ಚಿನ್ನ, ವಿನಮ್ರತಾ 1 ಚಿನ್ನ, ಪ್ರಥಮ್ 1 ಚಿನ್ನ, ಲಕ್ಷಿತ್ 1 ಬೆಳ್ಳಿ, ಶ್ರೇಯಸ್ 1 ಬೆಳ್ಳಿ ಹಾಗೂ ಫಲಕ್ 2 ಕಂಚು, ಅರುಣ್ 1 ಕಂಚು, ಅರ್ನವ್ 1 ಕಂಚು, ಷಣ್ಮುಖ 1 ಕಂಚು ಪಡೆದಿದ್ದಾರೆ.

ಬೇರೆ ಬೇರೆ ರಾಜ್ಯಗಳ ಒಟ್ಟು ಹದಿನೈದು ತಂಡಗಳು ಪಂದ್ಯಾವಳಿಯಲ್ಲಿ ಭಾಗವಹಿಸಿದ್ದವು. ಕರ್ನಾಟಕ ತಂಡದ ಮುಖ್ಯ ಕೋಚ್ ಆದ ಪೃಥ್ವಿಕಾಂತ್ ಎನ್ ಕೋಟ್ಗಿ ಮತ್ತು ಕ್ರೀಡಾಪಟುಗಳಿಗೆ ಕೆಎಸ್‌ಎಸ್‌ಎ ರಾಜ್ಯ ಕಾರ್ಯದರ್ಶಿ ಮಣಿಕಂಠ, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಸಚಿವರಾದ ಎಸ್.ಎಸ್ ಮಲ್ಲಿಕಾರ್ಜುನ್, ಮಹಾನಗರ ಪಾಲಿಕೆ ಮಾಜಿ ವಿರೋಧ ಪಕ್ಷ ನಾಯಕ ಗಡಿಗುಡಾಳ್ ಮಂಜುನಾಥ್, ಸೌಭಾಗ್ಯ ನಾಗರಾಜ್, ದಾವಣಗೆರೆ ಜಿಲ್ಲಾ ಕಾರ್ಯದರ್ಶಿ ಆಕಾಶ್, ನೀಲಕಂಠ, ಶೈಲಾ ನೀಲಕಂಠ, ಬಸಮ್ಮ ದೊಡ್ಡಬಸಪ್ಪ ಅಭಿನಂದಿಸಿದ್ದಾರೆ.



# ಮೀಸಲಾತಿಯ ಶೇ.50ರ ಮಿತಿ ರದ್ದು : ರಾಹುಲ್ ಭರವಸೆ

ರಾಂಚಿ, ಫೆ. 5 - ಐ.ಎನ್.ಡಿ.ಐ.ಎ. ಮೈತ್ರಿಕೂಟ ಅಧಿಕಾರಕ್ಕೆ ಬಂದಲ್ಲಿ ಮೀಸಲಾತಿ ಮೇಲಿರುವ ಶೇ.50ರ ಮಿತಿಯನ್ನು ತೆಗೆದು ಹಾಕುವುದಾಗಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭರವಸೆ ನೀಡಿದ್ದಾರೆ.

ಐ.ಎನ್.ಡಿ.ಐ.ಎ. ಸರ್ಕಾರ ಅಧಿಕಾರಕ್ಕೆ ಬಂದ ನಂತರ ಜಾತಿ ಗಣತಿಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದೂ ಅವರು ಹೇಳಿದ್ದಾರೆ. ಈಗಿರುವ ಕಾನೂನಿನ ಅನ್ವಯ ಶೇ.50ಕ್ಕಿಂತ ಹೆಚ್ಚಿನ ಮೀಸಲಾತಿ ಕಲ್ಪಿಸಲು ಸಾಧ್ಯವಿಲ್ಲ. ಹೀಗಾಗಿ ಐ.ಎನ್.ಡಿ.ಐ.ಎ. ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮೀಸಲಾತಿಯ ಮೇಲಿರುವ ಮಿತಿಯನ್ನು ತೆಗೆದು ಹಾಕಲಾಗುವುದು ಎಂದವರು ಹೇಳಿದರು.


**ಬೇಕಾಗಿದ್ದಾರೆ**
ಹೋಟೆಲ್ ಕೆಲಸಕ್ಕೆ ಮಹಿಳೆಯರು, ಹುಡುಗರು. ಅಡುಗೆ ಭಟ್ಟರು ಬೇಕಾಗಿದ್ದಾರೆ. ಸಂಪರ್ಕಿಸಿ :
ಮನೆ ಅಡುಗೆ ಹಳ್ಳಿಊಟ
ವಿದ್ಯಾನಗರ, ದಾವಣಗೆರೆ.
ಮೊ.63635 43487

**ಬೇಕಾಗಿದ್ದಾರೆ**
ಮನೆಯಲ್ಲಿ ಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ, ಆಸಕ್ತರು ಸಂಪರ್ಕಿಸಿ, ಭೇಟಿಯ ಸಮಯ : ಬೆಳಿಗ್ಗೆ 11.30 ರಿಂದ ಸಂಜೆ 5 ರವರೆಗೆ. ಸಂಪರ್ಕಿಸಿ :
08192 254736

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಹೌಸಿಂಗ್ ಬೋರ್ಡ್ ತುಂಗಭದ್ರಾ ಬಡಾವಣೆ (ಕಮರ್ಷಿಯಲ್ ಸೈಟ್)
40X40 (55 ಲಕ್ಷಕ್ಕೆ)
ಪಶ್ಚಿಮ- ದಕ್ಷಿಣ ಕಾರ್ನರ್, 60 ಅಡಿ ರಸ್ತೆಗೆ
ಕಿರಣ್ ಭೂಸ್ನೂರ್ : 98440-63409
(ರಿಜಿಸ್ಟರ್ ಖರ್ಚು + ಕಮೀಷನ್ ಸೇರಿ)

**ಸೈಟುಗಳು ಮಾರಾಟಕ್ಕಿವೆ**
30x40 East, ಬನಶಂಕರಿ ಲೇಔಟ್‌ನಲ್ಲಿ 30x40 North, ಸಿದ್ದವೀರಪ್ಪ ಬಡಾವಣೆಯಲ್ಲಿ, 40x50 South, 40x60 North, ವಿನಾಯಕ ಬಡಾವಣೆಯಲ್ಲಿ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ ಮನೆ ಲೀಸ್‌ಗಿದೆ**
ಡಾಲರ್ಸ್ ಕಾಲೋನಿಯಲ್ಲಿ 30x40 ಉತ್ತರ, 40x45 ಉತ್ತರ-ಪಶ್ಚಿಮ, 30x40 ದಕ್ಷಿಣ, 40x30 ದಕ್ಷಿಣ, ಆಂಜನೇಯ ಬಡಾವಣೆಯಲ್ಲಿ ಮನೆ ಲೀಸ್‌ಗೆ ಇದೆ. 2 ಬೆಡ್ ರೂಮ್, ಮೊದಲನೆ ಮಹಡಿಯಲ್ಲಿ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಕ್ಲಿನಿಕ್‌ನಲ್ಲಿ ಕೆಲಸ ನಿರ್ವಹಿಸಲು ಮಹಿಳಾ ಸಿಬ್ಬಂದಿ ಬೇಕಾಗಿದ್ದಾರೆ.
ವಿಳಾಸ : ಡಾ. ಎನ್. ಹೆಚ್. ಕೃಷ್ಣ, ಜೈನ್ ಲ್ಯಾಬ್ ಕೆಳಗೆ, ಮೋತಿ ವೀರಪ್ಪ ಕಾಲೇಜು ಹಿಂಭಾಗ, ಪಿ.ಜೆ. ಬಡಾವಣೆ, ದಾವಣಗೆರೆ.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ವಾರ್ಡ್ ಬಾಯ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ಸಂಪರ್ಕಿಸಿ
ಶ್ರೀ ಗುರುನಾಥ ಆಸ್ಪತ್ರೆ
ಕೆ.ಆರ್.ರಸ್ತೆ ದಾವಣಗೆರೆ.
96633 67838

**ಬೇಕಾಗಿದ್ದಾರೆ**
ವೀರಶೈವ ಖಾನಾವಳಿಯಲ್ಲಿ ಕ್ಲೀನರ್ ಅಂಡ್ ಸಪ್ಲೈಯರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ.
ಸಂಬಳ : 12000, ಸಂಪರ್ಕಿಸಿ
99017 70830, 99458 29046

**ಮನೆಯ ರೀ ಪೇಟಿಂಗ್**
ಮನೆಯ ಒಳಗಡೆ ಮತ್ತು ಹೊರಗಡೆ ಹೊಸದ ರೀತಿಯಾಗಿ ನಿಮ್ಮ ಇಚ್ಚೆಗೆ ಅನುಗುಣವಾಗಿ ಉತ್ತಮವಾದ ಪೇಂಟ್ ಮಾಡಿ ಕೊಡಲಾಗುವುದು. ದರ ಕಡಿಮೆ ಉತ್ತಮ ಕೆಲಸಕ್ಕಾಗಿ ಸಂಪರ್ಕಿಸಿ :
72046 33302

**WANTED**
Experienced Salesman and Sales Girls
(B.Com / MBA) Accountant
*Samyak Ceramics*
Hadadi road, Davangere
91106 41670

**ಸೈಟುಗಳು ಮಾರಾಟಕ್ಕಿವೆ**
ಪಿ.ಬಿ.ರಸ್ತೆಗೆ ಹತ್ತಿರವಿರುವ ಶನೈಶ್ವರ ದೇವಸ್ಥಾನ ಹಿಂಭಾಗ ಕಾಡಪ್ಪನವರ ಲೇಔಟ್‌ನಲ್ಲಿ 30x40, 30x40 East,
Rate : 2600/-
ದೈವಿಕ ಐನಳ್ಳಿ ಏಜೆಂಟ್
99456 43223

**ಸೈಟುಗಳು ಮಾರಾಟಕ್ಕಿವೆ**
ಕರ್ನಾಟಕ ಗೃಹ ಮಂಡಳಿಯಲ್ಲಿ 30x50 ಉತ್ತರ, 30x50 ಪಶ್ಚಿಮ, 40x60 ಉತ್ತರ, 120 ಅಡಿ ರಸ್ತೆಗೆ ಹೊಂದಿಕೊಂಡು 40x60 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮಾರಾಟಕ್ಕಿದೆ**
ನಮ್ಮಲ್ಲಿ 4 ಕಬ್ಬಿಣದ (8-9 ವರ್ಷದ) ಹಳೆಯ ಬೀರುಗಳಿಗೆ ಆಸಕ್ತರು ಸಂಪರ್ಕಿಸಿ.
63612 64113

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಬೇಕಾಗಿದ್ದಾರೆ**
ಕಿರಾಣಿ ಅಂಗಡಿ ಕೆಲಸಕ್ಕೆ ಅನುಭವ ಉಳ್ಳವರು ಬೇಕಾಗಿದ್ದಾರೆ.
ಶ್ರೀ ಗುರು ಕೊಟ್ಟೂರೇಶ್ವರ ಪ್ರಾವಿಜನ್ ಸ್ಟೋರ್ ಐ.ಟಿ.ಐ ಕಾಲೇಜು, # 617/6, 60 ಅಡಿ ರೋಡ್ ನಿಟ್ಟುವಳ್ಳಿ, ದಾವಣಗೆರೆ-577005.
95919 21004,73381 00402

**ತಕ್ಷಣ ಬೇಕಾಗಿದ್ದಾರೆ**
ಸಹಾಯಕರು, ಹುಡುಗರು, ಹುಡುಗಿಯರು ಬೇಕಾಗಿದ್ದಾರೆ. ಪಾರ್ಟ್‌ಟೈಂ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
79751 07268, 8861438237

**ಬೇಕಾಗಿದ್ದಾರೆ**
ಮೆಸ್‌ನಲ್ಲಿ ಕೆಲಸ ಮಾಡಲು ಭಟ್ಟರು ಬೇಕಾಗಿದ್ದಾರೆ.
ಸಂಪರ್ಕಿಸಿ :
96321 64685

**ಮನೆ ಬಾಡಿಗೆಗೆ ಇದೆ**
ದೇವರಾಜ್ ಅರಸ್ ಬಡಾವಣೆ, ಬಿ ಬ್ಲಾಕ್, 7ನೇ ಕ್ರಾಸ್, ದಾವಣಗೆರೆ ಇಲ್ಲಿ 15x60 ಅಳತೆಯ ಡಬಲ್ ಬೆಡ್ ರೂಂ ಇರುವ ಮೊದಲನೇ ಮಹಡಿ ಮನೆ ಬಾಡಿಗೆಗೆ ಇದೆ. ಸಸ್ಯಹಾರಿಗಳಿಗೆ ಮಾತ್ರ.
95358 50456
ಶ್ರೀನಿಧಿ ಕೆ.ಜಿ.

**ಮನೆಗಳು ಬಾಡಿಗೆಗೆ**
ದೊರೆಯುತ್ತವೆ ವಿಚಾರಿಸಿ
ಎಸ್.ಎಸ್. ಎ ಬ್ಲಾಕ್‌ನಲ್ಲಿ ಸಿದ್ದವೀರಪ್ಪ ಬಡಾವಣೆ ಸಿಂಗಲ್ ಬೆಡ್ ರೂಮ್ ಮನೆ, ಡಬಲ್ ಬೆಡ್ ರೂಮ್ ಮನೆ, ಡಬಲ್ ಬೆಡ್ ರೂಮ್ ಇಂಡಿಪೆಂಡೆಂಟ್ ಹೌಸ್ ಶಿವ-ಪಾರ್ವತಿ.
ದಕ್ಷಿತ್ ಐನಳ್ಳಿ ಏಜೆಂಟ್
77955 06795


**WANTED**
• SALESMAN
• SALES GIRLS
• HELPERS
• CASHIER • MANAGERE
CONTACT: GANGAVATHI SILK SAREE CENTER
BINNY COMPANY ROAD, DAVANGERE - 577001

**ಬಾಡಿಗೆಗೆ ಇದೆ**
5ನೇ ಮೇನ್, ರಾಮ್ ಅಂಡ್ ಕೋ ಸರ್ಕಲ್ ಹತ್ತಿರ, 1ನೇ ಮಹಡಿಯಲ್ಲಿ ಅಟ್ಯಾಚ್ ಬಾತ್ ರೂಮ್ ಇರುವ ರೂಮ್ ಬಾಡಿಗೆಗೆ ಇದೆ. ಸಂಪರ್ಕಿಸಿ :
97431 50555

**ಸೈಟು ಮಾರಾಟಕ್ಕಿದೆ**
ದಾವಣಗೆರೆ ರವೀಂದ್ರನಾಥ ಬಡಾವಣೆಯಲ್ಲಿ 50x60 North-East, Corner site ಮಾರಾಟಕ್ಕಿದೆ (Shashi detergent ಬಟ್ಟೆ ಸೋಪ್ ಫ್ಯಾಕ್ಟರಿ ಎದುರುಗಡೆ) ಸಂಪರ್ಕಿಸಿ :
90195 54141, 98454 17444

**ಕೆಲಸಕ್ಕೆ ಬೇಕಾಗಿದ್ದಾರೆ**
ಬೇಕರಿ ಕೌಂಟರ್‌ನಲ್ಲಿ ಕೆಲಸ ಮಾಡಲು ಇಚ್ಛಿಸುವ ಹೆಣ್ಣು ಮಕ್ಕಳು ಬೇಕಾಗಿರುತ್ತಾರೆ.
ಆಸಕ್ತರು ಸಂಪರ್ಕಿಸಿ.
79758 46679, 94485 34147

**ರಕ್ತ ದಾನ ಶ್ರೇಷ್ಠ ದಾನ**

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2 & 3 ರಂದು
ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಬೋರ್ ಪಾಯಿಂಟ್**
ಹೊಲ ಮತ್ತು ಮನೆ ಗೆ ಬೋರ್ ಪಾಯಿಂಟ್ ಮಾಡಿಕೊಳ್ಳಲಾಗುವುದು ಮತ್ತು ಮದ್ಯ ವ್ಯಸನಿಗಳಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸುವ ಔಷಧಿ ದೊರೆಯುತ್ತದೆ. (ಬಿಡಿ, ಸಿಗರೇಟ್, ತಂಬಾಕು, ಗುಟ್ಕಾ ಇವುಗಳನ್ನೂ ಸಹ ಬಿಡುತ್ತಾರೆ)
81519 77052, 70191 39546

**ಬೇಕಾಗಿದ್ದಾರೆ**
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಆನಗೋಡು ಸುತ್ತ-ಮುತ್ತ ಇರುವ ಉತ್ಸಾಹಿ ಯುವಕರು ಬೇಕಾಗಿದ್ದಾರೆ ಮತ್ತು ಬಂಕ್‌ನಲ್ಲಿ ಕ್ಲೀನಿಂಗ್ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ಸಂಪರ್ಕಿಸಿ :
90082 28222, 99001 42052

**ROOM FOR RENT**
Single attached Room with all facilites available with wardrobe and cots system at MCC "A" block, Near Ram Krishna Ashrama, Beside Ganesha Temple
97405 69252

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು ಬೆಡ್ ರಿಡನ್ ಪೇಷಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಮಾಡಿಸುತ್ತೇವೆ.
85508 36642, 76191 70395

**ಬೋರ್ ಪಾಯಿಂಟ್**
ವೈಜ್ಞಾನಿಕ ವಿಧಾನದಿಂದ ಬೋರ್ ಪಾಯಿಂಟ್ ಮಾಡಿಕೊಡಲಾಗುವುದು
ಸಂಪರ್ಕಿಸಿ :
86609 98651
97436 54365

**ತಕ್ಷಣ ಬೇಕಾಗಿದ್ದಾರೆ**
ಹೋಲ್ ಸೇಲ್ ಕಿರಾಣಿ ಅಂಗಡಿಗೆ ಕ್ಯಾಷಿಯರ್ ಬೇಕಾಗಿದ್ದಾರೆ.
ಸಂಪರ್ಕಿಸಿ :
88844 43739

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಗಾರ್ಡ್‌ಗಳು ದಾವಣಗೆರೆ ಸುತ್ತ-ಮುತ್ತ. ಆಕರ್ಷಕ ಸಂಬಳ. ESI ಮತ್ತು PF ಇರುತ್ತದೆ. ಅಕೌಂಟೆಂಟ್ ಬೇಕಾಗಿದ್ದಾರೆ. Tally, GST ಜ್ಞಾನವುಳ್ಳವರು ಬೇಕಾಗಿದ್ದಾರೆ.
91102 03348, 83173 35325, 86603 98210

**ಹೋಟೆಲ್ ಗಾಡಿ ಬಾಡಿಗೆಗಿದೆ**
ತಳ್ಳುವ ಕಬ್ಬಿಣದ ಗಾಡಿ
8 ಡೋರ್, 3 ಸೆಲ್ಫ್ ಕೆಳಗೆ ಬಾಕ್ಸ್, 4 ಬೈಕ್ ವ್ಹೀಲ್‌ಗಳಿವೆ.
90080 92650

**24X7 CAR TAXI**
ಕಾರ್ ಬಾಡಿಗೆಗೆ
ಸಂಪರ್ಕಿಸಿ :
86609 98651
97436 54365

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಸೈಟುಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಎಸ್.ಎಸ್. ಲೇಔಟ್, ಶಿವ-ಪಾರ್ವತಿ, ಗ್ಲಾಸ್ ಹೌಸ್ ಲೇಔಟ್, ಡಾಲರ್ಸ್ ಕಾಲೋನಿ, ಜೆ.ಹೆಚ್. ಪಟೇಲ್, ಶಂಕರ್ ವಿಹಾರ್ ಲೇಔಟ್ ಮತ್ತು ಕಮರ್ಷಿಯಲ್ ಸೈಟು, ಇನ್ವೆಸ್ಟ್ ಸೈಟು, ಮನೆಗಳು ಮತ್ತು ಹೊಲಗಳು ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ.
97315 12365

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

# ನಾಳೆಯಿಂದ ಸುತ್ತೂರು ಜಾತ್ರೆ ಸಂಭ್ರಮ

**ಫೆ.10 ರಂದು 'ಪಾರ್ವತಮ್ಮ ಮತ್ತು ಶಾಮನೂರು ಶಿವಶಂಕರಪ್ಪ ಅತಿಥಿ ಗೃಹ' ಉದ್ಘಾಟಿಸಲಿರುವ ಕೇಂದ್ರ ಗೃಹ ಸಚಿವ ಅಮಿತ್ ಷಾ**

ಮೈಸೂರು, ಫೆ.5- ನಂಜನಗೂಡು ತಾಲ್ಲೂಕಿನ ಸುತ್ತೂರಿನಲ್ಲಿ ನಾಳೆ ದಿನಾಂಕ 6ರಿಂದ 11ರವರೆಗೆ ಶಿವರಾತ್ರೀಶ್ವರ ಶಿವಯೋಗಿಗಳ ಜಾತ್ರಾ ಮಹೋತ್ಸವ (ಸುತ್ತೂರು ಜಾತ್ರೆ) ಆಯೋಜಿಸಲಾಗಿದೆ.

ಸುತ್ತೂರು ವೀರಸಿಂಹಾಸನ ಮಹಾಸಂಸ್ಥಾನ ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಜಾತ್ರೆಯ ಅಂಗವಾಗಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಬಹುತೇಕ ತಯಾರಿಗಳು ಪೂರ್ಣಗೊಂಡಿವೆ.

'ಬರಗಾಲದಲ್ಲಿ ಕಡಿಮೆ ನೀರು ಬಳಸಿ, ಲಾಭದಾಯಕ ಕೃಷಿ ಮಾಡುವ ಬಗೆ' ತಿಳಿಸುವ ಪ್ರಾತ್ಯಕ್ಷಿಕೆ ಒಳಗೊಂಡ ಕೃಷಿ ಮೇಳ, ಕೃಷಿ ಪರಿಕರಗಳ ವಸ್ತುಪ್ರದರ್ಶನ, ಆರೋಗ್ಯ ತಪಾಸಣೆ ಶಿಬಿರ, ಸಾಂಸ್ಕೃತಿಕ ಮೇಳ, ಸಾಮೂಹಿಕ ವಿವಾಹ, ರಾಜ್ಯಮಟ್ಟದ ಭಜನಾ ಮೇಳ, ದೇಶೀ ಆಟಗಳು, ಸೋಬಾನೆ ಪದ, ರಂಗೋಲಿ ಸ್ಪರ್ಧೆ, ಧಾರ್ಮಿಕ ಸಭೆ, ಚಿತ್ರಸಂತೆ, ಚಿತ್ರಕಲೆ ಹಾಗೂ ಗಾಳಿಪಟ ಸ್ಪರ್ಧೆ, ಕುಸ್ತಿ ಪಂದ್ಯಾವಳಿ, ತೆಪ್ಪೋತ್ಸವ, ಕಪಿಲಾರತಿ, ಲಕ್ಷದೀಪೋತ್ಸವ ಕಾರ್ಯಕ್ರಮಗಳು ಜರುಗಲಿವೆ.

ವಿವಿಧ ಜಾತಿಗಳ ಮಠಾಧೀಶರು, ಧರ್ಮಗುರುಗಳು, ಕೇಂದ್ರ, ರಾಜ್ಯ ಸಚಿವರು ಸೇರಿ ಹಲವು ಗಣ್ಯರು ಈ ಜಾತ್ರೆಯಲ್ಲಿ ಭಾಗವಹಿಸಲಿದ್ದಾರೆ. ಒಟ್ಟು 25 ಲಕ್ಷ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಫೆ.6ರಂದು ಸಂಜೆ 4ಕ್ಕೆ ವಸ್ತುಪ್ರದರ್ಶನ, ಕೃಷಿ ಮೇಳ, ಆರೋಗ್ಯ ತಪಾಸಣಾ ಶಿಬಿರ, ಸಾಂಸ್ಕೃತಿಕ ಮೇಳ, ದೋಣಿ ವಿಹಾರದ ಉದ್ಘಾಟನೆ ನಡೆಯಲಿದೆ.

ಫೆ.7ರಂದು ಬೆಳಿಗ್ಗೆ 10ಕ್ಕೆ ಸಾಮೂಹಿಕ ವಿವಾಹಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ. ಫೆ.8ರಂದು ಬೆಳಿಗ್ಗೆ 10.30ಕ್ಕೆ ರಥೋತ್ಸವ ನೆರವೇರಲಿದೆ. ನಂತರ ಧಾರ್ಮಿಕ ಸಭೆ, ಸಂಜೆ 4ಕ್ಕೆ ದನಗಳ ಜಾತ್ರೆ, ಚಿತ್ರಕಲಾ ಮತ್ತು ಗಾಳಿಪಟ ಸ್ಪರ್ಧೆ ನಡೆಯಲಿದೆ.

ಫೆ.9ರಂದು ಬೆಳಿಗ್ಗೆ 10.30ಕ್ಕೆ ಕೃಷಿ ವಿಚಾರ ಸಂಕಿರಣ ನಡೆಯಲಿದೆ. ಜೈವಿಕ ಗೊಬ್ಬರ ಉತ್ಪಾದನಾ ಘಟಕದ ಶಿಲಾನ್ಯಾಸವನ್ನು ಕೇಂದ್ರ ರಾಸಾಯನಿಕ ಹಾಗೂ ರಸಗೊಬ್ಬರ ಸಚಿವ ಭಗವಂತ್ ಖೂಬಾ ನೆರವೇರಿಸಲಿದ್ದಾರೆ.

ಫೆ.9ರಂದು ಕುಸ್ತಿ ಪಂದ್ಯಾವಳಿ ನಡೆಯಲಿದ್ದು, ವಿಜೇತರಿಗೆ 'ಸುತ್ತೂರು ಕುಮಾರ' ಹಾಗೂ 'ಸುತ್ತೂರು ಕೇಸರಿ' ಪ್ರಶಸ್ತಿ ನೀಡಲಾಗುವುದು. ಸಂಜೆ 4.30ಕ್ಕೆ ಕೃಷಿ ವಿಚಾರ ಸಂಕಿರಣ ನಡೆಯಲಿದೆ.

ಫೆ.10ರ ಶನಿವಾರ ಬೆಳಿಗ್ಗೆ ಸಾಂಸ್ಥಿಕ ಮೇಳ, ಭಜನಾ ಮೇಳ, ದನಗಳ ಜಾತ್ರೆ ಸಮಾರೋಪ ನಡೆಯಲಿದೆ.

ಅದೇ ದಿನ ಸಂಜೆ 5 ಗಂಟೆಗೆ ಕಾಂಗ್ರೆಸ್‌ನ ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಕುಟುಂಬದವರು ನಿರ್ಮಿಸಿಕೊಟ್ಟಿರುವ 'ಪಾರ್ವತಮ್ಮ ಮತ್ತು ಶಾಮನೂರು ಶಿವಶಂಕರಪ್ಪ ಅತಿಥಿ ಗೃಹ'ವನ್ನು ಕೇಂದ್ರ ಗೃಹ ಸಚಿವ ಅಮಿತ್ ಷಾ ಫೆ.10ರಂದು ಸಂಜೆ 5ಕ್ಕೆ ಉದ್ಘಾಟಿಸಲಿದ್ದಾರೆ.

ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ, ತುಮಕೂರಿನ ಶ್ರೀ ಸಿದ್ದಲಿಂಗ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದಾರೆ.

ಶಾಸಕ ಡಾ.ಶಾಮನೂರು ಶಿವಶಂಕರಪ್ಪ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಾಜಿ ಮುಖ್ಯಮಂತ್ರಿಗಳಾದ ಹೆಚ್.ಡಿ. ಕುಮಾರಸ್ವಾಮಿ, ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಸಚಿವ ಡಾ.ಸಿ.ಟಿ. ರವಿ, ಮಾಜಿ ಸಂಸದ ಡಾ. ಪ್ರಭಾಕರ ಕೋರೆ, ಉದ್ಯಮಿ ಎಸ್.ಎಸ್. ಗಣೇಶ್ ಉಪಸ್ಥಿತರಿರಲಿದ್ದಾರೆ.

ಫೆ.11ರಂದು ಕೃಷಿ ಮೇಳ ವಸ್ತು ಪ್ರದರ್ಶನದ ಸಮಾರೋಪವಿದೆ.




# ದೇಶ ವಿಭಜನೆ ಹೇಳಿಕೆಗೆ ಆಕ್ರೋಶ, ಪ್ರತಿಭಟನೆ

## ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ವಜಾಕ್ಕೆ ಬಿಜೆಪಿ ಯುವ ಮೋರ್ಚಾ ಆಗ್ರಹ

ದಾವಣಗೆರೆ, ಫೆ.5- ದೇಶ ವಿಭಜನೆ ಹೇಳಿಕೆ ಮೂಲಕ ದೇಶದ ಐಕ್ಯತೆಗೆ ಧಕ್ಕೆ ತಂದಿರುವ ಕಾಂಗ್ರೆಸ್ ಸಂಸದ ಡಿ.ಕೆ. ಸುರೇಶ್ ಅವರನ್ನು ಈ ಕೂಡಲೇ ವಜಾಗೊಳಿಸುವಂತೆ ಆಗ್ರಹಿಸಿ, ಜಿಲ್ಲಾ ಬಿಜೆಪಿ ಯುವ ಮೋರ್ಚಾ ಕಾರ್ಯಕರ್ತರು ನಗರದ ಜಯದೇವ ವೃತ್ತದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಹಿಂದಿನಿಂದಲೂ ದೇಶ ವಿಭಜನೆಯ ಮಾತುಗಳನ್ನಾಡುತ್ತಾ ಬಂದಿದೆ ಎಂದು ಮಹಾ ನಗರ ಪಾಲಿಕೆ ಮಾಜಿ ಮೇಯರ್ ಎಸ್.ಟಿ. ವೀರೇಶ್ ಈ ಸಂದರ್ಭದಲ್ಲಿ ಆರೋಪಿಸಿದರು.

ಡಿ.ಕೆ. ಸುರೇಶ್ ಅವರ ದಕ್ಷಿಣ ಭಾರತ ಪ್ರತ್ಯೇಕತೆಯ ಹೇಳಿಕೆಯನ್ನು ತೀವ್ರವಾಗಿ ಖಂಡಿಸುತ್ತೇವೆ. ಕೂಡಲೇ ಅವರನ್ನು ಸಂಸದ ಸ್ಥಾನದಿಂದ ವಜಾ ಮಾಡಬೇಕು. ಸುರೇಶ್ ಅವರು ದೇಶದ ಜನರ ಕ್ಷಮೆ ಕೇಳಬೇಕು ಎಂದು ಆಗ್ರಹಿಸಿದರು.

ಸುರೇಶ್ ಹೇಳಕೆ ಖಂಡಿಸಿ ಬೆಂಗಳೂರಿನಲ್ಲಿ ಶಾಂತಿಯುತ ಹೋರಾಟ ನಡೆಸುತ್ತಿದ್ದ ಯುವ ಮೋರ್ಚಾ ಕಾರ್ಯಕರ್ತರ ಮೇಲೆ ಪೊಲೀಸರು ನಡೆಸಿರುವ ಹಲ್ಲೆ ಖಂಡನೀಯ ಎಂದು ವೀರೇಶ್ ಹೇಳಿದರು. ಯುವ ಮೋರ್ಚಾ ಕಾರ್ಯಕರ್ತರು ಸರ್ಕಾರದ ದಬ್ಬಾಳಿಕೆಗೆ ಹೆದರುವುದಿಲ್ಲ. ದೇಶವನ್ನು ಉಳಿಸುವ ಹೋರಾಟಕ್ಕೆ ಎಂದಿಗೂ ಸಿದ್ಧರಾಗಿರುತ್ತೇವೆ ಎಂದರು.

ಪಾಲಿಕೆ ವಿಪಕ್ಷ ನಾಯಕ ಕೆ.ಪ್ರಸನ್ನಕುಮಾರ್, ಎಲ್.ಎಲ್. ಶಿವಪ್ರಕಾಶ್, ಧನುಷ್, ಶಿವನಗೌಡ ಪಾಟೀಲ್, ಟಿಂಕರ್ ಮಂಜಣ್ಣ, ಪ್ರವೀಣ್ ಜಾಧವ್, ನವೀನ್ ಕುಮಾರ್, ರಾಜೇಶ್ವರಿ, ಗೌತಮ್ ಜೈನ್, ಸಚಿನ್, ಶಿವರಾಜ ಪಾಟೀಲ್, ಮಂಜಾನಾಯ್ಕ, ವಿನಯ್, ಗೋವಿಂದ್ ರಾಜ್, ಮಂಜುನಾಥ ಚುಕ್ಕಿ, ರಾಕೇಶ್, ಮಂಜು, ನವೀನ್ ಕುಮಾರ್ ಇತರರು ಪ್ರತಿಭಟನೆಯಲ್ಲಿದ್ದರು.

# ರಾಜ್ಯಮಟ್ಟದ ಹೊನಲು ಬೆಳಕಿನ ಮಹಿಳಾ ಫುಟ್‌ಬಾಲ್ ಲೀಗ್ ಪಂದ್ಯಾವಳಿಗೆ ತೆರೆ

**ಒತ್ತಡ ಮುಕ್ತ ಜೀವನಕ್ಕೆ ಕ್ರೀಡೆ ಸಹಕಾರಿ : ಡಾ।। ಪ್ರಭಾ ಮಲ್ಲಿಕಾರ್ಜುನ್**

ದಾವಣಗೆರೆ, ಫೆ.5- ಪ್ರತಿಯೊಬ್ಬರೂ ಯಾವುದಾದರೂ ಒಂದು ಕ್ರೀಡೆಯಲ್ಲಿ ಭಾಗವಹಿಸುವ ಮೂಲಕ ತಮ್ಮ ಒತ್ತಡ ಕಳೆದುಕೊಳ್ಳಬೇಕು ಎಂದು ಬಾಪೂಜಿ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಸದಸ್ಯರು ಹಾಗೂ ಎಸ್.ಎಸ್ ಲೈಫ್ ಕೇರ್ ಟ್ರಸ್ಟ್‌ನ ಟ್ರಸ್ಟಿ ಡಾ।। ಪ್ರಭಾ ಮಲ್ಲಿಕಾರ್ಜುನ್ ಅವರು ಕರೆ ನೀಡಿದರು.

ಅವರಿಂದು ದಾವಣಗೆರೆ ಜಿಲ್ಲಾ ಫುಟ್‌ಬಾಲ್ ಅಸೋಸಿಯೇಷನ್ ವತಿಯಿಂದ ನಗರದ ಲೂರ್ಡ್ಸ್ ಬಾಯ್ಸ್ ಸ್ಕೂಲ್ ಆವರಣದಲ್ಲಿ ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಹೊನಲು ಬೆಳಕಿನ ಮಹಿಳಾ ಫುಟ್‌ಬಾಲ್ ಲೀಗ್ ಪಂದ್ಯಾವಳಿ ಮುಕ್ತಾಯ ಸಮಾರಂಭದಲ್ಲಿ ಭಾಗವಹಿಸಿ, ಬಹುಮಾನ ವಿತರಿಸಿ ಮಾತನಾಡಿದರು.

ಇಂದು ಬಹಳಷ್ಟು ಜನರು ಒತ್ತಡ ಜೀವನದಲ್ಲಿ ಜೀವಿಸುತ್ತಿದ್ದು, ಇಂತಹ ಒತ್ತಡದ ಜೀವನವನ್ನು ಸಮರ್ಪಕವಾಗಿ ನಿರ್ವಹಿಸಲು ಕ್ರೀಡೆ ಸಹಕಾರಿ ಆಗಲಿದೆ ಎಂದರು.

ಕ್ರೀಡಾಕೂಟಗಳಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ ಆರೋಗ್ಯವಂತ ಜೀವನ ನಡೆಸಬಹುದು. ಜೊತೆಗೆ ದುಶ್ಚಟಗಳಿಂದ ದೂರವಿರಲು ಅನುಕೂಲವಾಗಲಿದೆ ಎಂದು ತಿಳಿಸಿದರು.

ಜಿಲ್ಲಾ ಫುಟ್‌ಬಾಲ್ ಅಸೋಸಿಯೇಷನ್ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ ಮಾತನಾಡಿ, ದಾವಣಗೆರೆಯಲ್ಲಿ ರಾಜ್ಯಮಟ್ಟದ ಪಂದ್ಯಾವಳಿ ನಡೆದಿರುವುದು ದಾವಣಗೆರೆಗೆ ಹೆಮ್ಮೆಯ ವಿಚಾರ.

ಮುಂದಿನ ದಿನಗಳಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ ಮತ್ತು ಎಸ್.ಎಸ್.ಮಲ್ಲಿಕಾರ್ಜುನ್ ಅವರ ಸಹಕಾರದೊಂದಿಗೆ ರಾಷ್ಟ್ರ ಮಟ್ಟದ ಕ್ರೀಡಾಕೂಟವನ್ನು ಆಯೋಜಿಸಲಾಗುವುದು ಎಂದರು. ಈ ಕ್ರೀಡಾಕೂಟದಲ್ಲಿ 15 ವರ್ಷದ ಒಳಗಿನ ಹಳಿಯಾಳ ಫುಟ್‌ಬಾಲ್ ಕ್ಲಬ್ ಪ್ರಥಮ ಸ್ಥಾನ, ದಿ ಯುನೈಟೆಡ್ ಫುಟ್‌ಬಾಲ್ ಕ್ಲಬ್ ಹಾವೇರಿ ಇವರು ದ್ವಿತೀಯ ಸ್ಥಾನ ಪಡೆದರು. ಕವಿತಾ ಬೆಸ್ಟ್ ಗೋಲ್ ಕೀಪರ್, ಅರ್ಫಿನಾ ಬೆಸ್ಟ್ ಪ್ಲೇಯರ್, ಅಂಜಲಿ ಅತಿ ಹೆಚ್ಚು ಗೋಲ್‌ಗಳನ್ನು ಹೊಡೆದ ಪ್ರಶಸ್ತಿಗೆ ಭಾಜನರಾದರು. 13 ವರ್ಷದೊಳಗಿನ ಪಂದ್ಯಾವಳಿಯಲ್ಲಿ ಸೆಂಟ್ ಜವೇರಿಯಾ ಫುಟ್‌ಬಾಲ್ ಕ್ಲಬ್ ಪ್ರಥಮ ಸ್ಥಾನ, ದಿ ಯುನೈಟೆಡ್ ಫುಟ್‌ಬಾಲ್ ಕ್ಲಬ್ ರಾಣೇಬೆನ್ನೂರು, ಇವರು ದ್ವಿತೀಯ ಸ್ಥಾನ ಪಡೆದರು. ಚಿನ್ಮಯ್ ಬೆಸ್ಟ್ ಗೋಲ್ ಕೀಪರ್, ವೀಕ್ಷಾ ಬೆಸ್ಟ್ ಪ್ಲೇಯರ್, ಕವಿತಾ ಅತಿ ಹೆಚ್ಚು ಗೋಲ್‌ಗಳನ್ನು ಹೊಡೆದ ಪ್ರಶಸ್ತಿಗೆ ಭಾಜನರಾದರು.



ಕರ್ನಾಟಕ ರಾಜ್ಯ ಫುಟ್‌ಬಾಲ್ ಅಸೋಸಿಯೇಷನ್ ಪ್ರಧಾನ ಕಾರ್ಯದರ್ಶಿ ಎಂ.ಕುಮಾರ್, ಜಂಟಿ ಕಾರ್ಯದರ್ಶಿ ಅಸ್ಲಾಂ ಖಾನ್, ಜಿಲ್ಲಾ ಫುಟ್‌ಬಾಲ್ ಅಸೋಸಿಯೇಷನ್‌ನ ಪ್ರಧಾನ ಕಾರ್ಯದರ್ಶಿ ಅಲ್ಲಾವಲ್ಲಿ ಮುಜಾಹಿದ್ ಖಾನ್, ಮಹಮದ್ ರಫೀಕ್, ಎಸ್.ಕೆ.ಚಂದ್ರಶೇಖರ್, ಮಹಮದ್ ಮುಜೀತಪ್, ಸೈಯದ್ ಖಾಲಿದ್, ಜಾನ್ ಫರ್ನಾಂಡಿಸ್, ಅಶ್ರಫ್ ಅಲಿ, ಬಿ.ಎಸ್.ಭಕ್ಷಿ, ಅಹ್ಮದ್ ರಜಾ, ಸಮೀರ್, ತಬ್ರೇಜ್, ತನ್ವೀರ್ ಮತ್ತಿತರರಿದ್ದರು.

## ಮುಷ್ಟೂರಿನಲ್ಲಿ ಇಂದು 'ಅಕ್ಕ ನಗಲಿಲ್ಲ, ತಂಗಿ ಅಳಲಿಲ್ಲ' ನಾಟಕ ಪ್ರದರ್ಶನ

ರಾಣೇಬೆನ್ನೂರು ತಾಲ್ಲೂಕಿನ ಮುಷ್ಟೂರು ಗ್ರಾಮದಲ್ಲಿ ಇಂದು ಶ್ರೀ ಚೌಡೇಶ್ವರಿ ಜಾತ್ರೆಯ ನಿಮಿತ್ಯವಾಗಿ ದಾವಣಗೆರೆಯ ವಸಂತ ಕಲಾ ನಾಟ್ಯ ಸಂಘದವರಿಂದ 'ಸತಿ ಸಂಸಾರದ ಜ್ಯೋತಿ ಅರ್ಥಾತ್ ಅಕ್ಕ ಅಳಲಿಲ್ಲ, ತಂಗಿ ನಗಲಿಲ್ಲ ಎಂಬ ಕೌಟುಂಬಿಕ ಸುಂದರ ಸಾಮಾಜಿಕ ಬಯಲು ನಾಟಕ ಇಂದು ರಾತ್ರಿ 10 ಘಂಟೆಗೆ ಜರುಗಲಿದೆ.

ಉದ್ಘಾಟನೆಯನ್ನು ಶಾಸಕ ಪ್ರಕಾಶ ಕೋಳಿವಾಡ ನೆರವೇರಿಸಲಿದ್ದು, ಅಧ್ಯಕ್ಷತೆಯನ್ನು ತಾ.ಪಂ. ಮಾಜಿ ಅಧ್ಯಕ್ಷ, ರೈತ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ರವೀಂದ್ರಗೌಡ ಎಫ್. ಪಾಟೀಲ ವಹಿಸುವರು. ಮುಖ್ಯ ಅತಿಥಿಗಳಾಗಿ ತಹಶೀಲ್ದಾರ್ ಹನುಮಂತಪ್ಪ ಶಿರಹಟ್ಟಿ ಇನ್ನೂ ಮುಂತಾದ ಗಣ್ಯಮಾನ್ಯರು ಭಾಗವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಸಾಧನೆಗೈದ ಅನೇಕ ಗಣ್ಯಮಾನ್ಯರನ್ನು ಸತ್ಕರಸಲಾಗುವುದೆಂದು ಚೌಡೇಶ್ವರಿ ಜಾತ್ರಾ ಮಹೋತ್ಸವ ಕಮಿಟಿಯವರು ತಿಳಿಸಿದ್ದಾರೆ.

## ನಗರದಲ್ಲಿ ಇಂದು ಎನ್‌ಎಸ್‌ಎಸ್ ಚಟುವಟಿಕೆಗಳ ಸಮಾರೋಪ

ಕೆ.ಆರ್. ರಸ್ತೆಯ ಸರ್ಕಾರಿ ಮಾಜಿ ಪುರಸಭೆ ಪದವಿ ಪೂರ್ವ ಕಾಲೇಜು ಆಶ್ರಯದಲ್ಲಿ 2023-24ನೇ ಸಾಲಿನ ಕ್ರೀಡಾ, ಸಾಂಸ್ಕೃತಿಕ, ಎನ್.ಎಸ್.ಎಸ್. ಹಾಗೂ ಇಕೋ ಕ್ಲಬ್ ಚಟುವಟಿಕೆಗಳ ಸಮಾರೋಪ ಸಮಾರಂಭ ಕಾಲೇಜು ಆವರಣದಲ್ಲಿ ಇಂದು ಬೆಳಿಗ್ಗೆ 10.30 ಕ್ಕೆ ನಡೆಯಲಿದೆ.

ಕಾರ್ಯಕ್ರಮವನ್ನು ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಉದ್ಘಾಟಿಸುವರು.

ಅಧ್ಯಕ್ಷತೆಯನ್ನು ಪ್ರಾಚಾರ್ಯ ಆರ್.ಸುರೇಶ್ ವಹಿಸುವರು. ಸಮಾರೋಪ ಭಾಷಣವನ್ನು ಮಂಜುನಾಥ್ ಹೆಚ್.ಬಿ. ನಡೆಸಿಕೊಡುವರು.

ಮುಖ್ಯ ಅತಿಥಿಗಳಾಗಿ ಕರಿಸಿದ್ದಪ್ಪ ಎಸ್.ಜಿ., ಮಹಮದ್ ಅಯೂಬ್ ಪೈಲ್ವಾನ್, ನಾಗರಾಜ್ ಆರ್., ಬಿ. ಪಾಲಾಕ್ಷಿ, ರಮೇಶ್ ಹೆಚ್.ವೈ., ಶ್ರೀಮತಿ ಇಂದಿರಾ ಬಾಯಿ, ಶ್ರೀಮತಿ ಗೀತಾ ಕೆ., ಅಲ್ತಾಫ್ ಖಾನ್, ಭೀಮಪ್ಪ, ಕು. ಸಂಜಯ್, ಕು. ವರ್ಷಿತ ಎಸ್.

# ಸಂವಿಧಾನದ ಆಶಯದಂತೆ ನಡೆಯುವುದೇ ದೇಶಕ್ಕೆ ಕೊಡುವ ಬಹುದೊಡ್ಡ ಗೌರವ

## ಎಲೆಬೇತೂರು ಶ್ರೀ ಕೊಂಡಜ್ಜಿ ಬಸಪ್ಪ ಶಾಲೆ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಎಂ.ಬಸವರಾಜಪ್ಪ

ದಾವಣಗೆರೆ, ಫೆ. 5- ತಾಲ್ಲೂಕಿನ ಎಲೆಬೇತೂರು ನಮ್ಮ ದೇಶದಲ್ಲಿ ಅನೇಕ ಧರ್ಮ, ಜಾತಿ, ಭಾಷೆ, ಆಚಾರ-ವಿಚಾರಗಳಿದ್ದರೂ, ವಿವಿಧತೆಯಲ್ಲಿ ಏಕತೆಯನ್ನು ಸಾಧಿಸಿದೆ. ಇದಕ್ಕೆ ಮುಖ್ಯ ಕಾರಣ ನಮ್ಮ ಸಂವಿಧಾನ. ಸಂವಿಧಾನದ ಆಶಯದಂತೆ ನಡೆದುಕೊಳ್ಳುವುದೇ ನಾವು ನಮ್ಮ ದೇಶಕ್ಕೆ ಕೊಡುವ ಬಹುದೊಡ್ಡ ಗೌರವ ಎಂದು ಶಾಲಾ ಸಲಹಾ ಸಮಿತಿ ಅಧ್ಯಕ್ಷ ಎಂ. ಬಸವರಾಜಪ್ಪ ಅಭಿಪ್ರಾಯಿಸಿದರು.

ಇಲ್ಲಿನ ಶ್ರೀ ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ ಮತ್ತು ಶ್ರೀ ತರಳಬಾಳು ಆಂಗ್ಲ ಮಾಧ್ಯಮ ಶಾಲೆಗಳ ಸಂಯುಕ್ತಾಶ್ರಯದಲ್ಲಿ 75ನೇ ಗಣರಾಜ್ಯೋತ್ಸವ ಆಚರಿಸಲಾಯಿತು. ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಬಸವರಾಜಪ್ಪನವರು, ದೇಶದಲ್ಲಿ ಆಚರಿಸುವ ಪ್ರಮುಖ ರಾಷ್ಟ್ರೀಯ ಹಬ್ಬಗಳಲ್ಲಿ ಗಣರಾಜ್ಯೋತ್ಸವವೂ ಒಂದು. ಡಾ. ಬಿ. ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ ರಚಿತವಾದ ಸಂವಿಧಾನ ಜಾರಿಗೆ ಬಂದದ್ದು 1950 ರ ಜನವರಿ 26 ರಂದು. ಅಂದಿನಿಂದ ಪ್ರತಿವರ್ಷ ಈ ದಿನವನ್ನು ಗಣರಾಜ್ಯೋತ್ಸವದ ದಿನವನ್ನಾಗಿ ವಿಜೃಂಭಣೆಯಿಂದ ಆಚರಿಸುತ್ತಾ ಬರಲಾಗುತ್ತಿದೆ ಎಂದರು.



ಇನ್ನು ಕೆಲವೇ ವರ್ಷಗಳಲ್ಲಿ ನಮ್ಮ ದೇಶ ಆರ್ಥಿಕವಾಗಿ, ಶೈಕ್ಷಣಿಕವಾಗಿ, ವೈಜ್ಞಾನಿಕವಾಗಿ, ಸಾಂಸ್ಕೃತಿಕವಾಗಿ ಜಗತ್ತಿನ ಇತರೆ ದೇಶಗಳಿಗಿಂತ ಅಗ್ರಸ್ಥಾನದಲ್ಲಿ ನಿಲ್ಲುವುದರಲ್ಲಿ ಅನುಮಾನವಿಲ್ಲ. ಈ ಹಿನ್ನೆಲೆಯಲ್ಲಿ ದೇಶದ ಪ್ರತಿಯೊಬ್ಬ ಪ್ರಜೆಗಳೂ ಶ್ರಮಿಸಬೇಕಾಗಿದೆ ಎಂದರು.

ತರಳಬಾಳು ಪ್ರಾಥಮಿಕ ಶಾಲಾ ಸಲಹಾ ಸಮಿತಿ ಅಧ್ಯಕ್ಷ ಹೆಚ್. ಬಸವರಾಜಪ್ಪ, ಸಲಹಾ ಸಮಿತಿ ಸದಸ್ಯ ಬಿ. ಜಿ. ಸಂಗನಗೌಡರು ಮಾತನಾಡಿ ನಮ್ಮ ಸಂವಿಧಾನವನ್ನು ದುರುಪಯೋಗಪಡಿಸಿಕೊಳ್ಳದೇ ಸದುಪಯೋಗ ಪಡಿಸಿಕೊಂಡು ದೇಶದ ಅಭಿವೃದ್ಧಿಗೆ ಶ್ರಮಿಸಬೇಕು ಎಂದರು.

ಕೊಂಡಜ್ಜಿ ಬಸಪ್ಪ ಪ್ರೌಢಶಾಲೆ ಶಿಕ್ಷಕ ಡಾ. ಎಸ್. ಓ. ಷಣ್ಮುಖಪ್ಪ ವಿಶೇಷ ಉಪನ್ಯಾಸ ನೀಡಿದರು. ವೇದಿಕೆಯ ಮೇಲೆ ಬಿ .ವಿರೂಪಾಕ್ಷಪ್ಪ, ಮರುಳಸಿದ್ದಪ್ಪ, ಹಳ್ಳಿಕೆರೆ ರಾಜಣ್ಣ, ನರೇಂದ್ರ, ಮಹೇಶ ಎಲಿಗಾರ್, ಷಡಕ್ಷರಪ್ಪ, ಕೊಟ್ರೇಶ್ ಉಪಸ್ಥಿತರಿದ್ದರು.

ಮುಂಜಾನೆ ಮಕ್ಕಳು ಬಹು ಶಿಸ್ತಿನಿಂದ ಗ್ರಾಮದ ಮುಖ್ಯ ಬೀದಿಗಳಲ್ಲಿ ಆಕರ್ಷಕ ಪ್ರಭಾತ್ ಫೇರಿ ನಡೆಸಿದರು. ಆರಂಭದಲ್ಲಿ ರಾಷ್ಟ್ರಗೀತೆಯೊಂದಿಗೆ ವಂದೇಮಾತರಂ, ಧ್ವಜಗೀತೆಯನ್ನು ಸಾಮೂಹಿಕವಾಗಿ ಹಾಡಲಾಯಿತು. ಸ್ಕೌಟ್ ಅಂಡ್ ಗೈಡ್ಸ್ ಮತ್ತು ಎನ್. ಸಿ. ಸಿ ಪಡೆಯವರು ಧ್ವಜ ವಂದನೆ ನಡೆಸಿಕೊಟ್ಟರು. ಭೂಮಿಕಾ ಮತ್ತು ಸಂಗಡಿಗರು ದೇಶಭಕ್ತಿಗೀತೆಗೆ ಆಕರ್ಷಕ ನೃತ್ಯರೂಪಕ ನೀಡಿದರು.

ವಿದ್ಯಾರ್ಥಿಗಳಾದ ಪ್ರತೀಕ್, ಪ್ರಕೃತಿ ವಿ, ಮೇಘನಾ ಬಿ, ಪೂಜಾ ಟಿ. ಆರ್, ಯಶೋಧ ಕೆ, ವರ್ಷಿಣಿ ಓ. ಎನ್, ಸುಪ್ರಭೆ ಡಿ. ಎಸ್, ಮೇಘನಾ, ಅಕ್ಷತಾ ಎಂ. ಸಿ, ಅನನ್ಯ ಕೆ. ಆರ್ ಮೊದಲಾದವರು ಗಣರಾಜ್ಯೋತ್ಸವ ಕುರಿತಂತೆ ಮಾತನಾಡಿದರು. ನಿಹಾಲ್ ಕೆ. ಎಂ, ಸಿಂಚನಾ ಎಂ ಮತ್ತು ಸಂಗಡಿಗರು, ರೇಷ್ಮಾ, ವಿನುತಾ, ಯಶ್ವಂತ್ ಬಿ. ಆರ್, ಅನುಷ ಮತ್ತು ಸಂಗಡಿಗರು, ಬೃಂದಾ ಎನ್, ಪವಿತ್ರಾ ಎಸ್, ನಂದೀಶ ಬಿ ಮತ್ತು ಸಂಗಡಿಗರು ದೇಶಭಕ್ತಿಗೀತೆ ಹಾಡಿದರು.

ಶಿಕ್ಷಕಿ ಉಷಾ ಪಿ. ಎಂ ವಚನ ಪ್ರಾರ್ಥನೆ ನಡೆಸಿಕೊಟ್ಟರು. ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕಿ ಬಿ. ಎಂ ಶಶಿಕಲಾ ಸ್ವಾಗತಿಸಿದರು. ವಿದ್ಯಾರ್ಥಿಗಳಾದ ಕೀರ್ತನಾ ಬಿ ಮತ್ತು ಪೂಜಾ ಟಿ.ಆರ್ ಕಾರ್ಯಕ್ರಮ ನಡೆಸಿಕೊಟ್ಟರೆ ಮುಖ್ಯ ಶಿಕ್ಷಕಿ ಎಂ. ಬಿ. ಪ್ರೇಮಾ ವಂದಿಸಿದರು.

## ಮೋದಿ ಕಳಂಕದಿಂದ ಹೊರಬರಲು ಅಡ್ವಾಣಿಯವರಿಗೆ ಭಾರತ ರತ್ನ : ಡಿಬಿ



ದಾವಣಗೆರೆ, ಫೆ.5- ಬಿಜೆಪಿಯ ಭೀಷ್ಮ ಎಂದೇ ಖ್ಯಾತರಾದ ಎಲ್. ಕೆ. ಅಡ್ವಾಣಿಯವರಿಗೆ ರಾಷ್ಟ್ರಪತಿ, ಪ್ರಧಾನಮಂತ್ರಿ ಹುದ್ದೆ ಸಿಗಬೇಕಿತ್ತು. ಪ್ರಧಾನಿ ನರೇಂದ್ರ ಮೋದಿ ಉನ್ನತ ಹುದ್ದೆಗೆ ಅಡ್ವಾಣಿಯವರು ಬರದಂತೆ ತಡೆದರು ಎಂದು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಆರೋಪಿಸಿದ್ದಾರೆ. ಅಡ್ವಾಣಿಯವರು ಎ. ಬಿ. ವಾಜಪೇಯಿ ಅವರೊಂದಿಗೆ ಆರ್ ಎಸ್ ಎಸ್, ಜನಸಂಘ, ಬಿಜೆಪಿ ದೇಶದಲ್ಲಿ ನೆಲೆಯೂರಲು ಜೀವನವಿಡಿ ಶ್ರಮಿಸಿದ್ದಾರೆ. ಆದರೆ ಕುಟಿಲತೆಯಿಂದ ಅವರಿಗೆ ಉನ್ನತ ಹುದ್ದೆ ತಪ್ಪಿಸಿ, ತಾವೇ ದೇಶದ ಪ್ರಧಾನಿ ಹುದ್ದೆಗೆ ನರೇಂದ್ರ ಮೋದಿ ಸ್ವಯಂ ಘೋಷಣೆ ಮಾಡಿಕೊಂಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

## ಎಆರ್‌ಜಿಯಲ್ಲಿ ಇಂದು ಸಮಾರೋಪ

ಎ.ಆರ್.ಜಿ. ಕಲಾ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನ ಶೈಕ್ಷಣಿಕ ಸಾಲಿನ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ ಇಂದು ಬೆಳಿಗ್ಗೆ 11 ಗಂಟೆಗೆ ಕಾಲೇಜು ಆವರಣದಲ್ಲಿರುವ ಡಾ. ಶಾಮನೂರು ಶಿವಶಂಕರಪ್ಪ ಸಭಾಂಗಣದಲ್ಲಿ ನಡೆಯಲಿದೆ. ಮುಖ್ಯ ಅತಿಥಿಗಳು : ಎಸ್.ಜಿ. ಕರಿಸಿದ್ದಪ್ಪ, ಪ್ರೊ. ಸಿ.ಎಚ್. ಮುರುಗೇಂದ್ರಪ್ಪ, ಬಿ.ಟಿ. ಪ್ರಕಾಶ್. ಪ್ರತಿಭಾ ಪುರಸ್ಕಾರ : ಎ.ಜಿ. ಮಂಜುನಾಥ್. ಉಪಸ್ಥಿತಿ : ಡಾ. ಜಿ.ಬಿ. ಬೋರಯ್ಯ. ಅಧ್ಯಕ್ಷತೆ : ಕೆ. ಬೊಮ್ಮಣ್ಣ.

# ಮಕ್ಕಳು ಮತ್ತು ಪಾಲಕರ ನಡುವಿನ ಬಾಂಧವ್ಯ ಕ್ಷೀಣಿಸುತ್ತಿದೆ

## ವಿವೇಕ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ ಶಿಕ್ಷಣಾಧಿಕಾರಿ ಡಾ.ಪುಷ್ಪಲತಾ

ದಾವಣಗೆರೆ, ಫೆ.5- ಪಾಲಕರು ತಮ್ಮ ಕೆಲಸದ ಒತ್ತಡದಲ್ಲಿ ಮಕ್ಕಳ ಬಗ್ಗೆ ಕಾಳಜಿ ವಹಿಸುವಲ್ಲಿ ನಿರ್ಲಕ್ಷ್ಯ ವಹಿಸುತ್ತಿರುವ ಪರಿಣಾಮ, ಮಕ್ಕಳು ಮತ್ತು ಪಾಲಕರ ನಡುವಿನ ಬಾಂಧವ್ಯ ಕ್ಷೀಣಿಸುತ್ತಿದೆ ಎಂದು ದಾವಣಗೆರೆ ದಕ್ಷಿಣ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಡಾ.ಪುಷ್ಪಲತಾ ಅಭಿಪ್ರಾಯಿಸಿದರು.



ನಗರದ ಬಾಪೂಜಿ ಮಕ್ಕಳ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರದ ಸಭಾಂಗಣದಲ್ಲಿ ವಿವೇಕ ಪೋಷಕರ ಆರೋಗ್ಯ ಕಾರ್ಯಾಗಾರದಲ್ಲಿ 'ಮಕ್ಕಳ ಸರ್ವತೋಮುಖ ಬೆಳವಣಿಗೆಯಲ್ಲಿ ಪಾಲಕರು ಮತ್ತು ಸಮಾಜದ ಪಾತ್ರ' ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು.

ಆದ್ದರಿಂದ ಕೆಲಸದ ಒತ್ತಡದ ನಡುವೆಯೂ ಮಕ್ಕಳೊಂದಿಗೆ ಹೆಚ್ಚಿನ ಸಮಯ ಕಳೆಯುವ ಅಗತ್ಯವಿದೆ. ತಮ್ಮ ಮಕ್ಕಳಲ್ಲಿರುವ ಕೌಶಲ್ಯ ಗುರುತಿಸಿ ಪ್ರೋತ್ಸಾಹ ನೀಡಬೇಕು. ಅವರಲ್ಲಿನ ನಕಾರಾತ್ಮಕ ಅಂಶಗಳನ್ನು ಹೋಗಲಾಡಿಸಿ ಸಕಾರಾತ್ಮಕತೆ ಹೆಚ್ಚಿಸಬೇಕು. ಅಂಕದ ಬಗ್ಗೆ ತಾಳ್ಮೆಯಿಂದ ವರ್ತಿಸಿ, ಮಕ್ಕಳಿಗೆ ಆಸ್ತಿ ಗಳಿಸಿಡುವ ಬದಲು ಅವರನ್ನೇ ಆಸ್ತಿಯನ್ನಾಗಿ ಮಾಡಬೇಕು ಎಂದು ತಿಳಿಸಿದರು.

ಸಮರ್ಥ ತಂದೆ- ತಾಯಿ ಮಾತ್ರ ತಮ್ಮ ಮಕ್ಕಳ ಸಾಮರ್ಥ್ಯವನ್ನು ಗುರುತಿಸಬಲ್ಲರು. ಸರ್ವತೋಮುಖ ಬೆಳವಣಿಗೆ ಎನ್ನುವುದು ಬರೀ ಅಂಕಗಳ ಮೇಲೆ ಅವಲಂಬಿಸಿರುವುದಿಲ್ಲ, ಇಡೀ ವ್ಯಕ್ತಿತ್ವವನ್ನು ಪ್ರಭಾವಿಸು ವಂತದ್ದಾಗಿರುತ್ತದೆ. ಹಾಗಾಗಿ ಚಿಕ್ಕ ವಯಸ್ಸಿನಲ್ಲಿ ಮಕ್ಕಳ ಜೊತೆಗೆ ಹೆಚ್ಚಿನ ಸಮಯ ಕಳೆಯಬೇಕು.

ಮಕ್ಕಳ ವ್ಯಕ್ತಿತ್ವ ಬಾಲ್ಯದಿಂದಲೇ ರೂಪುಗೊಂಡರೆ ಅದರ ಫಲಶೃತಿ ದೊರೆಯುವುದು ಇಡೀ ಸಮಾಜಕ್ಕೆ ಆಗಿರುತ್ತದೆ. ವ್ಯತಿರಿಕ್ತವಾದರೆ ವಯಸ್ಸಾದ ಮೇಲೆ ವೃದ್ಧಾಶ್ರಮಕ್ಕೆ ಹೋಗಬೇಕಾದ ಪರಿಸ್ಥಿತಿ ಬರಬಹುದು ಎಂದು ಪೋಷಕರನ್ನು ಡಾ.ಪುಷ್ಪಲತಾ ಎಚ್ಚರಿಸಿದರು.

ಅಲ್ಲದೆ ಮಕ್ಕಳ ಪಾಲನೆಯಲ್ಲಿ ವೈದ್ಯರ ಪಾತ್ರವೂ ಬಹಳ ಮುಖ್ಯವಾಗಿದ್ದು, ಪಾಲಕರು ಮಕ್ಕಳ ಅನಾರೋಗ್ಯದ ಬಗ್ಗೆ ಭಯಪಡದೇ ವೈದ್ಯರ ಸಹಾಯ ಪಡೆಯಿರಿ ಎಂದು ತಿಳಿಸಿದರು.

ಬಾಪೂಜಿ ಮಕ್ಕಳ ಆರೋಗ್ಯ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಗುರುಪ್ರಸಾದ್ ಪ್ರಾಸ್ತಾವಿಕವಾಗಿ ಮಾತನಾಡಿ ಕಾರ್ಯಾಗಾರದ ಉದ್ದೇಶ ವಿವರಿಸಿದರು. ಡಾ. ಕೌಜಲಗಿ, ಡಾ.ರೇವಪ್ಪ, ವ್ಯವಸ್ಥಾಪಕ ಸಿದ್ದೇಶ್ವರ ಗುಬ್ಬಿ, ಕಾರ್ಯಕ್ರಮದ ಸಂಯೋಜಕಿ ಸಿ.ಎಂ. ಅಂಜಲಿ ಸೇರಿದಂತೆ, ಆಸ್ಪತ್ರೆ ಸಿಬ್ಬಂದಿ ವರ್ಗದವರು, ಪೋಷಕರು ಮತ್ತು ನರ್ಸಿಂಗ್ ವಿದ್ಯಾರ್ಥಿಗಳು ಭಾಗವಹಿಸಿದ್ದರು.


## ಮಾನ್ಯ ಕಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಹರಿಹರ

O.S. No. : 17/2024

**ಅರ್ಜಿದಾರರು -** 1] ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಟ್ರಸ್ಟ್ ಕಮಿಟಿ, ಭಾನುವಳ್ಳಿ ಗ್ರಾಮ, ಹರಿಹರ ತಾಲ್ಲೂಕ್, ದಾವಣಗೆರೆ ಜಿಲ್ಲೆ.

ಇದರ ಪ್ರತಿನಿಧಿಯರಾಗಿ - 2] ಶ್ರೀ ಕೆಂಚಪ್ಪ ಬಿನ್ ನಾಗಪ್ಪ 62 ವರ್ಷ ಅಧ್ಯಕ್ಷರು ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಟ್ರಸ್ಟ್ ಕಮಿಟಿ.

3] ಶ್ರೀ ದೇವೇಂದ್ರಪ್ಪ ಬಿನ್ ನಾರಾಯಣಪ್ಪ, 65 ವರ್ಷ, ಉಪ-ಅಧ್ಯಕ್ಷರು ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಟ್ರಸ್ಟ್ ಕಮಿಟಿ.

4] ಶ್ರೀ ಕರಿಯಪ್ಪ ಬಿನ್ ಸಿದ್ದಪ್ಪ, 62 ವರ್ಷ, ಕಾರ್ಯದರ್ಶಿಗಳು, ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಟ್ರಸ್ಟ್ ಕಮಿಟಿ.

5] ಶ್ರೀ ನಾರಾಯಣಪ್ಪ ಬಿನ್ ಹನುಮಂತಪ್ಪ 58 ವರ್ಷ, ಖಜಾಂಚಿಗಳು ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಟ್ರಸ್ಟ್ ಕಮಿಟಿ.

6] ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕ ಸಂಘ, ಭಾನುವಳ್ಳಿ ಗ್ರಾಮ, ಹರಿಹರ ತಾಲೂಕ್, ದಾವಣಗೆರೆ ಜಿಲ್ಲೆ ಇದರ ಪ್ರತಿನಿಧಿಗಳಾದ.

7] ಶ್ರೀ ಹನುಮಂತಪ್ಪ ಬಿನ್ ಕೆಂಚಪ್ಪ 33 ವರ್ಷ ಅಧ್ಯಕ್ಷರು, ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕ ಸಂಘ ಭಾನುವಳ್ಳಿ ಗ್ರಾಮ.

8] ಶ್ರೀ ರಘು ಬಿನ್ ಶೇಖರಪ್ಪ, 30 ವರ್ಷ ಉಪ ಅಧ್ಯಕ್ಷರು ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕ ಸಂಘ, ಭಾನುವಳ್ಳಿ ಗ್ರಾಮ.

9] ಶ್ರೀ ನಾಗರಾಜ್ ಬಿನ್ ರೇವಣಪ್ಪ 30 ವರ್ಷ, ಕಾರ್ಯದರ್ಶಿಗಳು, ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕ ಸಂಘ, ಭಾನುವಳ್ಳಿ ಗ್ರಾಮ.

10] ಶ್ರೀ ವಾಗೀಶ್ ಬಿನ್ ನಾಗಪ್ಪ 32 ವರ್ಷ, ಜಂಟಿ ಕಾರ್ಯದರ್ಶಿ ಗಳು, ಶ್ರೀ ಕ್ರಾಂತಿವೀರ ಸಂಗೊಳ್ಳಿರಾಯಣ್ಣ ಯುವಕ ಸಂಘ ಭಾನುವಳ್ಳಿ ಗ್ರಾಮ.

11] ಶ್ರೀ ಕರಿಯಪ್ಪ ಬಿನ್ ನಾರಾಯಣಪ್ಪ, 30 ವರ್ಷ, ಜಂಟಿ ಕಾರ್ಯದರ್ಶಿಗಳು, ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕ ಸಂಘ ಭಾನುವಳ್ಳಿ ಗ್ರಾಮ.

12] ಶ್ರೀ ಸಂತೋಷ್ ಬಿನ್ ರುದ್ರಪ್ಪ, ವರ್ಷ, ಜಂಟಿ ಕಾರ್ಯದರ್ಶಿಗಳು, ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಯುವಕ ಸಂಘ ಭಾನುವಳ್ಳಿ ಗ್ರಾಮ.

13] ಶ್ರೀ ಲಕ್ಷ್ಮಣಪ್ಪ ಬಿನ್ ನಾರಾಯಣಪ್ಪ, 70 ವರ್ಷ, ಭಾನುವಳ್ಳಿ ಗ್ರಾಮ, ಹರಿಹರ ತಾಲ್ಲೂಕ್, ದಾವಣಗೆರೆ ಜಿಲ್ಲೆ. ಮೇಲ್ಕಂಡ ಎಲ್ಲರೂ ವ್ಯವಸಾಯಗಾರರು, ಭಾನುವಳ್ಳಿ ಗ್ರಾಮ, ಹರಿಹರ ತಾಲೂಕ್, ದಾವಣಗೆರೆ ಜಿಲ್ಲೆ.

**ವಿರುದ್ಧ - ಪ್ರತಿವಾದಿಯರುಗಳು-** 1] ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರಕಾರ ವಿಧಾನ ಸೌಧ, ಬೆಂಗಳೂರು.

2] ಅಧೀನ ಕಾರ್ಯದರ್ಶಿಗಳು, ಕರ್ನಾಟಕ ಸರಕಾರ ವಿಧಾನಸೌಧ ಬೆಂಗಳೂರು.

3] ಅಧೀನ ಕಾರ್ಯದರ್ಶಿಗಳು, ಗೃಹ ಇಲಾಖೆ, ಕರ್ನಾಟಕ ಸರಕಾರ ವಿಧಾನಸೌಧ ಬೆಂಗಳೂರು.

4] ಮಾನ್ಯ ದಾವಣಗೆರೆ ಜಿಲಾಧಿಕಾರಿಗಳು, ದಾವಣಗೆರೆ.

5] ಮಾನ್ಯ ದಾವಣಗೆರೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ದಾವಣಗೆರೆ.

6] ಮಾನ್ಯ ದಾವಣಗೆರೆ ಉಪ-ವಿಭಾಗಾಧಿಕಾರಿಗಳು, ದಾವಣಗೆರೆ ವಿಭಾಗ, ದಾವಣಗೆರೆ.

7] ಮಾನ್ಯ ಡಿವೈಎಸ್ಪಿ ದಾವಣಗೆರೆ ಗ್ರಾಮಾಂತರ [ಹರಿಹರ] ಹರಿಹರ.

8] ಮಾನ್ಯ ಹರಿಹರ ಪೊಲೀಸ್ ವೃತ್ತ ನಿರೀಕ್ಷಕರು, ಹರಿಹರ.

9] ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮಲೆಬೆನ್ನೂರು ಠಾಣೆ, ಮಲೇಬೆನ್ನೂರು, ಹರಿಹರ ತಾಲ್ಲೂಕು.

10] ಶ್ರೀ ವಾಲ್ಮೀಕಿ ಯುವಕ ಸಂಘ ಬಾನುವಳ್ಳಿ ಗ್ರಾಮ, ಹರಿಹರ ತಾಲ್ಲೂಕ್, ದಾವಣಗೆರೆ ಜಿಲ್ಲೆ. ಇದರ ಪ್ರತಿನಿಧಿಗಳು.

11] ಶ್ರೀ ಧನ್ಯಕುಮಾರ್ ಬಿನ್ ಪುಟ್ಟಪ್ಪ 38 ವರ್ಷಗಳು,

12] ಶ್ರೀ ನಾರಾಯಣಪ್ಪ ಬಿನ್ ರೇವಣಸಿದ್ದಪ್ಪ 40 ವರ್ಷಗಳು,

13] ಶ್ರೀ ಮಾರುತಿ ಬಿನ್ ಭರಮಪ್ಪ 52 ವರ್ಷಗಳು,

14] ಶ್ರೀ ಸಿದ್ದಪ್ಪ ಬಿನ್ ತಿರುಕಪ್ಪ 38 ವರ್ಷಗಳು,

15] ಶ್ರೀ ರಂಗಪ್ಪ ದೊಡ್ಡಮನಿ 48 ವರ್ಷಗಳು,

16] ಶ್ರೀ ಮಂಜಪ್ಪ ಬಿನ್ ರೇವಣಸಿದ್ದಪ್ಪ 55 ವರ್ಷಗಳು,

17] ಶ್ರೀ ನಾಗರಾಜ್ ಕಡೇಮನಿ ಬಿನ್, 35 ವರ್ಷಗಳು,

18] ಶೀಮತಿ ಗಿರಿಜಮ್ಮ ಕೋಂ. 55 ವರ್ಷಗಳು, ಗ್ರಾಮ ಪಂಚಾಯಿತಿ ಸದಸ್ಯರು,

19] ಶ್ರೀಮತಿ ರತ್ನಮ್ಮ ಕೋಂ ಭರಮಪ್ಪ 32 ವರ್ಷಗಳು

20] ಶ್ರೀಮತಿ ಮಲ್ಲಿಗೆಯಮ್ಮ ಕೋಂ ಲಕ್ಷ್ಮಪ್ಪ 58 ವರ್ಷಗಳು,

21] ಶ್ರೀಮತಿ ಗಂಗಮ್ಮ ಕೋಂ ನಿಂಗಪ್ಪ, 52 ವರ್ಷಗಳು,

22] ಶ್ರೀಮತಿ ಹೇಮಶ್ರೀ ಕೋಂ ಮಾರುತಿ 42 ವರ್ಷಗಳು,

23] ಶ್ರೀಮತಿ ಶಾಂತಮ್ಮ ಕೋಂ ಮಲ್ಲಪ್ಪ, 55 ವರ್ಷಗಳು,

24] ಶ್ರೀಮತಿ ಕಲಾವತಿ ಕೋಂ ಪುಟ್ಟಪ್ಪ 58 ವರ್ಷಗಳು,

25] ಶ್ರೀಮತಿ ಶಿವಕ್ಕ ಕೋಂ ಭೀಮಪ್ಪ

26] ಶ್ರೀಮತಿ ಸರೋಜಮ್ಮ ಕೋಂ ರಂಗಪ್ಪ, 57 ವರ್ಷಗಳು

27] ಶ್ರೀಮತಿ ವಾಣಿ ಕೋಂ ಚಂದ್ರಪ್ಪ

28] ಶ್ರೀಮತಿ ಶೀಲ ಕೋಂ ಮಾರುತಿ, 38 ವರ್ಷಗಳು,

29] ಶ್ರೀಮತಿ ಜಯಮ್ಮ ಕೋಂ ರೇವಣಸಿದ್ದಪ್ಪ 48 ವರ್ಷಗಳು,

30] ಶ್ರೀಮತಿ ಜಯಮ್ಮ ಬಾತಿ ಕೋಂ ತಿರುಕಪ್ಪ 56 ವರ್ಷಗಳು

31] ಶ್ರೀಮತಿ ನೀಲಮ್ಮ ಕೋಂ ಮಂಜಪ್ಪ 48 ವರ್ಷಗಳು.

32] ಶ್ರೀಮತಿ ನಾಗಮ್ಮ ಕೋಂ ಹನುಮಗೌಡ 52 ವರ್ಷಗಳು,

33] ಶ್ರೀ ಪುಟ್ಟಪ್ಪ ಬಿನ್ ದೊಡ್ಡಮನಿ 65, ವರ್ಷಗಳು

34] ಶ್ರೀ ಶಿವಣ್ಣ ಬಿನ್ ರಾಮಪ್ಪ ದೊಡ್ಡಮನಿ 55,ವರ್ಷಗಳು

35] ಶ್ರೀ ಮಹಂತೇಶ ಬಿನ್ ಹನುಮಗೌಡ 48,ವರ್ಷಗಳು

36] ಶ್ರೀ ಪುಟ್ಟಪ್ಪ ಬಿನ್ ರಾಮಪ್ಪ 70 ವರ್ಷಗಳು, ನಿವೃತ್ತ ಶಿಕ್ಷಕರು ಮೇಲ್ಕಂಡ 10 ರಿಂದ 36ನೇ ಪ್ರತಿವಾದಿಯರು, ವ್ಯವಸಾಯಗಾರರು, ಭಾನುವಳ್ಳಿ ಗ್ರಾಮದ ನಿವಾಸಿಗಳು, ಹರಿಹರ ತಾಲ್ಲೂಕ್, ದಾವಣಗೆರೆ ಜಿಲ್ಲೆ.

**ಸಿ.ಪಿ.ಸಿ. ಆದೇಶ 5 ನಿಯಮ 20 ರ ಅಡಿಯಲ್ಲಿ ನೀಡಲಾದ ಪತ್ರಿಕಾ ಪ್ರಕಟಣಾ ನೋಟಿಸ್**

ಮೇಲ್ಕಂಡ ಪ್ರಕರಣದಲ್ಲಿ ಅರ್ಜಿದಾರರು ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕ್ ಭಾನುವಳ್ಳಿ ಗ್ರಾಮದ ಶ್ರೀ ಬೀರಲಿಂಗೇಶ್ವರ ದೇವಸ್ಥಾನದ ಚಿರ ಆಸ್ತಿ-ಚರ ಆಸ್ತಿಗಳನ್ನು ನೋಡಿಕೊಳ್ಳುವ ಸಲುವಾಗಿ ಮತ್ತು ಸದರಿ ದೇವರ ಎಲ್ಲಾ ಕಾರ್ಯಗಳನ್ನು ಮಾಡುವ ಸಲುವಾಗಿ ಸ್ಥಾಪನೆಯಾಗಿದ್ದು, ಸದರಿ ದೇವಸ್ಥಾನದ ವತಿಯಿಂದ ಟ್ರಸ್ಟಿಗೆ ಬಾನುವಳ್ಳಿ ಗ್ರಾಮದ ಖಾತಾ ನಂ. 1601 ಮತ್ತು ಆಸ್ತಿ ನಂ.613/P ರಲ್ಲಿ 47x33 ಜಾಗವನ್ನು ಖರೀದಿಗೆ ಪಡೆದು ಸದರಿ ಖಾಸಗಿ ನಿವೇಶನದಲ್ಲಿ ಸ್ವಾತಂತ್ರ್ಯ ಸೇನಾನಿಯಾದ ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಪುತ್ಥಳಿಯನ್ನು ಎಲ್ಲಾ ನಿಯಮಾವಳಿಗಳನ್ನು ಪಾಲನೆ ಮಾಡಿ ಸ್ಥಾಪನೆ ಮಾಡಿದ್ದನ್ನು ಪ್ರತಿವಾದಿಯರಾದ ನಂ 10 ರಿಂದ 36 ರವರ ಚಿತಾವಣಿಯ ಮೇರೆಗೆ ಪ್ರತಿವಾದಿ ನಂ 4ರಿಂದ 9 ಕಾನೂನು ಬಾಹಿರವಾಗಿ ತೆರವುಗೊಳಿಸಿದ್ದನ್ನು ವಿರೋಧಿಸಿ ಸದರಿ ಶ್ರೀ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಪುತ್ಥಳಿಯನ್ನು ಸದರಿ ನಿವೇಶನದಲ್ಲಿ ಪ್ರತಿವಾದಿ ನಂ 4ರಿಂದ 9ರವರುಗಳು ಪುನರ್ ಸ್ಥಾಪನೆ ಮಾಡುವಂತೆ ಆದೇಶ ಕೋರಿ ಮೇಲ್ಕಂಡ ದಾವೆಯನ್ನು ಸಲ್ಲಿಸಿದ್ದು ಇರುತ್ತದೆ, ಸದರಿ ದಾವೆಯು ದಿನಾಂಕ 23/2/2024 ರಂದು ಮುದ್ದತ್ತು ಇರುತ್ತದೆ. ಸದರಿ ದಾವೆಯಲ್ಲಿ ಯಾರಿಗಾದರೂ ವಾದಿಯರ ಪರವಾಗಲೀ ಅಥವಾ ಅವರ ವಿರುದ್ದವಾಗಲೀ ಯಾರಿಗಾದರೂ ಆಕ್ಷೇಪಣೆ/ತಕರಾರುಗಳನ್ನು ಈ ದಾವೆಯಲ್ಲಿ ಹಾಜರಾಗಿ ನಿಮ್ಮ ಆಕ್ಷೇಪಣೆ/ತಕರಾರುಗಳನ್ನು ಏನಾದರೂ ಇದ್ದರೆ ಸಲ್ಲಿಸಿ ಮತ್ತು ದಾವೆಯನ್ನು ಮುಂದುವರೆಸಿಕೊಂಡು ಹೋಗಲು ಆಸಕ್ತಿ ಇದ್ದವರು, ಖುದ್ದು-ತಾವಾಗಲೀ ಅಥವಾ ತಮ್ಮ ಪರ ವಕೀಲರ ಮೂಲಕವಾಗಲೀ ಹಾಜರಾಗಿ ತಮ್ಮ ಅಹವಾಲುಗಳನ್ನು ಮೇಲ್ಕಂಡ ದಾವೆಯು ದಿನಾಂಕ 23/02/2024ರಂದು ಮುದ್ದತ್ತು ಇರುತ್ತದೆ. ಅಂದು ಬೆಳಿಗ್ಗೆ 11-00 ಘಂಟೆಗೆ ಮೇಲ್ಕಂಡ ಘನ ನ್ಯಾಯಾಲಯಕ್ಕೆ ಹಾಜರಾಗಿ ತಾವಾಗಲೀ ಅಥವಾ ತಮ್ಮ ವಕೀಲರ ಮುಖಾಂತರವಾಗಲೀ ಆಕ್ಷೇಪಣೆ/ತಕರಾರುಗಳನ್ನು ಸಲ್ಲಿಸ ಬಹುದಾಗಿರುತ್ತದೆ, ಇಲ್ಲದಿದ್ದರೆ ಯಾರದೂ, ಯಾವುದೇ ತೆರನಾದ ಆಕ್ಷೇಪಣೆ/ತಕರಾರು ಇಲ್ಲವೆಂದು ಪರಿಗಣಿಸಿ, ವಾದಿಯರುಗಳು ಕೋರಿದ ಪರಿಹಾರಗಳಂತೆ ಆದೇಶ ಮಾಡಲಾಗುವುದು. ಮೇಲ್ಕಂಡ ಆಸ್ತಿಗೆ ಈ ಕೆಳಕಂಡಂತೆ ಚೆಕ್ಕುಬಂದಿ ಇರುತ್ತದೆ.

**ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕ್, ಭಾನುವಳ್ಳಿ ಗ್ರಾಮದ ಖಾತಾ ನಂ 1601, ಆಸ್ತಿ ನಂ 613/P ಅದು 12x33 ಸುತ್ತಳತೆಯುಳ್ಳ ಖಾಲಿ ಜಾಗಕ್ಕೆ ಚೆಕ್ಕು-ಬಂದಿ**

ಪೂರ್ವಕ್ಕೆ - ನಾಗರೆಡ್ಡಿ ರೋಡ್, ಪಶ್ಚಿಮಕ್ಕೆ - ಸದರಿ ನಂಬರ್ ಪೈಕಿ ಉಳಿದಿರುವ ಜಾಗ, ಉತ್ತರಕ್ಕೆ ದೊಡ್ಡ ಕರಿಯಪ್ಪ ಆಸ್ತಿ, ದಕ್ಷಿಣಕ್ಕೆ -ನಂದಿಗುಡಿ ರಸ್ತೆ. ಘನ ನ್ಯಾಯಾಲಯದ ಅಪ್ಪಣೆ ಮೇರೆಗೆ ನೀಡಲಾಗಿದೆ.

**ಸಹಿ/-ಕೆ.ಜಿ. ವಸಂತ್**
**ಅಪೀಲುದಾರರ ಪರ ವಕೀಲರು**
**ದಾವಣಗೆರೆ.**
**ದಿನಾಂಕ : 5.2.2024**
**ದಾವಣಗೆರೆ. ಮೊ.ನಂ.9844072441**

## ಧನಂಜಯ ಕಡ್ಲೇಬಾಳು ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ



ದಾವಣಗೆರೆ, ಫೆ.5- ದಾವಣಗೆರೆ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿಗಳನ್ನಾಗಿ ಧನಂಜಯ ಕಡ್ಲೇಬಾಳು, ಸಿ. ಅನಿಲ್ ಕುಮಾರ್ ನಾಯ್ಕ್, ಐರಣಿ ಅವರುಗಳನ್ನು ನಿಯುಕ್ತಿಗೊಳಿಸಲಾಗಿದೆ ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಎನ್. ರಾಜಶೇಖರ್ ತಿಳಿಸಿದ್ದಾರೆ.

## ಕರ್ನಾಟಕ ಜ್ಯೂನಿಯರ್ ಬಾಲಕರ ಬಾಸ್ಕೆಟ್ ಬಾಲ್ ತಂಡಕ್ಕೆ ನಾಯಕರಾಗಿ ವಿಷ್ಣು ಆಯ್ಕೆ



ದಾವಣಗೆರೆ, ಫೆ. 5- ಕರ್ನಾಟಕ ಜ್ಯೂನಿಯರ್ ಬಾಲಕರ ಬಾಸ್ಕೆಟ್ ಬಾಲ್ ತಂಡಕ್ಕೆ ನಾಯಕರಾಗಿ ದಾವಣಗೆರೆ ಬಾಸ್ಕೆಟ್ ಬಾಲ್ ತಂಡದ ವಿಷ್ಣು ಎನ್.ಎಂ. ಆಯ್ಕೆಯಾಗಿದ್ದಾರೆ. ಬಾಸ್ಕೆಟ್ ಬಾಲ್ ಫೆಡರೇಷನ್ ಆಫ್ ಇಂಡಿಯಾ ಇವರ ಆಶ್ರಯದಲ್ಲಿ ಒಡಿಸಾದ ಭುವನೇಶ್ವರ ನಗರದಲ್ಲಿ ಇದೇ 4 ರಿಂದ 11ರವರೆಗೆ ನಡೆಯಲಿರುವ 73ನೇ ರಾಷ್ಟ್ರೀಯ ಜ್ಯೂನಿಯರ್ (18 ವರ್ಷದೊಳಗಿನ) ಬಾಸ್ಕೆಟ್ ಬಾಲ್ ಚಾಂಪಿಯನ್ ಶಿಪ್‌ನಲ್ಲಿ ಪಾಲ್ಗೊಳ್ಳುವ ಕರ್ನಾಟಕ ಜ್ಯೂನಿಯರ್ ಬಾಸ್ಕೆಟ್ ಬಾಲ್ ತಂಡಕ್ಕೆ ದಾವಣಗೆರೆ ಬಾಸ್ಕೆಟ್ ಬಾಲ್ ಕ್ಲಬ್‌ನ ವಿಷ್ಣು ಕರ್ನಾಟಕ ತಂಡದ ನಾಯಕರಾಗಿ ಸ್ಥಾನ ಪಡೆದಿದ್ದಾರೆ.

ವಿಷ್ಣು ಅವರಿಗೆ ಕ್ಲಬ್ಬಿನ ಗೌರವ ಅಧ್ಯಕ್ಷ ಸಿ. ಶ್ರೀರಾಮಮೂರ್ತಿ, ಅಧ್ಯಕ್ಷ ಆರ್. ಕಿರಣ್‌ಕುಮಾರ್, ಮಹಾನಗರ ಪಾಲಿಕೆ ಸದಸ್ಯರು ಹಾಗೂ ಕ್ಲಬ್ಬಿನ ಉಪಾಧ್ಯಕ್ಷ ಗಡಿಗುಡಾಳ್ ಮಂಜುನಾಥ್, ವಿಜಯಕುಮಾರ್ ಆರ್. ವೀರೇಶ್, ಎಸ್.ಎಲ್. ಪ್ರಸನ್ನ, ಆರ್. ದರ್ಶನ್, ಸಚಿನ್ ಘಾಟ್ಗೆ ಮತ್ತಿತರರು ಶುಭ ಕೋರಿದ್ದಾರೆ.

## ಇಂದು ಹೆಬ್ಬಾಳು ಶ್ರೀ ಮಹಾರುದ್ರ ಸ್ವಾಮಿಗಳವರ ಪುರಾಣ ಸಮಾರೋಪ



ಕಳೆದ ಜನವರಿ 12 ರಿಂದ ಒಂದು ತಿಂಗಳ ಪರ್ಯಂತ ಹೆಬ್ಬಾಳು ವಿರಕ್ತಮಠದ ಶ್ರೀ ಗುರು ಶಿವಯೋಗಿ ಮಹಾರುದ್ರ ಮಹಾಸ್ವಾಮಿಗಳವರ ಪುರಾಣ - ಪ್ರವಚನ ನಡೆದಿದ್ದು, ಇಂದು ಸಂಜೆ 6.30 ಗಂಟೆಗೆ ನಗರದ ಚೌಕಿಪೇಟೆಯ ಶ್ರೀ ಗುರು ಶಿವಯೋಗಿ ಬಕ್ಕೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಸಮಾರೋಪಗೊಳ್ಳಲಿದೆ.

ಪ್ರತಿವರ್ಷದಂತೆ ಈ ವರ್ಷವೂ ಪುರಾಣ - ಪ್ರವಚನವನ್ನು ಏರ್ಪಡಿಸಲಾಗಿದ್ದು, ಪಂಡಿತ ಶ್ರೀ ಪುಟ್ಟರಾಜ ಕವಿ ಗವಾಯಿಯವರ ಶಿಷ್ಯರಾದ ಕಲ್ಬುರ್ಗಿ ಸಂಸ್ಥಾನ ಹಿರೇಮಠದ ಶ್ರೀ ಬಂಡಯ್ಯ ಶಾಸ್ತ್ರಿಗಳು ಪ್ರವಚನವನ್ನು ನಡೆಸಿಕೊಟ್ಟಿದ್ದು, ಈ ವರ್ಷ 48ನೇ ವರ್ಷದ ಪ್ರವಚನವಾಗಿದೆ ಎಂದು ಸಂಚಾಲಕರಾದ ಅಜ್ಜಂಪುರ ಶೆಟ್ರು ಮೃತ್ಯುಂಜಯ, ರುದ್ರೇಶ್ ಮತ್ತು ಸಿ.ಕೆ. ಬಸವರಾಜಪ್ಪ ಕೋರಿದ್ದಾರೆ.


### ಹೃದಯಪೂರ್ವಕ ಕೃತಜ್ಞತೆಗಳು

ನನ್ನ ಹುಟ್ಟುಹಬ್ಬಕ್ಕೆ ಶುಭಕೋರಿ ಆಶೀರ್ವದಿಸಿ ಹಾರೈಸಿದ ಗುರು-ಹಿರಿಯರಿಗೂ ಮತ್ತು ನನ್ನೆಲ್ಲಾ ಸ್ನೇಹಿತರಿಗೂ ಹಾಗೂ ಬಂಧುಗಳಿಗೂ ಹೃದಯಪೂರ್ವಕ ಕೃತಜ್ಞತೆಗಳು.



ಶ್ರೀ ಎಂ.ಈ. ಮೌನೇಶ್ವರಚಾರಿ
ಕೆಪಿಸಿಸಿ ಕರಕುಶಲ ಕರ್ಮಿಗಳ ಜಿಲ್ಲಾ ಅಧ್ಯಕ್ಷರು, ದಾವಣಗೆರೆ.
ಹಾಗೂ ಮುದಹದಡಿ ಗ್ರಾಮ ಪಂಚಾಯ್ತಿ ಹಾಲಿ ಸದಸ್ಯರು
ಹದಡಿ ಜಿಲ್ಲಾ ಪಂಚಾಯಿತಿ ಕ್ಷೇತ್ರ ಪ್ರಬಲ ಸೇವಾ ಅಕಾಂಕ್ಷಿ

### ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್, ದಾವಣಗೆರೆ

### ಆಡಳಿತ ಮಂಡಳಿ ಚುನಾವಣೆ 2024

ಮಾನ್ಯ ಗೌರವಾನ್ವಿತ ಸದಸ್ಯರೇ,
ದಿನಾಂಕ 11.2.2024ರ ಭಾನುವಾರದಂದು ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಯಲ್ಲಿ ಮಾಗಾನಹಳ್ಳಿ ಜಯಣ್ಣನವರ ಮಗ ಎಂ.ಜೆ. ಗಿರೀಶ್ ಆದ ನಾನು ಚುನಾವಣೆಗೆ ನಾಮಪತ್ರ ಸಲ್ಲಿಸಿದ್ದೆನು. ಹಿರಿಯರ ಮಾತಿಗೆ ಮನ್ನಣೆ ನೀಡಿ ನಾನು ಇಂದು ನಾಮಪತ್ರವನ್ನು ಹಿಂಪಡೆದಿದ್ದೇನೆ. ಇಲ್ಲಿಯವರೆಗೂ ನನಗೆ ಸಹಕರಿಸಿದ ಬ್ಯಾಂಕಿನ ಸದಸ್ಯರಿಗೂ, ಮಿತ್ರರಿಗೂ, ಬಂಧುಗಳಿಗೂ, ಹಿತೈಷಿಗಳಿಗೂ ತುಂಬು ಹೃದಯದ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ. ತಮ್ಮ ಅಗಾಧವಾದ ಪ್ರೀತಿಗೆ ನಾನು ಸದಾಕಾಲ ಚಿರಋಣಿಯಾಗಿರುತ್ತೇನೆ. ಇದೇ ರೀತಿ ತಮ್ಮ ಪ್ರೀತಿ ವಿಶ್ವಾಸ ನನ್ನ ಮೇಲೆ ಸದಾ ಇರಲಿ ಎಂದು ಆಶಿಸುತ್ತಾ ಮತ್ತೊಮ್ಮೆ ಧನ್ಯವಾದಗಳನ್ನು ತಿಳಿಸುತ್ತಿದ್ದೇನೆ.



ತಮ್ಮ ಸೇವಾಕಾಂಕ್ಷಿ,
ಎಂ.ಜೆ. ಗಿರೀಶ್
ಮಾಲೀಕರು
ಶ್ರೀ ಬಕೇಶ್ವರ ಟ್ರೇಡರ್ಸ್
ಶಾಮನೂರು ರಸ್ತೆ, ದಾವಣಗೆರೆ.
ಮೊಬೈಲ್ ನಂ: 9886375874

### ಹೃದಯಪೂರ್ವಕ ಕೃತಜ್ಞತೆಗಳು



ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರನ್ನಾಗಿ ಮತ್ತು ಉಪಾಧ್ಯಕ್ಷರನ್ನಾಗಿ ನಮ್ಮನ್ನು ಅವಿರೋಧವಾಗಿ ಆಯ್ಕೆ ಮಾಡಲು ಸಹಕರಿಸಿದ ಮಾಜಿ ಸಚಿವರಾದ ಶ್ರೀ ಎಸ್.ಎ. ರವೀಂದ್ರನಾಥ, ಸಂಸದರಾದ ಶ್ರೀ ಜಿ.ಎಂ. ಸಿದ್ದೇಶ್ವರ ಅವರಿಗೆ ಬಿಜೆಪಿ ಪಕ್ಷದ ಎಲ್ಲಾ ಮುಖಂಡರಿಗೂ, ಬ್ಯಾಂಕಿನ ನಿರ್ದೇಶಕರಿಗೂ, ಸದಸ್ಯರಿಗೂ, ಸಿಬ್ಬಂದಿ ವರ್ಗದವರಿಗೂ ಹೃದಯಪೂರ್ವಕ ಕೃತಜ್ಞತೆಗಳು.




ಅಧ್ಯಕ್ಷರು
ಬಿ.ಎಸ್. ರಮೇಶ್
ಹೆಚ್ ಬಸಾಪುರ



ಉಪಾಧ್ಯಕ್ಷರು
ಎಂ.ಪಿ. ದೇವೇಂದ್ರಪ್ಪ
ಶ್ಯಾಗಲೆ

### ನಿಮಗೆ ಈ ಕೆಳಕಂಡ ಸಂಧಿವಾತದ ಲಕ್ಷಣಗಳಿವೆಯೇ ?



- ಕೈ ಕಾಲು ಗಂಟುಗಳಲ್ಲಿ ನೋವು ಮತ್ತು ಬಾವು ಇದೆಯೇ ?
- ನಿಮ್ಮ ಕೈ ಮತ್ತು ಕಾಲುಗಳ ಗಂಟುಗಳಲ್ಲಿ ವಿರೂಪ (Deformities)ಇದೆಯೇ ?
- ಬೆಳಿಗ್ಗೆ ಎದ್ದಾಗ ಸೊಂಟ ನೋವು ಮತ್ತು ಕತ್ತು ನೋವು ಇದೆಯೇ ?
- ಬೆನ್ನು ನೋವು ಮತ್ತು ಸೊಂಟ ನೋವಿನ ಜೊತೆಗೆ ಕಣ್ಣು ಕೆಂಪಾಗಿ ನೋಯುವುದೇ, ಅಥವಾ ಮಂಜಾಗಿ ಕಾಣುವುದೇ ?
- ಗಂಟು ನೋವಿನ ಕಾಯಿಲೆ ಇದನ್ನು ಪ್ರಾಥಮಿಕ ಹಂತದಲ್ಲಿಯೇ ಕಂಡು ಹಿಡಿದರೆ ನಿಯಂತ್ರಿಸಬಹುದು ವಿರೂಪ (Deformities) ಆದವರಿಗೆ ಮುಂದೆ ಆಗುವ ತೊಂದರೆಯನ್ನು ತಡೆಯಬಹುದು.

♣ RHEUMATOID ARTHRITIS
♣ ANKYLOSING SPONDYLITIS
♣ GOUT ♣ PSORATIC ARTHRITIS
♣ SLE

ಈ ಮೇಲ್ಕಂಡ ಲಕ್ಷಣಗಳ ಯಾವುದೇ ತೊಂದರೆ ಇದ್ದಲ್ಲಿ
ಡಾ. ಸೋಮಶೇಖರ್ (Rheumatologist) ಅವರು
ಫೆಬ್ರವರಿ 2024, 7ನೇ ತಾರೀಖು (ಬುಧವಾರ), 8ನೇ ತಾರೀಖು (ಗುರುವಾರ)
ಅನುಗ್ರಹ ಹಾಸ್ಪಿಟಲ್ ಫೋ.: 08192 222292
ಎಂ.ಸಿ.ಸಿ. 'ಬಿ' ಬ್ಲಾಕ್ ದಾವಣಗೆರೆಯಲ್ಲಿ ತಪಾಸಣೆಗೆ ಲಭ್ಯವಿರುತ್ತಾರೆ.


### 15ನೇ ವರ್ಷದ ಪುಣ್ಯಸ್ಮರಣೆ




ದಿ|| ಎಲ್.ಎಸ್. ಪ್ರಸನ್ನಕುಮಾರ್
ಲಿಂಗದಹಳ್ಳಿ, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ

ಇವರು ನಮ್ಮನ್ನಗಲಿ (05.02.2024) ಹದಿನಾಲ್ಕು ವರ್ಷಗಳಾದವು. ಕಾಲಚಕ್ರದಂತೆ ಉರುಳಿದ ವರ್ಷ ನಿಮ್ಮ ನೆನಪಲ್ಲೆ ಕಳೆದವು ವರ್ಷ. ನಿಮ್ಮ ಆದರ್ಶಮಯ ದಾರಿಯಲ್ಲೇ ನಡೆದೆವು ಕ್ಷಣಕ್ಷಣ ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಬೇಡುವ...

ಶ್ರೀಮತಿ ಲಲಿತ ಶಿವಮೂರ್ತಿ, ಶ್ರೀಮತಿ ಪುಷ್ಪ ಪ್ರಸನ್ನಕುಮಾರ್
ಎಲ್. ಸಿದ್ಧಾರ್ಥ ಪ್ರಸನ್ನಕುಮಾರ್, ಶ್ರೀಮತಿ ನೀಲು ಸಿದ್ಧಾರ್ಥ
ಪುಟಾಣಿ ಮೃದು ಸಿದ್ಧಾರ್ಥ, ಶ್ರೀಮತಿ ನಿರ್ಮಲ ಮಾರ್ಗದ ಪ್ರಕಾಶ್ ಮತ್ತು ಮಕ್ಕಳು
ಡಾ|| ಪ್ರೇಮ ಮತ್ತು ಇಂ|| ಎಲ್.ಎಸ್. ಪ್ರಭುದೇವ್ ಮತ್ತು ಮಕ್ಕಳು
ಶ್ರೀಮತಿ ರತ್ನಮ್ಮ ಸದಾಶಿವಪ್ಪ ಮತ್ತು ಮಕ್ಕಳು ಹಾಗೂ ಬಂಧು-ಮಿತ್ರರು, ಗೌಡ್ರ ವಂಶಸ್ಥರು, ಲಿಂಗದಹಳ್ಳಿ.



### ದಿ ದಾವಣಗೆರೆ ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿ. ದಾವಣಗೆರೆ

### ಆಡಳಿತ ಮಂಡಳಿ ಚುನಾವಣೆ 2024



ತಮ್ಮ ಸೇವಾಕಾಂಕ್ಷಿ
ಜಂಬಗಿ ರಾದೇಶ
ಜಿಎಸ್‌ಟಿ ಮತ್ತು ಆದಾಯ ತೆರಿಗೆ ಸಲಹೆಗಾರರು
ಮೊ : 94482 16089

ಮಾನ್ಯ ಸದಸ್ಯರಲ್ಲಿ ಮನವಿ,
ದಿನಾಂಕ 11.02.2024ರ ಭಾನುವಾರ ನಡೆಯಲಿರುವ ಬ್ಯಾಂಕಿನ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನದ ಚುನಾವಣೆಯಲ್ಲಿ
ಜಂಬಗಿ ರಾದೇಶ
ಆದ ನಾನು ಗುರು-ಹಿರಿಯರ ಹಾಗೂ ತಮ್ಮೆಲ್ಲರ ಆಶೀರ್ವಾದದೊಂದಿಗೆ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧಿಸುತ್ತಿದ್ದು, ಈ ಹಿಂದೆ ನಮ್ಮ ತಂದೆಯವರಾದ ದಿ. ಜಂಬಗಿ ಶರಣಪ್ಪನವರು ಬ್ಯಾಂಕಿನ ಅಧ್ಯಕ್ಷರಾಗಿ ಸರ್ವತೋಮುಖ ಶ್ರೇಯೋಭಿವೃದ್ಧಿ ಪಡಿಸಿರುತ್ತಾರೆ. ಅವರ ಮಗನಾದ ನಾನೂ ಸಹ ಅದೇ ಧ್ಯೇಯವನ್ನು ಇಟ್ಟುಕೊಂಡು ಬ್ಯಾಂಕಿನ ಸದಸ್ಯರ ಸರ್ವತೋಮುಖ ಏಳಿಗೆಗಾಗಿ ಶ್ರಮಿಸಲಿದ್ದು, ಇನ್ನೂ ಹೆಚ್ಚಿನ ಅಭಿವೃದ್ಧಿಗಾಗಿ ಉತ್ಸುಕನಾಗಿದ್ದೇನೆ.



ದಿ. ಜಂಬಗಿ ಶರಣಪ್ಪ

ಆದ್ದರಿಂದ ತಮ್ಮಗಳ ಸೇವೆ ಮಾಡುವ ಅವಕಾಶ ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಈ ನನ್ನ ಸ್ಪರ್ಧೆಗೆ ನಿಮ್ಮ ಅತಿ ಅಮೂಲ್ಯವಾದ ಮತವನ್ನು ನನಗೂ ಒಂದು ನೀಡಿ ನನ್ನನ್ನು ಪ್ರಚಂಡ ಬಹುಮತದಿಂದ ಆರಿಸಿ ನಿಮ್ಮೆಲ್ಲರ ಸೇವೆಯನ್ನು ಮಾಡಲು ಅವಕಾಶ ಮಾಡಿಕೊಡಬೇಕಾಗಿ ಪ್ರೀತಿಯಿಂದ ಕೇಳಿಕೊಳ್ಳುತ್ತೇನೆ.

| 10 | ಜಂಬಗಿ ರಾದೇಶ | | |
|---|---|---|---|

ದಯವಿಟ್ಟು ಸೀರಿಯಲ್ ನಂಬರ್ 10 ಕ್ಕೆ ಒಂದು ಮತ ಕೊಟ್ಟು ಜಯಶೀಲರನ್ನಾಗಿ ಮಾಡಿ.

ದಿನಾಂಕ 11.02.2024 ನೇ ಭಾನುವಾರ, ಸಮಯ : ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ,
ಸ್ಥಳ : ಮೋತಿ ವೀರಪ್ಪ ಕಾಲೇಜು ಆವರಣ, ದಾವಣಗೆರೆ.

### ದಿ ದಾವಣಗೆರೆ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಲಿ.,

### 2024-2029ನೇ ಅವಧಿಗೆ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ

ಬ್ಯಾಂಕಿನ ಷೇರುದಾರರಲ್ಲಿ ಮನವಿ

ದಿನಾಂಕ 11-02-2024ರ ಭಾನುವಾರ ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು, ಡಾ. ಎಂ.ಸಿ. ಮೋದಿ ವೃತ್ತದ ಬಳಿ, ದಾವಣಗೆರೆ ಇಲ್ಲಿ ನಡೆಯಲಿದ್ದು, ಶ್ರೀ ಬಿ.ಸಿ. ಉಮಾಪತಿ ಮತ್ತು ಶ್ರೀ ಕೋಗುಂಡಿ ಬಕ್ಕೇಶಪ್ಪ ಅವರುಗಳ ನೇತೃತ್ವದಲ್ಲಿ ನಾವುಗಳು ಬ್ಯಾಂಕಿನ ಆಡಳಿತ ಮಂಡಲಿ ಚುನಾವಣೆಗೆ ಸ್ಪರ್ಧಿಸಿದ್ದೇವೆ. ನಮಗೆ ತಮ್ಮ ಅತ್ಯಮೂಲ್ಯವಾದ ಮತವನ್ನು ನೀಡುವುದರ ಮೂಲಕ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಮತ್ತು ತಮ್ಮಗಳ ಸೇವೆ ಮಾಡಲು ಅವಕಾಶ ಕಲ್ಪಿಸಿಕೊಡಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

ಬ್ಯಾಲೆಟ್ ನಮೂನೆ

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಭಾವಚಿತ್ರ | ಅಭ್ಯರ್ಥಿಗಳ ಚಿಹ್ನೆ | |
|---|---|---|---|---|
| 2 | ಅಜ್ಜಂಪುರಶೆಟ್ರು ವಿಜಯಕುಮಾರ್ ಹಾಲಿ ನಿರ್ದೇಶಕರು | | | |
| 3 | ಉಮಾಪತಿ ಬಿ.ಸಿ. ಹಾಲಿ ನಿರ್ದೇಶಕರು | | | |
| 4 | ಅಂದನೂರು ಮುಪ್ಪಣ್ಣ ಹಾಲಿ ಉಪಾಧ್ಯಕ್ಷರು | | | |
| 5 | ಕೋಗುಂಡಿ ಬಕ್ಕೇಶಪ್ಪ ಹಾಲಿ ಅಧ್ಯಕ್ಷರು | | | |
| 6 | ಕಂಚಿಕೇರಿ ಮಹೇಶ್ ಹಾಲಿ ನಿರ್ದೇಶಕರು (ದಿ|| ಕಂಚಿಕೇರಿ ಕೊಟ್ರಬಸಪ್ಪನವರ ಮಗ) | | | |
| 9 | ಜಯರುದ್ರೇಶ್ ಟಿ.ಎಸ್. ಹಾಲಿ ನಿರ್ದೇಶಕರು (ದಿ|| ಟಿ.ಜಿ. ಷಡಾಕ್ಷರಪ್ಪನವರ ಮಗ) ನಂದಿ ಪೆಟ್ರೋಲ್ ಬಂಕ್ | | | |
| 11 | ದೇವರಮನಿ ಶಿವಕುಮಾರ್ ಹಾಲಿ ನಿರ್ದೇಶಕರು | | | |
| 12 | ಪಲ್ಲಾಗಟ್ಟಿ ಶಿವಾನಂದಪ್ಪ ಹಾಲಿ ನಿರ್ದೇಶಕರು | | | |
| 15 | ರುದ್ರಮುನಿಸ್ವಾಮಿ ಹೆಚ್.ಎಂ. ದೇವನಗರಿ ಗ್ಯಾಸ್ ಏಜೆನ್ಸಿ ಮಾಲೀಕರು (ಲಿಂ|| ವೇ|| ಶ್ರೀ ಹೆಚ್.ಎಂ. ಸೋಮನಾಥಯ್ಯನವರ ಮಗ) | | | |
| 17 | ಸೋಗಿ ಮುರುಗೇಶ್ ಹಿಂದುಳಿದ ವರ್ಗ 'ಪ್ರವರ್ಗ-ಬಿ' ಮೀಸಲು | | | |

ಸ್ಥಳ: ಮೋತಿ ವೀರಪ್ಪ ಸರ್ಕಾರಿ ಪದವಿ ಪೂರ್ವ ಕಾಲೇಜು, ಡಾ. ಎಂ.ಸಿ. ಮೋದಿ ವೃತ್ತದ ಬಳಿ, ದಾವಣಗೆರೆ
ದಿನಾಂಕ : 11-02-2024, ಭಾನುವಾರ
ಸಮಯ : ಬೆಳಿಗ್ಗೆ 9 ರಿಂದ ಸಂಜೆ 4 ರವರೆಗೆ

ತಮ್ಮ ಸೇವಾಕಾಂಕ್ಷಿಗಳು,
❖ ಅಜ್ಜಂಪುರಶೆಟ್ರು ವಿಜಯಕುಮಾರ್ ❖ ಉಮಾಪತಿ ಬಿ. ಸಿ. ❖ ಅಂದನೂರು ಮುಪ್ಪಣ್ಣ
❖ ಕೋಗುಂಡಿ ಬಕ್ಕೇಶಪ್ಪ ❖ ಕಂಚಿಕೇರಿ ಮಹೇಶ್ ❖ ಜಯರುದ್ರೇಶ್ ಟಿ. ಎಸ್. ❖ ದೇವರಮನಿ ಶಿವಕುಮಾರ್
❖ ಪಲ್ಲಾಗಟ್ಟಿ ಶಿವಾನಂದಪ್ಪ ❖ ರುದ್ರಮುನಿಸ್ವಾಮಿ ಹೆಚ್.ಎಂ. ❖ ಸೋಗಿ ಮುರುಗೇಶ್